ಕರ್ನಾಟಕ

# ಸ್ಕೌಟ್ ಮತ್ತು ಗೈಡ್

ಮಾಸ ಪತ್ರಿಕೆ

Karnataka

# Scout & Guide

Monthly Magazine

| Vol -66 | Issue -08 | August 2025 | Pages: 40 | Annual Subscription: ₹ 200/- |
|---|---|---|---|---|
| ಸಂಪುಟ: 66 | ಸಂಚಿಕೆ: 08 | ಆಗಸ್ಟ್ 2025 | ಪುಟಗಳು: 40 | ವಾರ್ಷಿಕ ಚಂದ ರೂ. 200/- |




2025ರ ಆಗಸ್ಟ್ 15ರಂದು ಬೆಂಗಳೂರಿನ ಮಾಣಿಕ್ ಷಾ ಪೆರೇಡ್ ಮೈದಾನದಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ನಡೆದ ರಾಜ್ಯ ಮಟ್ಟದ ಕವಾಯತು ಪ್ರದರ್ಶನದಲ್ಲಿ ರಾಜ್ಯ ಸಂಸ್ಥೆಯನ್ನು ಪ್ರತಿನಿಧಿಸಿದ ಬೆಂಗಳೂರಿನ ಆರ್.ಟಿ. ನಗರ ಪಬ್ಲಿಕ್ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ರಾಜ್ಯ ಮಟ್ಟದ ಪಥಸಂಚಲನ ಕಾರ್ಯಕ್ರಮದಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನವನ್ನು ಪಡೆದ ಪ್ರಯುಕ್ತ ತಂಡದ ನಾಯಕಿ ಕುಮಾರಿ ಉಮೈಮಾ ಅವರಿಗೆ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಂಸ್ಥೆಯ ಅಧ್ಯಕ್ಷರಾದ **ಶ್ರೀ ಸಿದ್ದರಾಮಯ್ಯನವರು** ಮತ್ತು ಮಾನ್ಯ ಉಪಮುಖ್ಯಮಂತ್ರಿಗಳಾದ **ಶ್ರೀ ಡಿ.ಕೆ. ಶಿವಕುಮಾರ್‌ರವರು** ಪಾರಿತೋಷಕವನ್ನು ನೀಡಿ ಅಭಿನಂದಿಸಿದರು. ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಡಾ|| ಶಾಲಿನಿ ರಜನೀಶ್‌ರವರು, ಭಾ.ಆ.ಸೇ., ಬೆಂಗಳೂರು ನಗರದ ಪೊಲೀಸ್ ಆಯುಕ್ತರಾದ ಶ್ರೀ ಸೀಮಂತ್ ಕುಮಾರ್ ಸಿಂಗ್, ಭಾ.ಪೊ.ಸೇ., ಇವರುಗಳು ಉಪಸ್ಥಿತರಿದ್ದರು.



ಆಗಸ್ಟ್ 22 ರಂದು ಸನ್ಮಾನ್ಯ ವಿಧಾನಸಭೆ ಅಧ್ಯಕ್ಷರು ಹಾಗೂ ಹೆಚ್ಚುವರಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಯು.ಟಿ. ಖಾದರ್ ರವರು ರಾಜ್ಯ ಕೇಂದ್ರ ಕಛೇರಿಗೆ ಬೇಟಿ ನೀಡಿ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳು ಮತ್ತು ಅಭಿವೃದ್ಧಿಯ ಬಗ್ಗೆ ಚರ್ಚಿಸಿದರು. ಮಾಜಿ ಸಚಿವರು ಮತ್ತು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಸ್ಕೌಟ್ಸ್ ಮತ್ತು ಗೈಡ್ಸ್ ಪ್ರಗತಿ, ಕಾರ್ಯಕ್ರಮ, ಚಟುವಟಿಕೆಗಳು ಮತ್ತು ಮುಂದಿನ ಕಾರ್ಯಕ್ರಮಗಳ ಬಗ್ಗೆ ವಿವರಣೆ ನೀಡಿ ಸಂಸ್ಥೆಯ ಬೆಳವಣಿಗೆಗೆ ಸಹಕಾರ ಮಾರ್ಗದರ್ಶನ ಕೋರಿದರು. ಈ ಸಂದರ್ಭದಲ್ಲಿ ಮಾಜಿ ವಿಧಾನ ಪರಿಷತ್ ಸದಸ್ಯರು ಹಾಗೂ ಸಹಾಯಕ ರಾಜ್ಯ ಆಯುಕ್ತರಾದ ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ ರವರು, ಕೇಂದ್ರ ಸ್ಥಾನಿಕ ಆಯುಕ್ತರುಗಳಾದ ಶ್ರೀ ಪಿ. ಪಳನಿ, ಶ್ರೀಮತಿ ಮುಕ್ತಾ ಬಿ. ಕಾಗಲಿ, ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪ ಗೌಡ ಹಾಗೂ ರಾಜ್ಯ ಸಂಸ್ಥೆಯ ವಿವಿಧ ಪದಾಧಿಕಾರಿಗಳು, ಬಿ.ಬಿ.ಎಂ.ಪಿ, ಬೆಂಗಳೂರು ದಕ್ಷಿಣ ಮತ್ತು  ಉತ್ತರ ಜಿಲ್ಲಾ ಪದಾಧಿಕಾರಿಗಳು ಹಾಗು ಕೇಂದ್ರ ಕಛೇರಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



2025ರ ಆಗಸ್ಟ್ 15 ರಂದು 79ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಶಾಲಾ ಶಿಕ್ಷಣ ಇಲಾಖೆ ಕಛೇರಿ ನೃಪತುಂಗರಸ್ತೆ ಆವರಣದಲ್ಲಿ ಡಾ॥ ಕೆ.ವಿ. ತ್ರಿಲೋಕ್‌ಚಂದ್ರ, ಭಾ.ಆ.ಸೇ., ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಅವರು ಧ್ವಜರೋಹಣವನ್ನು ನೆರವೇರಿಸಿ ಶುಭಕೋರಿದರು. ಈ ಸಂದರ್ಭದಲ್ಲಿ ಶ್ರೀ ಕೃಷ್ಣಾಜಿ ಎಸ್. ಕರಿಚೆಣ್ಣವರ, ನಿರ್ದೇಶಕರು (ಪ್ರೌಢ ಶಿಕ್ಷಣ), ಶ್ರೀ ಬಿ.ಎಸ್. ರಘುವೀರ್, ನಿರ್ದೇಶಕರು (ಮೈನಾರಿಟಿ), ಶ್ರೀಮತಿ ವಿಜಯ ಈ ರವಿಕುಮಾರ್, ಕ.ಆ.ಸೇ., ಜಂಟಿ ನಿರ್ದೇಶಕರು (ಆಡಳಿತ) ಮತ್ತು ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ವರ್ಗದವರು, ಸ್ಕೌಟ್ಸ್-ಗೈಡ್ಸ್ ರಾಜ್ಯ ಸಂಸ್ಥೆಯ ಸಿಬ್ಬಂದಿಗಳು, ಶ್ರೀ ಭಕ್ತೇಶ್, ರೋವರ್ ಸ್ಕೌಟ್ ಲೀಡರ್ ಮತ್ತು ಮಾಗಡಿ ರಸ್ತೆಯ ಬಿಬಿಎಂಪಿ ಪದವಿ ಪೂರ್ವ ಕಾಲೇಜಿನ ರೋವರ್ಸ್-ರೇಂಜರ್ಸ್‌ಗಳು ಭಾಗವಹಿಸಿದ್ದರು.

**ಪೋಷಕರು**
ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**
ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**
ಕೊಂಡಜ್ಜಿ ಬಿ. ಷಣ್ಮುಖಪ್ಪ

**ಉಪಾಧ್ಯಕ್ಷರು**
ಡಾ. ಎಂ.ಕೆ. ಶ್ರೀಧರ್

**ಸಂಪಾದಕರು**
ಕೆ. ಗಂಗಪ್ಪಗೌಡ

**ಸಹಸಂಪಾದಕರು**
ಎನ್. ಶ್ರೀನಿವಾಸನ್

**ಸದಸ್ಯರು**
ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ಮುಕ್ತಾ ಬಿ. ಕಾಗಲಿ

ಸಂಚಿಕೆಯ ವಾರ್ಷಿಕ ಚಂದಾ ರೂ. 200/-
ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 200/-

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು - 560 001
ಇಲ್ಲಿಗೆ ಕಳುಹಿಸಲು ಕೋರಿದೆ.



# ಕರ್ನಾಟಕ ಸ್ಕೌಟ್ ಮತ್ತು ಗೈಡ್
ಮಾಸಿಕ ವಾರ್ತಾಪತ್ರಿಕೆ

# KARNATAKA Scout & Guide
MONTHLY NEWS MAGAZINE

Vol: 66 Issue: 08 August 2025

## ಒಳಪುಟಗಳಲ್ಲಿ...

ರಾಜ್ಯ ಮುಖ್ಯ ಆಯುಕ್ತರ ನುಡಿ ...04
ಅಭಿನಂದನೆಗಳು ...05
ಸೆಪ್ಟೆಂಬರ್ 2025ರ ಕಾರ್ಯಕ್ರಮಗಳು ಮತ್ತು ತರಬೇತಿಗಳು ...06
ಸಂಪಾದಕೀಯ ...07
109th Birthday of Sri V.P. Deenadayalu Naidu ...08
79ನೇ ಸ್ವಾತಂತ್ರ್ಯ ದಿನಾಚರಣೆಯ ವರದಿ ...09
ರಾಜ್ಯ ಮಟ್ಟದ ರೋವರ್ಸ್-ರೇಂಜರ್ಸ್‌ಗಳ ಐತಿಹಾಸಿಕ ಸ್ಮಾರಕಗಳ ಪರಿಚಯ ಮತ್ತು ವೀಕ್ಷಣ ಶಿಬಿರ ...10
ಆಗಸ್ಟ್ 2025ರ ತಿಂಗಳ ಅವಧಿಯಲ್ಲಿ ನಿರ್ವಹಿಸಲ್ಪಟ್ಟ ರಾಜ್ಯ ಮಟ್ಟದ ಕಾರ್ಯಕ್ರಮಗಳು ಮತ್ತು ಆನ್ಲೈನ್ ಚಟುವಟಿಕೆಗಳ ವರದಿ ...11
ರಾಜ್ಯ ಮುಖ್ಯ ಆಯುಕ್ತರ ನೇತೃತ್ವದಲ್ಲಿ ಜುಲೈ-ಆಗಸ್ಟ್ 2025ರಲ್ಲಿ ನಿರ್ವಹಿಸಲ್ಪಟ್ಟ ಮುಖ್ಯ ಕಾರ್ಯಚಟುವಟಿಕೆಗಳು ...12
15th Asia Pacific Regional Conference (WAGGGS) ...18
ಜಿಲ್ಲಾ ವಾರ್ತೆಗಳು ...19
ಸ್ಕೌಟ್ಸ್ ಮತ್ತು ಗೈಡ್ಸ್ ಭಾತೃತ್ವ ಉಜ್ವಲಗೊಳಿಸುವ ರಾಕಿ ಹಬ್ಬ ...37
ಶ್ರದ್ಧಾಂಜಲಿ ...38

## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಸ್ಕೌಟ್ಸ್ ಮತ್ತು ಗೈಡ್ಸ್ ಸಾಹಿತ್ಯ ಪುಸ್ತಕಗಳನ್ನು ಓದಲು ಕೆಳಗಿನ Q.R. Code ಹಾಗೂ ಲಿಂಕ್‌ನ್ನು ಉಪಯೋಗಿಸಿ

https://archive.org/details/ServantsOfKnowledge?tab=collection&query=sng.*&sort=-addeddate

- ಸಂಪಾದಕರು



# ರಾಜ್ಯ ಮುಖ್ಯ ಆಯುಕ್ತರ ನುಡಿ

**ಸಮಸ್ತ ಸ್ಕೌಟ್ಸ್–ಗೈಡ್ಸ್ ಬಂಧುಗಳಿಗೆ ಶುಭಾಶಯಗಳು,**

ಗಣೇಶ ಚತುರ್ಥಿಯ ಹೃತ್ಪೂರ್ವಕ ಶುಭಾಶಯಗಳು. ರಾಜ್ಯದಾದ್ಯಂತ ನಮ್ಮ ಮಕ್ಕಳು ಮಣ್ಣಿನಿಂದ ತಯಾರಿಸಿದ ವೈವಿಧ್ಯಮಯ ಗಣೇಶ ಮೂರ್ತಿಗಳನ್ನು ನೋಡಿ ಸಂತೋಷವಾಗಿದೆ. ಇಂತಹ ಪರಿಸರಸ್ನೇಹಿ ಆಚರಣೆಗಳು ಸಂಪ್ರದಾಯವನ್ನು ಗೌರವಿಸುವುದಲ್ಲದೆ, ನಮ್ಮ ಪರಿಸರವನ್ನು ರಕ್ಷಿಸುವ ಬಗ್ಗೆ ಜಾಗೃತಿ ಮೂಡಿಸುತ್ತವೆ. ವಿಘ್ನವಿನಾಯಕನು ನಿಮಗೆಲ್ಲರಿಗೂ ಆರೋಗ್ಯ, ಸಮೃದ್ಧಿ ಮತ್ತು ಶ್ರೇಯೋಭಿವೃದ್ಧಿ ತರಲಿ. ಜೊತೆಗೆ ನಮ್ಮ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಗೆ ಹೊಸ ಶಕ್ತಿ, ಉತ್ಸಾಹ ಮತ್ತು ಸಾಧನೆಯ ಹಾದಿಯನ್ನು ತೋರಲಿ ಎಂದು ಹಾರೈಸುತ್ತೇನೆ.

ರಾಜ್ಯದ ಎಲ್ಲಡೆಗಳಲ್ಲೂ ನಮ್ಮ ಸಂಸ್ಥೆಯು ಸ್ವಾತಂತ್ರ್ಯ ದಿನಾಚರಣೆಯನ್ನು ಶ್ರದ್ಧಾಪೂರ್ವಕವಾಗಿ ಆಚರಿಸಿದೆ. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸರ್ಕಾರಿ ಕಾರ್ಯಕ್ರಮಗಳಲ್ಲಿ ನಮ್ಮ ಮಕ್ಕಳು ಪಥಸಂಚಲನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು, ಬಹುಮಾನಗಳು ಹಾಗೂ ಪ್ರಶಂಸೆಗಳಿಸಿರುವುದು ಅತ್ಯಂತ ಹೆಮ್ಮೆಯ ವಿಷಯವಾಗಿದೆ.

ವಿಶೇಷವಾಗಿ, ಬೆಂಗಳೂರಿನ ಮಾಣಿಕ್ ಷಾ ಮೈದಾನದಲ್ಲಿ ನಡೆದ ಸರ್ಕಾರಿ ಕಾರ್ಯಕ್ರಮದಲ್ಲಿ ಬೆಂಗಳೂರು ಉತ್ತರ ಜಿಲ್ಲೆಯ ಆರ್.ಟಿ. ನಗರ ಪಬ್ಲಿಕ್ ಶಾಲೆಯ ಮಕ್ಕಳು ಪಥಸಂಚಲನದಲ್ಲಿ ದ್ವಿತೀಯ ಬಹುಮಾನ ಪಡೆದಿದ್ದು, ಮಾನ್ಯ ಮುಖ್ಯಮಂತ್ರಿಗಳಿಂದ ಫಲಕ ಸ್ವೀಕರಿಸಿದ್ದು ಗರಿಮೆಯ ಕ್ಷಣವಾಗಿದೆ. ಇದಕ್ಕಾಗಿ ನಮ್ಮ ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕು ಸಂಸ್ಥೆಗಳ ಪದಾಧಿಕಾರಿಗಳು, ಶಿಕ್ಷಕರು ಹಾಗೂ ಭಾಗವಹಿಸಿದ ಎಲ್ಲರಿಗೆ ಅಭಿನಂದನೆಗಳು. ಜೊತೆಗೆ ಈ ಅವಕಾಶವನ್ನು ಕಲ್ಪಿಸಿದ ಸರ್ಕಾರಕ್ಕೆ, ಜಿಲ್ಲಾಡಳಿತಗಳಿಗೆ ಮತ್ತು ವಿಶೇಷವಾಗಿ ಶಿಕ್ಷಣ ಇಲಾಖೆಗೆ ಹೃದಯಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಆಗಸ್ಟ್ 01 ರಂದು ವಿಶ್ವ ಸ್ಕಾರ್ಫ್ ದಿನದ ಮೂಲಕ ಪ್ರಾರಂಭವಾದ ಈ ಮಾಸವು ಸ್ಕೌಟ್ ಮತ್ತು ಗೈಡ್ಸ್‌ಗೆ ಸಂಬಂಧಿಸಿದಂತೆ, ಅರ್ಥಪೂರ್ಣ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳಿಂದ ತುಂಬಿದ್ದು, ವಿಶೇಷವಾಗಿತ್ತು.

ಈ ತಿಂಗಳಲ್ಲಿ ನಾನು ಬೆಳಗಾವಿ, ಚಾಮರಾಜನಗರ, ದಾವಣಗೆರೆ, ಶಿವಮೊಗ್ಗ ಮತ್ತು ಚಿತ್ರದುರ್ಗ ಸೇರಿದಂತೆ ಹಲವು ಜಿಲ್ಲೆಗಳಿಗೆ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಭೇಟಿ ನೀಡಿದ್ದು, ಆ ಎಲ್ಲಾ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳು ಮಾದರಿ ಚಟುವಟಿಕೆಗಳನ್ನು ನಡೆಸುತ್ತಿರುವುದನ್ನು ಕಂಡು ಹೆಮ್ಮೆಯ ಅನುಭವವಾಯಿತು.

ಶಾಲೆಗಳಿಗೆ ನನ್ನ ನೇರ ಭೇಟಿಯ ಭಾಗವಾಗಿ, ಈ ತಿಂಗಳಲ್ಲಿ ಬೆಂಗಳೂರು ದಕ್ಷಿಣ ಮತ್ತು ಉತ್ತರ ಜಿಲ್ಲೆಗಳ ಕೆಲವು ಶಾಲೆಗಳಿಗೆ ಭೇಟಿ ನೀಡಿ, ಅಲ್ಲಿನ ಆಡಳಿತ ಮಂಡಳಿ ಮತ್ತು ಶಿಕ್ಷಕರೊಂದಿಗೆ ಸ್ಕೌಟಿಂಗ್–ಗೈಡಿಂಗ್ ಅಗತ್ಯತೆ ಕುರಿತು ಉತ್ಸಾಹಭರಿತ ಚರ್ಚೆಗಳಾದವು. ಇದರಿಂದ ಶಾಲಾಮಟ್ಟದಲ್ಲಿ ಸ್ಕೌಟಿಂಗ್‌ಗೆ ಹೊಸ ಬೆಂಬಲ ಮತ್ತು ದೃಷ್ಟಿಕೋನ ದೊರಕುತ್ತಿದೆ ಎಂಬ ಆಶಾಭಾವನೆ ಮೂಡಿದೆ.

ಶಿವಮೊಗ್ಗದಲ್ಲಿ ನಿರಂತರ 42 ವರ್ಷಗಳ ಭಾತೃತ್ವ ಮತ್ತು ಸೇವೆಯಲ್ಲಿ ತೊಡಗಿಸಿಕೊಂಡಿರುವ ಮಲ್ನಾಡ್ ಮುಕ್ತದಳದ ವತಿಯಿಂದ ಆಯೋಜಿಸಲಾಗಿದ್ದ 'ಗೀತಭಾರತಿ' ದೇಶಭಕ್ತಿ ಗೀತೆಗಳ ಗಾಯನ ಕಾರ್ಯಕ್ರಮ ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯಲ್ಲಿರುವ ಮಿತ್ರ ಅಕಾಡೆಮಿಯಲ್ಲಿ ನಡೆದ ಗೀತಗಾಯನ ಸ್ಪರ್ಧೆ ಮತ್ತು ಹೊಸದಾಗಿ ರೋವರ್ಸ್–ರೇಂಜರ್ಸ್ ಘಟಕದ ಉದ್ಘಾಟನಾ ಸಮಾರಂಭ ಹಾಗೂ ಕೋಲಾರದಲ್ಲಿ ನಡೆದ ಯುವಕರ ಕೌಶಲಾಭಿವೃದ್ಧಿಗೆ ಒತ್ತು ನೀಡುವ ಶಿಬಿರಗಳಲ್ಲಿ ಭಾಗವಹಿಸಿದ್ದು ನನಗೆ ಸಂತೋಷ ತಂದಿದೆ. ಈ ಎಲ್ಲಾ ಕಾರ್ಯಕ್ರಮಗಳು ಸ್ಕೌಟಿಂಗ್ ಚಟುವಟಿಕೆಗಳಿಗೆ ಹೊಸ ಉತ್ಸಾಹ ಮತ್ತು ದಿಕ್ಕನ್ನು ನೀಡಿವೆ.

ಬೆಳಗಾವಿಗೆ ನೀಡಿದ ನನ್ನ ಭೇಟಿ ವಿಶೇಷವಾಗಿತ್ತು. ಈ ಸಂದರ್ಭದಲ್ಲಿ ನಾನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಮತ್ತು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯಗಳ ಉಪಕುಲಪತಿಗಳು ಹಾಗೂ ಜಿಲ್ಲಾ ಪಂಚಾಯ್ತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳೊಂದಿಗೆ ನಡೆದ ಭೇಟಿ ಮತ್ತು ಚರ್ಚೆ ಫಲಪ್ರದವಾಗಿವೆ. ಇದು ಉನ್ನತ ಶಿಕ್ಷಣ ಹಂತದಲ್ಲಿಯೂ ಸ್ಕೌಟಿಂಗ್ ಮತ್ತು ಗೈಡಿಂಗ್ ಘಟಕಗಳನ್ನು ಸ್ಥಾಪಿಸುವ ಕುರಿತು ಆಶಾಭಾವನೆ ಮೂಡಿಸಿದೆ.

ನಮ್ಮ ರಾಜ್ಯದಲ್ಲಿ ಸರ್ಕಾರ ಹಾಗೂ ಶಿಕ್ಷಣ ಇಲಾಖೆ ನೀಡುತ್ತಿರುವ ಸದೃಢ ಸಹಕಾರ ಮತ್ತು ಪ್ರೋತ್ಸಾಹದ ಹಿನ್ನೆಲೆಯಲ್ಲಿ ಸ್ಕೌಟಿಂಗ್ ಮತ್ತು ಗೈಡಿಂಗ್ ಚಟುವಟಿಕೆಗಳು ಇನ್ನಷ್ಟು ಸಕ್ರಿಯವಾಗಬೇಕು ಎಂಬುದು ನಮ್ಮ ದೃಢ ಆಶಯವಾಗಿದೆ. ಹೊಸ ಪೀಳಿಗೆಗೆ ಉತ್ಸಾಹವನ್ನು ತುಂಬುವ ರೀತಿಯಲ್ಲಿ ತರಬೇತಿ, ಶಿಬಿರಗಳು ಮತ್ತು ಸಾಮಾಜಿಕ ಸೇವಾ ಕಾರ್ಯಕ್ರಮಗಳು ಉತ್ತಮವಾಗಿ ನಡೆಯಲೆಂದು ಆಶಿಸುತ್ತೇನೆ.

ಸೆಪ್ಟೆಂಬರ್ 5 ಶಿಕ್ಷಕರ ದಿನಾಚರಣೆ, ಮಕ್ಕಳ ಮನಸ್ಸಿನಲ್ಲಿ ಜ್ಞಾನ ಮತ್ತು ಮೌಲ್ಯಗಳನ್ನು ಬೆಳೆಸುವಲ್ಲಿ ಶಿಕ್ಷಕರುಗಳ ಪಾತ್ರ ದೊಡ್ಡದು. ಅವರ ಪ್ರೀತಿ ಮತ್ತು ತ್ಯಾಗವು ನಮ್ಮ ರಾಷ್ಟ್ರದ ಭವಿಷ್ಯವನ್ನು ರೂಪಿಸುವುದಾಗಿದೆ. ಈ ಹಿನ್ನೆಲೆಯಲ್ಲಿ ಶಿಕ್ಷಕರ ದಿನಾಚರಣೆಯ ಸಂದರ್ಭದಲ್ಲಿ, ಪ್ರತಿಯೊಬ್ಬ ಶಿಕ್ಷಕರಿಗೂ ನಮ್ಮ ರಾಜ್ಯ ಸಂಸ್ಥೆಯ ಪರವಾಗಿ ಮತ್ತು ವೈಯಕ್ತಿಕವಾಗಿ ಹೃತ್ಪೂರ್ವಕ ಅಭಿನಂದನೆಗಳು ಮತ್ತು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

**ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳೊಂದಿಗೆ,**

ತಮ್ಮ ವಿಶ್ವಾಸಿ



(ಪಿ.ಜಿ.ಆರ್. ಸಿಂಧ್ಯ)
ರಾಜ್ಯ ಮುಖ್ಯ ಆಯುಕ್ತರು

ಆಹಾರ ದೈವಿಕ ಸಂಪತ್ತು, ಅದನ್ನು ಸಂರಕ್ಷಿಸೋಣ
ಆಹಾರವನ್ನು ಉಳಿಸಿ, ಭವಿಷ್ಯವನ್ನು ಕಾಪಾಡಿ!

## ಹೃತ್ಪೂರ್ವಕ ಅಭಿನಂದನೆಗಳು




ರಾಷ್ಟ್ರಕ್ಕೆ ಮೌಲ್ಯಾಧಾರಿತ ರಾಜಕಾರಣದ ಮಾದರಿ ನೀಡಿದ ಜನಪ್ರಿಯ ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ಶ್ರೀ ರಾಮಕೃಷ್ಣ ಹೆಗ್ಗಡೆ ಅವರ ಜನ್ಮದಿನದ ಅಂಗವಾಗಿ ಮೌಲ್ಯಾಧಾರಿತ **'ಕಾಯಕಶ್ರೀ ಪ್ರಶಸ್ತಿ'ಗೆ** ಭಾಜನರಾದ ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟ ಮತ್ತು ಮಾಜಿ ಸಚಿವರಾದ **ಶ್ರೀ ಪಿ.ಜಿ.ಆರ್. ಸಿಂಧ್ಯಾ** ಅವರನ್ನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

ಶ್ರೀ ರಾಮಕೃಷ್ಣ ಹೆಗ್ಗಡೆ ಅವರ ಮಂತ್ರಿಮಂಡಲದಲ್ಲಿ ಸಚಿವರಾಗಿ, ಅವರ ಆಪ್ತ ಬಳಗದಲ್ಲಿ ವಿಶಿಷ್ಟ ಸ್ಥಾನ ಪಡೆದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಅವರಿಗೆ ದೊರೆತ ಈ ಗೌರವವು ನಮ್ಮೆಲ್ಲರಿಗೂ ಹಾಗೂ ನಮ್ಮ ಸಂಸ್ಥೆಗೆ ಅಪಾರ ಹೆಮ್ಮೆ ನೀಡುವ ಸಂಗತಿಯಾಗಿದೆ.

## ಅಭಿನಂದನೆಗಳು



ಶಿವಮೊಗ್ಗ ಮಲ್ನಾಡ್ ಓಪನ್ ಗ್ರೂಪ್‌ನಲ್ಲಿ ಹಲವಾರು ವರ್ಷಗಳು ಸ್ಕೌಟ್ ಆಗಿದ್ದು 2016ರಲ್ಲಿ ರಾಷ್ಟ್ರಪತಿಗಳಾದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರಿಂದ ರಾಷ್ಟ್ರಪತಿ ಸ್ಕೌಟ್ ಪುರಸ್ಕಾರವನ್ನು ಪಡೆದಿದ್ದ **ಡಾ. ಎಲ್. ದಯಾನಂದ ಸಾಗರ್** ಅವರು 2025ನೇ ಸಾಲಿನಲ್ಲಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ 615ನೇ ರ್‍ಯಾಂಕ್ ಪಡೆದು ಭಾರತೀಯ ವಿದೇಶಾಂಗ ಸೇವೆಗೆ ಆಯ್ಕೆಯಾಗಿ ಉತ್ತರಾಖಂಡದ ಡೆಹ್ರಾಡೂನ್ ಬಳಿ ಇರುವ ಮಸ್ಸೂರಿಯಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಶ್ರೀಯುತರು ತಾವು ವಿದ್ಯಾರ್ಥಿಯಾಗಿದ್ದಾಗ ಸ್ಕೌಟಿಂಗ್ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ರಾಷ್ಟ್ರಪತಿ ಪ್ರಶಸ್ತಿ ಪಡೆದ ನಂತರ ಇವರು ಎಂ.ಬಿ.ಬಿ.ಎಸ್. ವಿದ್ಯಾಭ್ಯಾಸ ಮುಗಿಸಿ ವೈದ್ಯಕೀಯ ವೃತ್ತಿಯ ಸಂದರ್ಭದಲ್ಲಿ ಸಹಾ ಸ್ಕೌಟ್ಸ್ ಚಟುವಟಿಕೆಗಳಲ್ಲಿ ಭಾಗವಹಿಸಿ ಕಿರಿಯರಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಇವರು ತಾವು ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತಮ ರ್‍ಯಾಂಕ್ ಪಡೆದಿರುವುದಕ್ಕೆ ಪ್ರಮುಖವಾಗಿ ಸ್ಕೌಟ್ ಚಟುವಟಿಕೆಗಳು ಕಾರಣ ಎಂದು ಅಬಿಮಾನದಿಂದ ತಿಳಿಸಿರುವರು. ಶ್ರೀಯುತರಿಗೆ ರಾಜ್ಯ ಸಂಸ್ಥೆಯಿಂದ ಹೃದಯಪೂರ್ವಕ ಅಭಿನಂದನೆಗಳು.




– ರಾಜ್ಯ ಕಾರ್ಯದರ್ಶಿ

# ಸೆಪ್ಟೆಂಬರ್ 2025ರ ಕಾರ್ಯಕ್ರಮಗಳು ಮತ್ತು ತರಬೇತಿಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 1 | ಶಿಕ್ಷಕರ ದಿನಾಚರಣೆ ಡಾ. ರಾಧಾಕೃಷ್ಣನ್ ಹುಟ್ಟುಹಬ್ಬ | ಸೆಪ್ಟೆಂಬರ್ 05 | ಎಲ್ಲಾ ಹಂತಗಳಲ್ಲಿ |
| 2 | ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆ | ಸೆಪ್ಟೆಂಬರ್ 17 | ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ |
| 3 | 45ನೇ ರಾಜ್ಯ ಮಟ್ಟದ ಕಬ್ ಮತ್ತು ಬುಲ್‌ಬುಲ್ ಉತ್ಸವ | ಸೆಪ್ಟೆಂಬರ್ 20 ರಿಂದ 23ರ ವರೆಗೆ | ಉಡುಪಿ |
| 4 | ವಿಶ್ವಶಾಂತಿ ದಿನಾಚರಣೆ (ಕರಾವಳಿ ತೀರ ಸ್ವಚ್ಛತೆ ಅಭಿಯಾನ) | ಸೆಪ್ಟೆಂಬರ್ 21 | ಕರಾವಳಿ ಜಿಲ್ಲೆಗಳಲ್ಲಿ |
| 5 | ಹಿಮಾಲಯ ವುಡ್‌ಬ್ಯಾಡ್ಜ್ ತರಬೇತಿ ಶಿಬಿರ – | ಸೆಪ್ಟೆಂಬರ್ 24 ರಿಂದ 30ರ ವರೆಗೆ | ಡಾ. ಅನಿಬೆ ಸೆಂಟ್ ತರಬೇತಿ ಕೇಂದ್ರ ದೊಡ್ಡಬಳ್ಳಾಪುರ |
| 6 | ಜಿಲ್ಲಾ ಮುಖ್ಯ ಆಯುಕ್ತರು, ಜಿಲ್ಲಾ ಕಾರ್ಯದರ್ಶಿ, ಲೀಡರ್ ಟ್ರೈನರ್‌ಗಳ ಉತ್ತಮ ಸೇವೆಯನ್ನು ಪರಿಗಣಿಸಿ ರಾಜ್ಯಪಾಲರಿಂದ ಸನ್ಮಾನ ಸಮಾರಂಭ | ಸೆಪ್ಟೆಂಬರ್ 26 | ಗಾಜಿನ ಮನೆ, ರಾಜಭವನ, ಬೆಂಗಳೂರು |
| 7 | ರಾಜ್ಯ ಕಾರ್ಯಕಾರಿ ಸಮಿತಿ ಸಭೆ | ಸೆಪ್ಟೆಂಬರ್ 26 | |
| 8 | ಯುವ ಅಪದ್‌ಮಿತ್ರ ಸ್ವಯಂ ಸೇವಕರ ತರಬೇತಿ (ವಿಪತ್ತು ನಿರ್ವಹಣಾ ತರಬೇತಿ) ರೋವರ್ಸ್–ರೇಂಜರ್ಸ್ | ಸೆಪ್ಟೆಂಬರ್ 7 ರಿಂದ 13 13ರ ವರೆಗೆ | ಜಿಲ್ಲಾ ತರಬೇತಿ ಕೇಂದ್ರ ಉಡುಪಿ |
| 9 | ಯುವ ಅಪದ್‌ಮಿತ್ರ ಸ್ವಯಂ ಸೇವಕರ ತರಬೇತಿ (ವಿಪತ್ತು ನಿರ್ವಹಣಾ ತರಬೇತಿ) ರೋವರ್ಸ್–ರೇಂಜರ್ಸ್ | ಸೆಪ್ಟೆಂಬರ್ 14 ರಿಂದ 20 20ರ ವರೆಗೆ | ಸ್ಥಳ: ಜಿಲ್ಲಾ ತರಬೇತಿ ಕೇಂದ್ರ, ಪಿಲಿಕುಳ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ |
| 10 | ಸ್ಕೌಟ್ ಸ್ಕಿಲೋ ಕಾರ್ಯಕ್ರಮ (ಆನ್‌ಲೈನ್) | ಪ್ರತಿ ಭಾನುವಾರ | ಬೆಳಿಗ್ಗೆ 11 ಗಂಟೆಗೆ |

## Hearty Congratulations




**Sri M.A. Khalid,** State Commissioner (S), The Bharat Scouts & Guides, Karnataka is unanimously elected as Secretary General of South Asian Association of National Scout Organisations for 3 years term in the recently held SAANSO conference in Srilanka. Hon'ble Vijitha Herath Minister for Foreign Affairs of Srilanka handing over the SG medallion

# ಸಂಪಾದಕೀಯ



ಮಾನ್ಯರೆ,

Knowledge is power, Ideas rule the World - ಜ್ಞಾನವೇ ಅಪಾರ ಶಕ್ತಿ, ಚಿಂತನೆಗಳು ಪ್ರಪಂಚವನ್ನು ಆಳುತ್ತವೆ ಎಂಬ ಮಾತು ವಿದ್ಯಾರ್ಥಿಗಳು ಹೆಚ್ಚು ಜ್ಞಾನಾರ್ಜನೆಗೆ ಆದ್ಯತೆ ಕೊಡುವಲ್ಲಿ ಮತ್ತು ತನ್ಮೂಲಕ ಅವರು ಉತ್ತಮ ಮಟ್ಟದ ಚಿಂತನೆಗಳನ್ನು ಹೊಂದಿ ಅವರ ಅಮೂಲ್ಯ ಬದುಕನ್ನು ಸಾರ್ಥಕಗೊಳಿಸುವಲ್ಲಿ, ಗುಣಾತ್ಮಕ ಶಿಕ್ಷಣಾಸಕ್ತರೆಲ್ಲರೂ ಪ್ರೇರೇಪಿಸುವಲ್ಲಿ ಕ್ರಮಗಳನ್ನು ಕೈಗೊಳ್ಳುವುದು ಅತ್ಯಗತ್ಯ ಆಗಿರುವುದು. ಈ ಬಗ್ಗೆ ಭಾರತ್ ಸ್ಕೌಟ್ಸ್–ಗೈಡ್ಸ್ ಚಳುವಳಿಯು ಸ್ಪಷ್ಟ ಧ್ಯೇಯೋದ್ದೇಶಗಳನ್ನು ಹೊಂದಿದು, ಅವುಗಳ ಸಮರ್ಪಕ, ಸಮರ್ತ ನಿರ್ವಹಣೆಯಲ್ಲಿ ಬಹಳಷ್ಟು ಶ್ರಮಿಸುತ್ತಿರುವುದು ಸರಿಯಷ್ಟೆ. ಹೀಗೆ ನಿರ್ವಹಿಸುವಲ್ಲಿ ಆಯಾಯ ವರ್ಷದ ವಾರ್ಷಿಕ ಯೋಜನೆಯನ್ನು ಹಲವು ರೀತಿಯ, ಹಲವರೊಂದಿನ ಚಿಂತನ–ಮಂಥನಗಳೊಂದಿಗೆ ಯೋಜಿಸಿ, ಯೋಚಿಸಿ, ಮಾಸಿಕವಾರು ನಿರ್ಧರಿಸಿ, ಅದರಂತೆ ನಿರ್ವಹಣೆ ಆಗುತ್ತಿರುವುದು ಗಮನಾರ್ಹ. ಭಾರತ್ ಸ್ಕೌಟ್ಸ್–ಗೈಡ್ಸ್ ಚಳವಳಿಯ ವಾರ್ಷಿಕ ಯೋಜನಾ ಕಾರ್ಯಕ್ರಮಗಳಂತೆ ಆಗಸ್ಟ್ 25ರಲ್ಲಿ ಈ ಕೆಳಕಂಡ ಮುಖ್ಯ ಕಾರ್ಯಚಟುವಟಿಕೆಗಳು ಯಶಸ್ವಿಯಾಗಿ ನಿರ್ವಹಣೆ ಆಗಿ ಸಾರ್ಥಕತೆ ಹೊಂದುವಲ್ಲಿ ಶ್ರಮಿಸಿರುವ ಸರ್ವರಿಗೂ ಅನಂತಾನಂತ ಅಭಿನಂದನೆಗಳನ್ನು ತಿಳಿಸಬಯಸುತ್ತೇನೆ.

1) ವಿಶ್ವ ಸ್ಕಾರ್ಫ್ ದಿನಾಚರಣೆ
2) ಅಂತರಾಷ್ಟ್ರೀಯ ಬುಡಕಟ್ಟು ದಿನಾಚರಣೆ
3) 79ನೇ ಸ್ವಾತಂತ್ರ್ಯ ದಿನಾಚರಣೆ
4) ದಿವಂಗತ ವಿ.ಪಿ.ದೀನದಯಾಳು ನಾಯ್ಡುರವರ ಜನ್ಮ ದಿನಾಚರಣೆ
5) ಸದ್ಭಾವನಾ ದಿನಾಚರಣೆ ಹಾಗೂ ರಾಜೀವ್‌ಗಾಂಧಿರವರ ಜನ್ಮ ದಿನಾಚರಣೆ
6) ಪರಿಸರ ಗಣಪತಿ ತಯಾರಿಸುವುದು ಹಾಗೂ ಪರಿಸರ ಗಣಪತಿ ಹಬ್ಬ ಆಚರಣೆ.
7) ಮೂಲ ತರಬೇತಿಗಳನ್ನು ಮತ್ತು ಪ್ರಾರಂಭಿಕ ಶಿಬಿರಗಳ ನಿರ್ವಹಣೆ
8) Scout Skillo - ವಾರಕ್ಕೊಮ್ಮೆಯ ಕಾರ್ಯಕ್ರಮದಡಿ ನಿರ್ವಹಿಸಲ್ಪಟ್ಟ್
   ಅ) ಪರಿಸರ ಗಣಪತಿ – ಪರಿಸರ ಸ್ನೇಹಿ ಗಣಪತಿ ತಯಾರಿಕೆ ಮಾರ್ಗದರ್ಶನ ಶಿಬಿರ
   ಆ) ಪೌಷ್ಠಿಕಾಂಶ ಶಿಕ್ಷಣ ಪ್ರಾವಿಣ್ಯತಾ ಪದಕ ಶಿಬಿರ
   ಇ) ಪತ್ರಕರ್ತ ಪ್ರಾವಿಣ್ಯತಾ ಪದಕ ಶಿಬಿರ
   ಈ) ಕ್ಯಾನ್ಸರ್ ಅರಿವು ಪ್ರಾವಿಣ್ಯತಾ ಪದಕ ಶಿಬಿರ

ಮೇಲ್ಕಂಡ ಎಲ್ಲಾ ಕಾರ್ಯಚಟುವಟಿಕೆಗಳು, ಆನ್‌ಲೈನ್ ಮಾಹಿತಿ ಶಿಬಿರಗಳು, ಸಭೆ–ಸಮಾರಂಭಗಳು, ತರಬೇತಿಗಳು, ವಿದ್ಯಾರ್ಥಿಗಳು ಆ ಬಗ್ಗೆ ತಮ್ಮ ಜ್ಞಾನಾರ್ಜನೆಯನ್ನು ಹೆಚ್ಚಿಸಿಕೊಂಡು ಸಮರ್ಥ ವಿದ್ಯಾರ್ಥಿಗಳಾಗಿ ಮುಂದುವರಿದು, ಸಾರ್ಥಕ ಬದುಕನ್ನು ನಿರ್ವಹಿಸುವಲ್ಲಿ ಬಹಳಷ್ಟು ಪ್ರೇರಕ ಆಗಿರುವುದು ಸುವೇದ್ಯ.

ಗುಣಮಟ್ಟ ಶಿಕ್ಷಣದ ಆಸಕ್ತಿಯಿರುವ ಎಲ್ಲರಲ್ಲೂ ಭಾರತ್ ಸ್ಕೌಟ್ಸ್–ಗೈಡ್ಸ್ ಚಳುವಳಿಯ ಧ್ಯೇಯೋದ್ದೇಶಗಳ ಅನುಷ್ಠಾನದಲ್ಲಿ ಬಹಳಷ್ಟು ಆಸಕ್ತಿ ಇದ್ದು, ಪ್ರೇರೇಪಿಸುತ್ತಿರುವುದು ಕಂಡು ಬಂದಾಗ್ಯೂ, ನಿರೀಕ್ಷಿತ ಮಟ್ಟದಲ್ಲಿ ಇದನ್ನು ಎಲ್ಲಾ ವಿದ್ಯಾರ್ಥಿಗಳಿಗೆ ಸಮರ್ಪಕವಾಗಿ, ಸಮರ್ಥವಾಗಿ, ತಲುಪಿಸುವಲ್ಲಿ ಇನ್ನೂ ಹೆಚ್ಚಿನ ಮಾರ್ಗೋಪಾಯಗಳ ಅನುಷ್ಠಾನ ಅತ್ಯಗತ್ಯ. ಅದರಂತೆ, ಸ್ಕೌಟ್–ಗೈಡ್ ಚಳವಳಿಯ ಕೆಳಕಂಡ ಭಾಗಿದಾರರುಗಳಲ್ಲಿ ಸೂಕ್ತ ಮಾನಸಿಕ ಬದಲಾವಣೆ (Change of Mindset) ಹೊಂದುವುದು, ಅಂತಹ ಮಾರ್ಗೋಪಾಯಗಳಲ್ಲಿ ಕೆಲವು ಎಂದು ನನ್ನ ಆಶಯ ಆಗಿರುವುದು.

**ಪೋಷಕರು:** ವಿದ್ಯಾರ್ಥಿಗಳ ತಂದೆ–ತಾಯಿಯರು ತಮ್ಮ ಮಕ್ಕಳು ಉದ್ಯೋಗಕ್ಕಾಗಿ ಮಾತ್ರ ಕಲಿಯಬೇಕು ಎಂಬುದನ್ನು ಪ್ರತಿಪಾದಿಸದೇ ಅವರ ವಿಶಿಷ್ಟ ಪ್ರತಿಭೆಗಳನ್ನು ಗುರುತಿಸಿ, ಅದು ಪ್ರಜ್ವಲ ಆಗುವಲ್ಲಿ ಆದ್ಯ ಗಮನ ಹರಿಸುವುದು ಅಗತ್ಯ. ಹೀಗೆ ಮಕ್ಕಳ ವಿಶಿಷ್ಠ ಪ್ರತಿಭೆಗಳ ಗುರುತಿಸುವಿಕೆ, ಪೂರಕ ಬೆಳವಣಿಗೆ ಸ್ಕೌಟ್ಸ್–ಗೈಡ್ಸ್‌ನಲ್ಲಿ ಸಕ್ರಿಯವಾಗಿ ಭಾಗವಹಿಸುವುದರಿಂದ ಎಂಬುದನ್ನು ಅವರು ಅರಿಯುವುದು.

**ವಿದ್ಯಾರ್ಥಿಗಳು:** ವಿದ್ಯಾರ್ಥಿಗಳು, ತಮ್ಮ ಸರ್ವಾಂಗೀಣ ಅಭಿವೃದ್ಧಿ ಅವರು ತಮ್ಮ ಪಠ್ಯ ಚಟುವಟಿಕೆಗಳಲ್ಲಿ ಪಡೆಯುವ ಅಂಕಗಳಿಗೆ ಸೀಮಿತ ಆಗಿದೆ ಎಂಬ ತಪ್ಪು ಕಲ್ಪನೆಯನ್ನು ಬದಿಗೊತ್ತಿ, ತಮ್ಮೆಲ್ಲ ದೈಹಿಕ, ಮಾನಸಿಕ, ಸಾಮಾಜಿಕ, ಆದ್ಯಾತ್ಮಿಕ, ಕಲಾತ್ಮಕ ಇತ್ಯಾದಿ ಶಕ್ತಿಗಳನ್ನು ಸಮರ್ಥವಾಗಿ ಬಳಸುವಲ್ಲಿ ಇದೆ ಎಂಬುದನ್ನು ಅರಿತು, ತನ್ನ ಸಮಯವನ್ನು ಈ ಎಲ್ಲಾ ತಮ್ಮ ಉತ್ತಮ ಸಾಮರ್ಥ್ಯಗಳನ್ನು ಸದುಪಯೋಗಪಡಿಸಿಕೊಳ್ಳುವಲ್ಲಿ (Making best use of Time) ಆದ್ಯ ಗಮನ ಹರಿಸುವುದು.

**ಶಿಕ್ಷಕ ವೃಂದ:** ಸ್ಕೌಟ್ಸ್–ಗೈಡ್ಸ್ ಶಿಕ್ಷಕರು/ ಉಪನ್ಯಾಸಕರುಗಳು ತಮ್ಮ ವಿದ್ಯಾರ್ಥಿಗಳಿಗೆ ಕೇವಲ ತರಗತಿಯಲ್ಲಿಯ ಪಠ್ಯ ವಿಷಯಗಳಿಗೆ ಬೋಧಕರಾಗಿರದೆ ಅವರ ಸರ್ವಾಂಗೀಣ ಅಭಿವೃದ್ಧಿಗೆ Mentor, Collaborator and Fecilitator ಆಗಿ ತಮ್ಮ ಪಾತ್ರ ನಿರ್ವಹಿಸುವುದು ಇಂದಿನ ಆದ್ಯತೆ ಆಗಬೇಕಾಗಿರುವುದು. ಇವರು ವಿದ್ಯಾರ್ಥಿಗಳಿಗೆ, ಬೋಧನಾ ವಿಷಯಗಳ ಅರ್ಥೈಸುವಿಕೆಗೆ ಮಾತ್ರ ತಮ್ಮನ್ನು ಸೀಮಿತಗೊಳಿಸಿಕೊಳ್ಳದೆ, ಅವರ ಸುವ್ಯವಸ್ಥಿತ ಬದುಕಿನ ಪರಿವರ್ತಕರಾಗಿ (Transformation of Life) ಪಾತ್ರವಹಿಸುವುದು ಅತ್ಯಗತ್ಯ. ಇವರ ಪಾತ್ರ ಕೇವಲ Content Expert ಆಗಿರದೇ Facilitator of real world skill ಆಗಿರಬೇಕಾದ್ದು ಮುಖ್ಯ.

ಸ್ಕೌಟ್ಸ್–ಗೈಡ್ಸ್ ಶಿಕ್ಷಣಾಸಕ್ತರು: ಇವರು ವಿದ್ಯಾರ್ಥಿಗಳು ಹೆಚ್ಚು–ಹೆಚ್ಚು ಜ್ಞಾನ ಹೆಚ್ಚಿಸಿಕೊಳ್ಳುವ ಸ್ಕೌಟ್ಸ್–ಗೈಡ್ಸ್ ಚಟುವಟಿಕೆಗಳಲ್ಲಿ ಭಾಗವಹಿಸುವಂತಾಗುವಲ್ಲಿ ಮತ್ತು ಅವರು ಕಲಿಕೆಯಲ್ಲಿ ಹೆಚ್ಚು ಆಸಕತಿ ಹೊಂದುವಂತಾಗುವಲ್ಲಿ, ಗುಣಮಟ್ಟದ ತರಬೇತಿಯನ್ನು ಶಿಕ್ಷಕರಿಗೆ/ ಉಪನ್ಯಾಸಕರಿಗೆ ನೀಡಿ, ಅವರಲ್ಲಿ ಉತ್ಸಾಹ ತುಂಬುದುದಲ್ಲದೆ ಅವರ ಅವಶ್ಯಕತೆಯನ್ನು ಆಧರಿಸಿ, ಅರ್ಹ ಪ್ರತಿಭಾವಂತ ತಜ್ಞರನ್ನು ಆಹ್ವಾನಿಸಿ, ಮಾರ್ಗದರ್ಶನ ಹೊಂದುವಲ್ಲಿ ಆದ್ಯ ಕ್ರಮಗಳನ್ನು ಕೈಗೊಳ್ಳುವುದು.

ಹೆಚ್ಚು–ಹೆಚ್ಚು ವಿದ್ಯಾರ್ತಿಗಳು ಸ್ಕೌಟ್–ಗೈಡ್ ಚಟುವಟಿಕೆಯಲ್ಲಿ ಭಾಗವಹಿಸುವಲ್ಲಿ ಅನೇಕ ಪ್ರಾರಂಬಿಕ ಶಿಬಿರಗಳನ್ನು, ಮೂಲತರಬೇತಿ ಶಿಬಿರಗಳನ್ನು ನಿರ್ವಹಿಸುತ್ತಿದ್ದು, ಅವುಗಳಲ್ಲಿ ಭಾಗವಹಿಸುವ ಶಿಕ್ಷಕರು / ಉಪನ್ಯಾಸಕರುಗಳು ತಮ್ಮ–ತಮ್ಮ ಸಂಸ್ಥೆಗಳಲ್ಲಿ ತಪ್ಪದೇ ಸ್ಕೌಟ್ಸ್–ಗೈಡ್ಸ್ ಘಟಕಗಳನ್ನು ಪ್ರಾರಂಭಿಸಿ, ನಿರ್ವಹಿಸಲು ಆದ್ಯ ಗಮನ ಹರಿಸುವುದು.

ಮೇಲ್ಕಂಡಂತೆ ವಿದ್ಯಾರ್ಥಿಗಳ ಶ್ರೇಷ್ಠ ಮಟ್ಟದ ಜ್ಞಾನಾರ್ಜನೆಯಲ್ಲಿ ಸಂಸ್ಥೆಯು ಸಕ್ರಿಯವಾಗಿ ಭಾಗವಹಿಸುವಲ್ಲಿ ಮತ್ತು ಮೇಲ್ಕಂಡಂತೆ ಎಲ್ಲಾ ಪ್ರಮುಖ ಭಾಗೀದಾರರುಗಳು ಸಂಪೂರ್ಣವಾಗಿ ತೊಡಗಿಸಿಕೊಳ್ಳುವಲ್ಲಿ ಪ್ರೇರೇಪಿಸುತ್ತಾ, ಹಗಲಿರುಳೆನ್ನದೆ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್.ಸಿಂಧ್ಯರವರು ತಮ್ಮ ಎಲ್ಲಾ ಸ್ಕೌಟ್ಸ್–ಗೈಡ್ಸ್ ಅಭಿಮಾನಿಗಳೊಂದಿಗೆ ಶ್ರಮಿಸುತ್ತಿರುವುದು ಅನುಕರಣೀಯ. ಅವರ ಶ್ರಮ ಮತ್ತು ಸ್ಕೌಟ್ಸ್–ಗೈಡ್ಸ್ ಧ್ಯೇಯೋದ್ದೇಶಗಳ ಯಶಸ್ವಿ ಅನುಷ್ಠಾನದಲ್ಲಿ ನಮ್ಮೆಲ್ಲರ ಕಾಯಾ, ವಾಚಾ, ಮನಸಾ, ಜವಾಬ್ದಾರಿಗಳನ್ನು ಅರಿತು ಇನ್ನೂ ಹೆಚ್ಚು–ಹೆಚ್ಚು ಶ್ರಮಿಸಿ, ಭವ್ಯ ಜನಾಂಗದ ಬೆಳವಣಿಗೆಗೆ ಪ್ರಯತ್ನಿಸೋಣ ಎಂದು ಮತ್ತೊಮ್ಮೆ ವಿನಂತಿಸುತ್ತೇನೆ.

ಸ್ಕೌಟ್ಸ್–ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ. ಗಂಗಪ್ಪಗೌಡ)
ಸಂಪಾದಕರು ಹಾಗೂ ರಾಜ್ಯ ಕಾರ್ಯದರ್ಶಿ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

## 109th Birthday of Sri V.P.Deenadayalu Naidu

**was celebrated at State Headquarters on 16.08.2025**



Sri M.A. Chellaiah, Senior Adult Leader(S) paid a floral tributes to great Leader Sri V.P. Deenadayalu Naidu and spoke about his life and the valuable services rendered by him to the Community and the Movement. Smt. Harishilpa, K.A.S., Special Land Acquisition Officer (KIADB), Sri Kumar, District Secretary, BBMP District Association addressed the gathering. Smt. Manjula, SOC(G) welcomed the gathering, Sri Nagesh R. Shivapur, STC(S) proposed the Vote of thanks, Smt. Kumari Honnamma, ASOC(G) and Smt. K.V. Shamala, State Training Commissioner (G) were co-ordinated the event.

In the evening at 5 P.M. Sri P.G.R. Sindhia, State Chief Commissioner spoke about Sri V.P. Deenadayalu Naidu through a Webinar. In his address he recalled the services rendered by Sri V.P. Deenadayalu Naidu to the Society and the Movement. Sri M. Prabhakar Bhat, State Organising Commissioner (Scouts) co-ordinate the programme. His long association with Late Sri Kondajji Basappa, Major M.R. Narayan Singh, Sri A.D. Anandan, Dr. S.B. Kawsik, Smt. M.R. Lakshmamma, Smt. Lalitha Krishnawamy is ever remembered by every one in the movement.



### Around Besant Park

## 79th Independence Day Celebration

79th Independence Day was Celebrated at Dr.Annie Besant Scouts and Guides State Training and Camping Centre, Doddaballapura, Bengaluru Rural District. This programme was organised by VIJAYA TEACHERS COLLEGE, Jayanagar.

Sri M.A.Chellaiah, Camp Co-ordinator hoisted the National Flag. Dr. Harish .G.C., Principal, Professors, Teacher Student, Warden and Staff participated in the event. Kinder garden students from ROYAL CUBS SCHOOL Doddaballapur visited the camp and participated in the celebrations.

# 79ನೇ ಸ್ವಾತಂತ್ರ್ಯ ದಿನಾಚರಣೆಯ ವರದಿ



ರಾಜ್ಯ ಕೇಂದ್ರ ಕಛೇರಿಯಲ್ಲಿ ಮಾನ್ಯ ರಾಜ್ಯ ಮುಖ್ಯ ಆಯುಕ್ತರರಾದ ಶ್ರೀ ಪಿ.ಜಿ.ಆರ್ ಸಿಂಧ್ಯ ರವರ ಮಾರ್ಗದರ್ಶನದಂತೆ 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಬೆಳಿಗ್ಗೆ 9 ಗಂಟೆಗೆ ಸಾಮೂಹಿಕ ಪ್ರಾರ್ಥನೆಯೊಂದಿಗೆ ನೆರವೇರಿತು. ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು(ಸ್ಕೌಟ್) ರವರು ಎಲ್ಲಾರನ್ನು ಸ್ವಾಗತಿಸಿದರು. ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿರವರು ಧ್ವಜಾರೋಹಣವನ್ನು ನೇರವೇರಿಸಿ ಶುಭ ಸಂದೇಶವನ್ನು ನೀಡಿದರು. ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ, ರಾಜ್ಯ ಸಹಾಯಕ ಆಯುಕ್ತರು (ಸ್ಕೌಟ್) ರವರು ಶುಭಹಾರೈಸಿ ಸ್ವಾತಂತ್ರ್ಯ ದಿನಾಚರಣೆಯ ಬಗ್ಗೆ ಮಕ್ಕಳಿಂದ ಮಾತನಾಡಿಸಿದರು, ತಾವು ಮುಖ್ಯ ಅತಿಥಿಗಳಾಗಿ ನೆರದಿದ್ದ ಮಕ್ಕಳನ್ನು ಕುರಿತು ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು, ಉತ್ತಮ ಸಮಾಜ ನಿರ್ಮಾಣಕ್ಕೆ ನಿಮ್ಮ ಪಾತ್ರ ಅತಿ ಮುಖ್ಯ ಎಂದು ತಿಳಿಸಿದರು.

ಶ್ರೀಮತಿ ಬಿ.ವಿ ರಾಮಲತಾ, ರಾಜ್ಯ ಆಯುಕ್ತರು (ಗೈಡ್) ವಯಸ್ಕ ಸಂಪನ್ಮೂಲ ಇವರು ಅಧ್ಯಕ್ಷತೆ ವಹಿಸಿ ಸ್ವಾತಂತ್ರ್ಯ ದಿನಾಚರಣೆಯ ಬಗ್ಗೆ ಮಾತನಾಡಿದರು. ಶ್ರೀ ಟಿ. ಪ್ರಭಾಕರ್, ರಾಜ್ಯ ಕೋಶಾಧಿಕಾರಿ, ಶ್ರೀ ಜಿತೇಶ್ ಹೆಚ್.ಕ್ಯೂ.ಸಿ, ಶ್ರೀ ರಾಮಚಂದ್ರರಾವ್ ಕಾಳೆ, ಹೆಚ್.ಕ್ಯೂ.ಸಿ, ಶ್ರೀಮತಿ ಹೆಲೆನ್ ಲೋಬೋ, ಎ.ಎಸ್.ಸಿ, ಶ್ರೀಮತಿ ಅರ್ಪಿತಾ ಕೊಂಡಜ್ಜಿ, ಹೆಚ್.ಕ್ಯೂ.ಸಿ, ಕ್ಲೂನಿ ಕಾನ್ವೆಂಟ್ ಶಾಲೆಯ ಬುಲ್‌ಬುಲ್‌ಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿ ಕೊಟ್ಟರು. ಶ್ರೀಮತಿ ಸಿ. ಮಂಜುಳ, ರಾಜ್ಯ ಸಂಘಟನಾ ಆಯುಕ್ತರು (ಗೈಡ್) ರವರು ಸಾಂಸ್ಕೃತಿಕ ಕಾರ್ಯಕ್ರಮ ನಿರ್ವಹಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಮತ್ತು ಕಛೇರಿ ಸಿಬ್ಬಂದಿ ವರ್ಗದವರು, ಬೆಂಗಳೂರು ಉತ್ತರ, ದಕ್ಷಿಣ ಜಿಲ್ಲೆಯ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್ ಮತ್ತು ಪೋಷಕರು ಉಪಸ್ಥಿತರಿದ್ದರು. ಶ್ರೀ ಎಲ್.ಟಿ ಲೋಕೇಶ್ ಸಹಾಯಕ ಕಾರ್ಯದರ್ಶಿ ಇವರು ಎಲ್ಲರನ್ನು ವಂದಿಸಿದರು. ಶ್ರೀಮತಿ ಕೆ.ವಿ ಶಾಮಲ ರಾಜ್ಯ ತರಬೇತಿ ಆಯುಕ್ತರು (ಗೈಡ್) ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿ ವಹಿಸಿದ್ದರು.



## ರಾಜ್ಯ ಮಟ್ಟದ ರೋವರ್ಸ್-ರೇಂಜರ್ಸ್‌ಗಳ ಐತಿಹಾಸಿಕ ಸ್ಮಾರಕಗಳ ಪರಿಚಯ ಮತ್ತು ವೀಕ್ಷಣ ಶಿಬಿರ





ಜಿಲ್ಲಾ ಸಂಸ್ಥೆ ವಿಜಯಪುರ ಇವರುಗಳ ಸಹಯೋಗದಲ್ಲಿ ದಿ. ವಾಸಂತಿಬಾಯಿ ಜಿಗಜಿನಿ ಜಿಲ್ಲಾ ತರಬೇತಿ ಮತ್ತು ಶಿಬಿರ ಕೇಂದ್ರ ಬುರಣಾಪುರ ಇಲ್ಲಿ ಜುಲೈ 25, ರಿಂದ 27ರ ವರೆಗೆ ರಾಜ್ಯ ಮಟ್ಟದ ರೋವರ್ ಮತ್ತು ರೇಂಜರ್‌ಗಳಿಗೆ ಐತಿಹಾಸಿಕ ಸ್ಮಾರಕಗಳ ಪರಿಚಯ ಮತ್ತು ವೀಕ್ಷಣಾ ಶಿಬಿರವು ಜರುಗಿತು.

ಶಿಬಿರವು ಜುಲೈ 25 ರಂದು ಮಧ್ಯಾಹ್ನ 3 ಘಂಟೆಗೆ ಉದ್ಘಾಟನೆಯಾಯಿತು. ಶಿಬಿರದ ಉದ್ಘಾಟನೆಯನ್ನು ಜಿಲ್ಲಾ ಸಂಸ್ಥೆಯ ಅಧ್ಯಕ್ಷರಾದ ಡಾ. ಸತೀಶ ಜಿಗಜಿನಿ ಇವರು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು.

ಜಿಲ್ಲಾ ಕೋಶಾಧಿಕಾರಿಗಳಾದ ಶ್ರೀ ಸಹಜಾನಂದ ದಂಧರಗಿ, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್) ಶ್ರೀ ಎಸ್. ಎಸ್. ಬೊಮ್ಮನಹಳ್ಳಿ ಸಹಾಯಕ ನಾಯಕ ತರಬೇತಿದಾರರಾದ ಶ್ರೀ ಜಗದೀಶ ಬೋಳಸೂರ, ಶಿಬಿರದ ನಾಯಕರಾದ ಡಾ. ರವಿ ಗಡದನ್ನವರ, ಶ್ರೀಮತಿ ಉಷಾದೇವಿ ಹಿರೇಮಠ, ಜಿಲ್ಲಾ ಕಾರ್ಯದರ್ಶಿಗಳು ಶ್ರೀ ಪಿ.ಎಸ್. ಕುಂಬಾರ ಉಪಸ್ಥಿತರಿದ್ದರು. ರಾಜ್ಯದ ವಿವಿಧ ಜಿಲ್ಲೆಗಳಿಂದ 151 ಶಿಬಿರಾರ್ಥಿಗಳು ಮತ್ತು ಸೇವಾತಂಡದವರು 10 ಜನ ಮತ್ತು 4 ಜನ ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್‌ಗಳು 165 ಜನ ಭಾಗವಹಿಸಿದ್ದರು.





ಆಗಸ್ಟ್ 26ರಂದು ರಾಜ್ಯ ಸಂಸ್ಥೆಯಲ್ಲಿ 'ಭಾರತ ಸರ್ಕಾರದ ಸಚಿವಾಲಯ ತರಬೇತಿ ಮತ್ತು ನಿರ್ವಹಣೆ, ನವದೆಹಲಿ' ಇವರು ಶ್ರೀಮತಿ ಕವಿತ ಶರ್ಮಾ, ಸಹಾಯಕ ನಿರ್ದೇಶಕರು, ಶ್ರೀ ರೋಶನ್ ಮಿಶ್ರಾ, ಸಹಾಯಕ ನಿರ್ದೇಶಕರು ಇವರು ಮತ್ತು ತಂಡದ 85 ಜನ ಭೇಟಿ ನೀಡಿದರು. ಈ ಸಂದರ್ಭದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ರವರು ದೂರವಾಣಿ ಮೂಲಕ ಸಂಸ್ಥೆಯ ಮಾಹಿತಿ ಮತ್ತು ಚಟುವಟಿಕೆಗಳು ಬಗ್ಗೆ ಮಾಹಿತಿ ನೀಡಿ ಶುಭಾಹಾರೈಸಿದರು. ಇದೇ ಸಂದರ್ಭದಲ್ಲಿ ರಾಜ್ಯ ಸಂಸ್ಥೆಯ ವತಿಯಿಂದ ಚಟುವಟಿಕೆಗಳು, ಕಾರ್ಯಕ್ರಮಗಳು, ಶಿಬಿರಗಳ ಬಗ್ಗೆ ಪಿ.ಪಿ.ಟಿ ಮೂಲಕ ಮಾಹಿತಿ ನೀಡಲಾಯಿತು. ರಾಜ್ಯ ಸಹಾಯಕ ಕಾರ್ಯದರ್ಶಿ ಶ್ರೀ ಎಲ್.ಟಿ. ಲೋಕೇಶ್, ಶ್ರೀ ಎಂ.ಎ. ಚೆಲ್ಲಯ್ಯ, ರಾಜ್ಯ ಸಂಘಟನಾ ಆಯುಕ್ತೆ ಶ್ರೀಮತಿ ಸಿ. ಮಂಜುಳಾ, ರಾಜ್ಯ ತರಬೇತಿ ಆಯುಕ್ತರಾದ ಶ್ರೀ ನಾಗೇಶ್ ಆರ್. ಶಿವಪೂರ್, ಶ್ರೀಮತಿ ಶಾಮಲ ಕೆ.ವಿ., ಎ.ಎಸ್.ಒ.ಸಿ ಶ್ರೀಮತಿ ಕುಮಾರಿ ಹೊನ್ನಮ್ಮ, ಜಿಲ್ಲಾ ಸಂಘಟಕರಾದ ಶ್ರೀ ವಿಶ್ವನಾಥ ಹಾಗೂ ಕೇಂದ್ರ ಕಛೇರಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಆಗಸ್ಟ್ 27ರಂದು ಡಾ|| ಆನಿಬೆಸೆಂಟ್ ತರಬೇತಿ ಕೇಂದ್ರಕ್ಕೆ ಭೇಟಿ ನೀಡಿ ವೀಕ್ಷಣೆ ಮಾಡಿದರು.



## CONGRATULATIONS

Dr. Kavitha Chinnaiayan, MD, MSCCT is appointed as President of The Society of Cardiovascular computed Tomography (SCCT) U.S.A.

We are very proud to note that she is Rashtrapathi Guide Awardee from Bharat Scouts and Guides, Karnataka State. She is daughter of Mrs.Geetha Nataraj, Karnataka State Commissioner of Guides.

Dr.Chinnaiyan is a renowned cardiologist at Corewell Health William Beaumont University Hospital Heart & Viascular in Michigan and a recognised global leader in cardiac CT. She has authored over 100 manuscripts and abstracts, along with several acclaimed books.

# ಆಗಸ್ಟ್ 2025ರ ತಿಂಗಳ ಅವದಿಯಲ್ಲಿ ನಿರ್ವಹಿಸಲ್ಪಟ್ಟ ರಾಜ್ಯ ಮಟ್ಟದ ಕಾರ್ಯಕ್ರಮಗಳು ಮತ್ತು ಆನ್ಲೈನ್ ಚಟುವಟಿಕೆಗಳ ವರದಿ

- ಆಗಸ್ಟ್ 01 ರಂದು ರಾಜ್ಯ ಸಂಸ್ಥೆಯ ವತಿಯಿಂದ ವಿಶ್ವ ಸ್ಕೌಟಿಂಗ್ ಸನ್ ರೈಸ್ ಡೇ ಮತ್ತು ಸ್ಕೌಟಿಂಗ್ ಸನ್ ರೈಸ್ ಡೇ ಕಾರ್ಯಕ್ರಮವನ್ನು ರಾಜ್ಯ ಕೇಂದ್ರ ಕಛೇರಿ ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ರಾಜ್ಯ ಮುಖ್ಯ ಆಯುಕ್ತರು ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಸ್ಕೌಟಿಂಗ್ ಸನ್ ರೈಸ್ ಮತ್ತು ವಿಶ್ವ ಸ್ಕೌಟ್ಸ್ ಸ್ಕಾರ್ಫ್ ದಿನದ ಮಹತ್ವ ಮತ್ತು ಉದ್ದೇಶಗಳನ್ನು ತಿಳಿಸಿ ಶುಭ ಸಂದೇಶ ನೀಡಿದರು. ರಾಜ್ಯ ಸಹಾಯಕ ಆಯುಕ್ತರಾದ ಶ್ರೀ ಎನ್. ಶ್ರೀನಿವಾಸನ್ ರವರು ಪ್ರತಿಜ್ಞೆಯನ್ನು ಮರು ಉಚ್ಚರಣೆ ಮಾಡಿಸಿದರು. ಇದೇ ದಿನ ಸಂಜೆ ವರ್ಚುಯಲ್ ಮೂಲಕ ವೆಬಿನಾರ್ ಆಯೋಜಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿಗಳಾಗಿ ರಾಜ್ಯ ಸಂಸ್ಥೆ ಉಪಾಧ್ಯಕ್ಷರಾದ ಶ್ರೀ ಗಜಾನನ ಮನ್ನಿಕೇರಿ, ಭಾಗವಹಿಸಿ ಮಾಹಿತಿ ನೀಡಿದರು. ಮುಖ್ಯ ಅತಿಥಿಗಳಾಗಿ ಸಹಾಯಕ ರಾಜ್ಯ ಆಯುಕ್ತರು ಮತ್ತು ಮಾಜಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಗೈಡ್ಸ್ ಆಯುಕ್ತರಾದ ಶ್ರೀಮತಿ ಗೀತಾ ನಟರಾಜ್, ರಾಜ್ಯ ಸಂಸ್ಥೆ ಅಧಿಕಾರಿಗಳು, ಸಿಬ್ಬಂದಿ ವರ್ಗದವರೂ ಭಾಗವಹಿಸಿ ಯಶಸ್ವಿಗೊಳಿಸಿದರು.
- ಆಗಸ್ಟ್ 03 ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ ಸ್ಕೌಟ್ ಸ್ಕಿಲೊ–14ರ ಕಾರ್ಯಕ್ರದ ಅಂಗವಾಗಿ "ಪರಿಸರ ಗಣಪತಿ ಅಭಿಯಾನ" ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಶ್ರೀ ಗುರುಮೂರ್ತಾಚಾರ್, ಪರಿಸರ ಆರ್ಟ್ ಸಂಸ್ಥೆ ಬೆಂಗಳೂರು ರವರು ಪರಿಸರ ಗಣಪತಿ ಅಭಿಯಾನ ಮಾಡುವ ಬಗ್ಗೆ ಪ್ರಾತ್ಯಕ್ಷಿಕೆ ನೀಡಿದರು. ಈ ಸಂದರ್ಭದಲ್ಲಿ 600ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.
- ಆಗಸ್ಟ್ 05 ರಂದು ರಾಜ್ಯ ಮಟ್ಟದ ಸಂಘಟಕರ ಸಭೆಯನ್ನು ಆನ್‌ಲೈನ್ ಮೂಲಕ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಗಣತಿ, ಚಟುವಟಿಕೆಗಳು, ಶಿಬಿರಗಳು, ಕಾರ್ಯಕ್ರಮಗಳ ಬಗ್ಗೆ ಚರ್ಚಿಸಲಾಯಿತು.
- ಆಗಸ್ಟ್ 09 ರಂದು ರಾಜ್ಯ ಸಂಸ್ಥೆಯ ವತಿಯಿಂದ 'ವಿಶ್ವ ಬುಡಕಟ್ಟು ಜನಾಂಗದ ದಿನಾಚರಣೆ' ಕಾರ್ಯಕ್ರವನ್ನು ಆನ್ಲೈನ್ ಮೂಲಕ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತು. ಸಂಪನ್ಮೂಲ ವ್ಯಕ್ತಿಗಳಾಗಿ ಪೀಪಲ್ ಸಂಸ್ಥೆಯ ಅಧ್ಯಕ್ಷರು ಮತ್ತು ಕೃಷಿ ಸಂಶೋದಕರಾದ ಶ್ರೀ ಚೆನ್ನರಾಜ್, ಮೈಸೂರು ಜಿಲ್ಲೆ ರವರು ವಿಶೇಷ ಉಪನ್ಯಾಸ ನೀಡಿದರು. ರಾಜ್ಯ ಸಂಸ್ಥೆ ಉಪಾಧಕ್ಷರಾದ ಶ್ರೀ ಎ.ಎನ್. ಮಹೇಶ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಇದೇ ಸಂದರ್ಭದಲ್ಲಿ ಬುಡಕಟ್ಟು ಜನಾಂಗದ ಕಲೆ, ಸಂಸ್ಕೃತಿ ಬಿಂಬಿಸುವ ನೃತ್ಯ ರೂಪಕಗಳನ್ನು ಪ್ರಸಾರಪಡಿಸಲಾಯಿತ್ತು ಸುಮಾರು 300ಕ್ಕೂ ಹೆಚ್ಚು ವಿದ್ಯಾರ್ಥಿಗಳು, ದಳನಾಯಕರುಗಳು, ಪದಾಧಿಕಾರಿಗಳು ಭಾಗವಹಿಸಿದ್ದರು.
- ಆಗಸ್ಟ್ 10 ರಂದು ಸ್ಕೌಟ್ ಸ್ಕಿಲೊ–15ರ ಕಾರ್ಯಕ್ರಮವನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ 'ಪೌಷ್ಠಿಕಾಂಶ ಶಿಕ್ಷಣ ಪ್ರಾವಿಣ್ಯತಾ ಪದಕದ ಬಗ್ಗೆ' ವರ್ಚುಯಲ್ ಮೂಲಕ ಆಯೋಜಿಸಲಾಗಿತ್ತು. ಶ್ರೀ ಸಾಗರ್. ಆರ್, ರಾಷ್ಟ್ರಪತಿ ರೋವರ್ ಮತ್ತು ರೋವರ್ ಸ್ಕೌಟ್ ಲೀಡರ್, ಬೆಂಗಳೂರು ಉತ್ತರ ಜಿಲ್ಲೆ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಮಾಹಿತಿ ನೀಡಿದರು. ಈ ವೆಬಿನಾರ್‌ನಲ್ಲಿ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು, ದಳನಾಯಕರುಗಳು, ಪದಾಧಿಕಾರಿಗಳು ಭಾಗವಹಿಸಿ ಯಶಸ್ವಿಗೊಳಿಸಿದರು.
- ಆಗಸ್ಟ್ 14 ರಂದು ರಾಜ್ಯ ಸಂಸ್ಥೆಯ ವತಿಯಿಂದ ಜಿಲ್ಲಾ ಸಂಸ್ಥೆ ಪದಾಧಿಕಾರಿಗಳ ಸಭೆಯನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್ ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪ ಗೌಡ ರವರು ಹಾಗೂ ರಾಜ್ಯ ಸಂಸ್ಥೆ ಪದಧಾರಿಗಳು ಹಾಗೂ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಪದಾಧಿಕಾರಿಗಳು ಭಾಗವಹಿಸಿದ್ದರು.
- ಆಗಸ್ಟ್ 17ರಂದು ಸ್ಕೌಟ್ ಸ್ಕಿಲೊ–16ರ ಕಾರ್ಯಕ್ರಮವನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ 'ಪತ್ರಕರ್ತ ಪ್ರಾವಿಣ್ಯತಾ ಪದಕದ ಬಗ್ಗೆ' ವರ್ಚುಯಲ್ ಮೂಲಕ ಆಯೋಜಿಸಲಾಗಿತ್ತು. ಕುಮಾರಿ ಪ್ರಜ್ಞಾ ಓಡಿಲ್ನಾಳ, ಖ್ಯಾತ ನಿರೂಪಕಿ ಮತ್ತು ಉಪನ್ಯಾಸಕರು, ಶ್ರೀನಿವಾಸ ವಿಶ್ವವಿದ್ಯಾಲಯ, ದಕ್ಷಿಣ ಕನ್ನಡ ಜಿಲ್ಲೆ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಮಾಹಿತಿ ನೀಡಿದರು. ಈ ವೆಬಿನಾರ್‌ನಲ್ಲಿ 1000ಕ್ಕೂ ಹೆಚ್ಚು ವಿದ್ಯಾರ್ಥಿಗಳು, ದಳನಾಯಕರುಗಳು, ಪದಾಧಿಕಾರಿಗಳು ಭಾಗವಹಿಸಿ ಯಶಸ್ವಿಗೊಳಿಸಿದರು.
- ಆಗಸ್ಟ್ 24 ರಂದು ಸ್ಕೌಟ್ ಸ್ಕಿಲೊ–17ರ ಕಾರ್ಯಕ್ರಮವನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ 'ಕ್ಯಾನ್ಸರ್ ಅರಿವು ಪ್ರಾವಿಣ್ಯತಾ ಪದಕದ ಬಗ್ಗೆ' ವರ್ಚುಯಲ್ ಮೂಲಕ ಆಯೋಜಿಸಲಾಗಿತ್ತು. ಡಾ|| ಶಾಂತಲ. ಎಸ್, ಮುಖ್ಯ ಸಲಹೆಗಾರರು ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು, ಸಾಗರ್ ಅಸ್ಪತ್ರೆ ಬೆಂಗಳೂರು. ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಮಾಹಿತಿ ನೀಡಿದರು. ಸದರಿ ವೆಬಿನಾರ್‌ನಲ್ಲಿ 850ಕ್ಕೂ ಹೆಚ್ಚು ವಿದ್ಯಾರ್ಥಿಗಳು, ದಳನಾಯಕರುಗಳು, ಪದಾಧಿಕಾರಿಗಳು ಭಾಗವಹಿಸಿ ಯಶಸ್ವಿಗೊಳಿಸಿದರು.

# ರಾಜ್ಯ ಮುಖ್ಯ ಆಯುಕ್ತರ ನೇತೃತ್ವದಲ್ಲಿ
# ಜುಲೈ–ಆಗಸ್ಟ್ 2025ರಲ್ಲಿ ನಿರ್ವಹಿಸಲ್ಪಟ್ಟ ಮುಖ್ಯ ಕಾರ್ಯಚಟುವಟಿಕೆಗಳು



* ಜುಲೈ 29 ರಂದು ಶ್ರೀ ಪಿ.ಎಸ್. ಕಾಂತರಾಜು, ಭಾ.ಆ.ಸೇ ಕಾರ್ಯನಿರ್ವಾಹಣಾ ನಿರ್ದೇಶಕರು, ಕರ್ನಾಟಕ ರಾಜ್ಯ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು. ಇವರನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಕಾರ್ಯದರ್ಶಿ ಶ್ರೀ ಗಂಗಪ್ಪ ಗೌಡ ಹಾಗೂ ರಾಜ್ಯ ಸಂಸ್ಥೆ ಪದಾಧಿಕಾರಿಗಳು ಭೇಟಿ ಮಾಡಿ ಕರ್ನಾಟಕ ರಾಜ್ಯದ ಎಲ್ಲಾ ವಸತಿ ಶಾಲೆಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳು ಪ್ರಾರಂಭಿಸುವ ಬಗ್ಗೆ ಪ್ರಸ್ತಾಪಿಸಲಾಯಿತು.



* ಜುಲೈ 30 ರಂದು ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರು ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ರಾಜೀವ್ ಗಾಂಧೀ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ॥ ಭಗವಾನ್ ಬಿ.ಸಿ ರವರನ್ನು ಭೇಟಿ ಮಾಡಿ ವಿಶ್ವವಿದ್ಯಾಲಯ ವ್ಯಾಪ್ತಿಯ ಎಲ್ಲಾ ಕಾಲೇಜುಗಳಲ್ಲಿ ರೋವರ್ಸ್ ರೇಂಜರ್ಸ್ ಘಟಕಗಳು ಪ್ರಾರಂಭಿಸುವ ಬಗ್ಗೆ ಮಾಹಿತಿ ನೀಡಿ ಚರ್ಚಿಸಿದರು. ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಶ್ರೀ ಗಂಗಪ್ಪ ಗೌಡ. ಕೆ, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಪ್ರಭಾಕರ್ ಭಟ್ ರವರು ಉಪಸ್ಥಿತರಿದ್ದರು.



* ಜುಲೈ 30 ರಂದು ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ವ್ಯಾಸ ಯೋಗ ವಿಶ್ವವಿದ್ಯಾಲಯದ ಮುಖ್ಯಸ್ಥರು ಮತ್ತು ಶ್ರೇಷ್ಠ ಯೋಗ ಗುರುಗಳಾದ ಶ್ರೀ ನಾಗೇಂದ್ರ ರವರನ್ನು ಭೇಟಿ ಮಾಡಿದರು. ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಶ್ರೀ ಗಂಗಪ್ಪ ಗೌಡ, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಪ್ರಭಾಕರ್ ಭಟ್ ರವರು ಉಪಸ್ಥಿತರಿದ್ದರು.



* ಜುಲೈ 30 ರಂದು ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ತಾಂತ್ರಿಕ ಶಿಕ್ಷಣ ಇಲಾಖೆಯ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್. ಪ್ರಸನ್ನರವರು, ಭಾ.ಆ.ಸೇ, ರವರನ್ನು ಭೇಟಿ ಮಾಡಿ ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಇಲಾಖೆ ಕಾಲೇಜುಗಳಲ್ಲಿ ರೋವರ್ಸ್–ರೇಂಜರ್ಸ್ ಘಟಕಗಳು ಪ್ರಾರಂಭಿಸುವ ಬಗ್ಗೆ ಮಾಹಿತಿ ನೀಡಿ ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪ ಗೌಡ, ರಾಜ್ಯ ಸಂಘಟನಾ ಆಯುಕ್ತರುಗಳಾದ ಶ್ರೀ ಎಂ. ಪ್ರಭಾಕರ್ ಭಟ್, ಶ್ರೀಮತಿ ಮಂಜುಳ .ಸಿ, ಸಂಪರ್ಕಾಧಿಕಾರಿ ಶ್ರೀ ಜಯರಾಮ್ ಉಪಸ್ಥಿತರಿದ್ದರು ಹಾಗೂ ಇಲಾಖೆಯ ವಿವಿಧ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಯಿತ್ತು.

* ಜುಲೈ 30 ರಂದು ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಉನ್ನತ ಶಿಕ್ಷಣ ಇಲಾಖೆಯ ಮಾನ್ಯ ಕಾರ್ಯದರ್ಶಿಗಳಾದ ಡಾ॥ ಜಿ. ಜಗದೀಶ್, ಭಾ.ಆ.ಸೇ ರವರನ್ನು ಭೇಟಿ ಮಾಡಿ ರಾಜ್ಯದಲ್ಲಿ ಪ್ರಸ್ತುತ ಇರುವ ಡಿಪ್ಲೋಮೊ, ಇಂಜಿನಿಯರಿಂಗ್, ವೈದ್ಯಕೀಯ ಮತ್ತು ಬಿ.ಡಿ.ಎಸ್ ಕೋರ್ಸ್‌ಗಳಿಗೆ ಪ್ರಸ್ತುತ ಇರುವ ಸ್ಕೌಟ್ಸ್–ಗೈಡ್ಸ್ ಮೀಸಲಾತಿ ಸೀಟುಗಳು ಹೆಚ್ಚಿಸಲು ಹಾಗೂ ವಿಶ್ವ ವಿದ್ಯಾಲಯದ ಸ್ನಾತಕೋತ್ತರ ಪದವಿಗಳಿಗೆ ರೋವರ್ಸ್–ರೇಂಜರ್ಸ್ ಒಂದು ಸೀಟು ಕಾಯ್ದಿರಿಸುವ ಬಗ್ಗೆ ಮತ್ತು ರೋವರಿಂಗ್–ರೇಂಜರ್ಸ್ ಅಭಿವೃದ್ಧಿಯ ಬಗ್ಗೆ ಮಾಹಿತಿ ನೀಡಿ ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪ ಗೌಡ, ರಾಜ್ಯ ಸಂಘಟನಾ ಆಯುಕ್ತರುಗಳಾದ ಶ್ರೀ ಪ್ರಭಾಕರ್ ಭಟ್, ಶ್ರೀಮತಿ ಮಂಜುಳ .ಸಿ, ಸಂಪರ್ಕಾಧಿಕಾರಿ ಶ್ರೀ ಜಯರಾಮ್ ಉಪಸ್ಥಿತರಿದ್ದರು.



* ಆಗಸ್ಟ್ 01 ರಂದು ರಾಜ್ಯ ಕೇಂದ್ರ ಕಛೇರಿ ಬೆಂಗಳೂರು ಇಲ್ಲಿ ವಿಶ್ವ ಸ್ಕೌಟ್ ಸ್ಕಾರ್ಫ್ ದಿನಾಚರಣೆ ಮತ್ತು ಸ್ಕೌಟಿಂಗ್ ಸನ್ ರೈಸ್ ದಿನಾಚರಣೆ ಕಾರ್ಯಕ್ರಮವನ್ನು ರಾಜ್ಯ ಮುಖ್ಯ ಆಯುಕ್ತರು ಮತ್ತು ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಪ್ರಭಾರ



ರಾಜ್ಯ ಆಯುಕ್ತರು ವಯಸ್ಕ ಸಂಪನ್ಮೂಲ ಶ್ರೀ ಎನ್ ಶ್ರೀನಿವಾಸನ್ ರವರು ಸ್ಕೌಟ್ಸ್ ಮತ್ತು ಗೈಡ್ಸ್ ಪ್ರತಿಜ್ಞೆಯನ್ನು ಬೋಧಿಸಿದರು. ಈ ಸಂದರ್ಭದಲ್ಲಿ ರಾಜ್ಯ ಆಯುಕ್ತರು ಗೈಡ್ ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು ವಯಸ್ಕ ಸಂಪನ್ಮೂಲ ಶ್ರೀಮತಿ ರಾಮಲತಾ ಬಿ.ವಿ, ರಾಜ್ಯ ಕಾರ್ಯದರ್ಶಿ ಶ್ರೀ ಗಂಗಪ್ಪಗೌಡ, ಸಹಾಯಕ ಕಾರ್ಯದರ್ಶಿ ಶ್ರೀ ಎಲ್.ಟಿ ಲೋಕೇಶ್, ರಾಜ್ಯ ತರಬೇತಿ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್, ಶ್ರೀಮತಿ ಮಂಜುಳ .ಸಿ, ರಾಜ್ಯ ತರಬೇತಿ ಆಯುಕ್ತರಾದ ಶ್ರೀ ನಾಗೇಶ್ ಆರ್. ಶಿವಪೂರ್, ಶ್ರೀಮತಿ ಕೆ.ವಿ. ಶಾಮಲ ಹಾಗೂ ಸಂಸ್ಥೆಯ ವಿವಿಧ ಪದಾಧಿಕಾರಿಗಳು ಹಾಗೂ ಎ.ಎಸ್.ಓ.ಸಿ, ಜಿಲ್ಲಾ ಸಂಘಟಕರು, ಕೇಂದ್ರ ಕಛೇರಿ, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ರಾಜ್ಯ ಮುಖ್ಯ ಆಯುಕ್ತರು ನೂತನ ಸದಸ್ಯರಿಗೆ ಸ್ಕೌಟ್ ಕಂಠ ವಸ್ತ್ರ ಹಾಕುವ ಮೂಲಕ ಸ್ವಾಗತಿಸಿದರು.

* ಆಗಸ್ಟ್ 04 ರಂದು ರಾಜ್ಯ ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿ ಮಾಜಿ ಸಚಿವರು ಮತ್ತು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಸ್ಕೌಟ್ಸ್-ಗೈಡ್ಸ್ ಮಾಸ ಪತ್ರಿಕೆಯ ಶತಮಾನೋತ್ಸವ ಕಾರ್ಯಕ್ರಮದ ಪೂರ್ವ ಸಿದ್ದತಾ ಸಭೆಯನ್ನು ಆಯೋಜಿಸಲಾಗಿತ್ತು.



ಈ ಸಂದರ್ಭದಲ್ಲಿ ರಾಜ್ಯ ಆಯುಕ್ತರುಗಳಾದ ಶ್ರೀಮತಿ ಗೀತಾ ನಟರಾಜ್, ಶ್ರೀಮತಿ ಬಿ.ವಿ ರಾಮಲತಾ, ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಸಹಾಯಕ ಆಯುಕ್ತರುಗಳಾದ ಶ್ರೀಮತಿ ಮುಕ್ತ ಬಿ. ಕಾಗಲಿ, ಶ್ರೀ ಎನ್. ಶ್ರೀನಿವಾಸನ್, ಶ್ರೀ ತಿರುಮಲರಾವ್, ಜಂಟಿ ಕಾರ್ಯದರ್ಶಿ, ಶ್ರೀಮತಿ ಕೃಪಾ ವಿಜಯ್, ಸದಸ್ಯರಾದ ಶ್ರೀ ಅಜಯ್ ಕುಮಾರ್ ಜೈನ್ ಹಾಗೂ ರಾಜ್ಯ ಸಂಸ್ಥೆಯ ಪದಾಧಿಕಾರಿಗಳು, ಅಧಿಕಾರಿಗಳು ಉಪಸ್ಥಿತರಿದ್ದರು.



* ಆಗಸ್ಟ್ 05 ರಂದು ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಬೆಂಗಳೂರು ದಕ್ಷಿಣ ವ್ಯಾಪ್ತಿಯಲ್ಲಿ ಬರುವ ಸಿಶು ಗ್ರಿಹ ವಿದ್ಯಾ ಸಂಸ್ಥೆಗೆ ಭೇಟಿ ನೀಡಿ ಸ್ಕೌಟ್ಸ್ ಗೈಡ್ಸ್ ಚಟುವಟಿಕೆಗಳು, ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಎಂ.ಎಸ್. ಸತೀಶ್ ರವರು ಹಾಗೂ ಮುಂತಾದವರು ಉಪಸ್ಥಿತರಿದ್ದರು.

* ಆಗಸ್ಟ್ 06ರಂದು ಮೈಸೂರು ಜಿಲ್ಲೆ ನಂಜನಗೂಡಿನ ರೋಟರಿ ಶಾಲೆ, ನಂಜನಗೂಡು ಸ್ಥಳೀಯ ಸಂಸ್ಥೆಯ ವಾರ್ಷಿಕ ಸಭೆಯಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಭಾಗವಹಿಸಿ ಮಾರ್ಗದರ್ಶನ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಅಬ್ದುಲ್ ಜಮೀಲ್, ಶ್ರೀ ಗೋಪಾಲಕೃಷ್ಣ (LT) ಸ್ಕೌಟ್ ಹಾಗೂ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಭಾಗವಹಿಸಿದ್ದರು.





* The Bharat Scout & Guide Karnataka, Bangalore North District conducted the District Level Scouter Guider Conference on 06th and 07th August 2025 at RT Nagar Public school. The Meeting was presided over by the Ex minister & State Chief Commissioner Sri PGR Sindhia addressed the gathering and appreciated the good work of the District. SCC along with The District Secretary and District Chief Commissioner awarded the Best Units for the District for the year 2024-25.

* ಆಗಸ್ಟ್ 08ರಂದು ತಮಿಳುನಾಡಿನ ಚೆನ್ನೈನಲ್ಲಿ ಆಗಸ್ಟ್ 05 ರಿಂದ 09ರ ವರೆಗೆ ಭಾರತದ ಹೆಮ್ಮೆಯ ಪುತ್ರ ವೀರ ಯೋಧ ರಾಷ್ಟ್ರಪತಿ ಸ್ಕೌಟ್ ಕ್ಯಾಪ್ಟನ್ ಎಂ.ವಿ ಪ್ರಾಂಜಲ್, ಆರ್ಮಿ ಅಧಿಕಾರಿ ರವರ ಸ್ಮರಣಾರ್ಥ ಪೆರಂಬೂರ್ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಕೇಂದ್ರ ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಮಟ್ಟದ ರೋವರ್-ರೇಂಜರ್ ಕಾರ್ನಿವಲ್ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಭಾಗವಹಿಸಿ ಶುಭಹಾರೈಸಿದರು.

ಈ ಸಂದರ್ಭದಲ್ಲಿ ಸದರನ್ ರೈಲ್ವೆ ರಾಜ್ಯ ಸಂಘಟನಾ ಆಯುಕ್ತರಾದ ಅನ್ಡರ್‌ಸನ್, ಗೈಡ್ ರಾಜ್ಯ ಸಂಘಟನಾ ಆಯುಕ್ತೆ ಶ್ರೀಮತಿ ಶಾಲಿನಿ, ಸ್ಕೌಟ್ ಮದಿಮಾರನ್, ಕರ್ನಾಟಕ ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್ ಮುಂತಾದವರು ಉಪಸ್ಥಿತರಿದ್ದರು. ಹಾಗೂ ವಿವಿಧ ರಾಜ್ಯಗಳಿಂದ ಆಗಮಿಸಿದಂತಹ ರೋವರ್ಸ್-ರೇಂಜರ್ಸ್ ಭಾಗವಹಿಸಿದ್ದರು.





* ಆಗಸ್ಟ್ 10 ರಂದು ದಾವಣಗೆರೆ ಜಿಲ್ಲಾ ಸಂಸ್ಥೆಯ ಕಚೇರಿಯಲ್ಲಿ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾಜಿ ಸಚಿವರು ಮತ್ತು ರಾಜ್ಯಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಭಾಗವಹಿಸಿ ಕಾರ್ಯಕ್ರಮತ್ತು ಚಟುವಟಿಕೆಗಳನ್ನು ಉದ್ದೇಶಿಸಿ ಮಾತನಾಡಿದರು. ಸದರಿ ಸಭೆಯಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮುರುಘರಾಜೇಂದ್ರ ಚಿಗಟೇರಿ ರವರು, ಉಪನಿರ್ದೇಶಕರಾದ ಶ್ರೀ ಕೊಟ್ರೇಶ್‌ರವರು, ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಶ್ರೀ ದಿನೇಶ್ .ಕೆ ಶೆಟ್ಟಿ ರವರು, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ವಿಶಾಲಕ್ಷಮ್ಮನವರು, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀಮತಿ ರತ್ನರವರು, ರಾಜ್ಯ ಸಂಘಟನಾ ಆಯುಕ್ತೆ ಶ್ರೀಮತಿ ಮಂಜುಳ .ಸಿ ರವರು, ಜಿಲ್ಲಾ ಆಯುಕ್ತರುಗಳಾದ ಶ್ರೀ ಎ.ಪಿ. ಷಡಕ್ಷರಪ್ಪ, ಶ್ರೀಮತಿ ಶಾರದ, ಎಸ್.ಜಿವಿ ಶ್ರೀಮತಿ ಅಶ್ವಿನಿ ಹಾಗೂ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಆಗಸ್ಟ್ 10 ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಕುವೆಂಪು ರಂಗಮಂದಿರ, ಶಿವಮೊಗ್ಗ ಮತ್ತು ಮಲ್ನಾಡ್ ಓಪನ್ ಗ್ರೂಪ್ ಶಿವಮೊಗ್ಗ ಇವರು ನಿರಂತರ 42 ವರ್ಷಗಳ ಭ್ರಾತೃತ್ವ ಮತ್ತು ಸೇವೆಯಲ್ಲಿ ತೊಡಗಿಸಿಕೊಂಡಿರುವ 12ನೇ ಆವೃತ್ತಿಯ 'ಗೀತಭಾರತಿ' ತಾಯಿ ಭಾರತಿಗೆ ಗೀತೆಗಳ ಆರತಿ ದೇಶಭಕ್ತಿ ಗೀತೆಗಳ ಸುಂದರವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು ಮತ್ತು ಸಾಧಕರನ್ನು ಅಭಿನಂದಿಸಿದರು. ಈ ಸಂದರ್ಭದಲ್ಲಿ ವಿವಿಧ ಪದಾಧಿಕಾರಿಗಳು ಮತ್ತು ವಿವಿಧ ವಿದ್ಯಾ ಸಂಸ್ಥೆಗಳ ವಿದ್ಯಾರ್ಥಿಗಳು ಭಾಗವಹಿಸಿ ಯಶಸ್ವಿಗೊಳಿಸಿದರು.





* ಆಗಸ್ಟ್ 14 ರಂದು ಬೆಂಗಳೂರು ಪೂರ್ವ ಜಿಲ್ಲೆ ಆನೇಕಲ್ ತಾಲ್ಲೂಕಿನ ಸಾಯಿರಾಮ್ ಪದವಿ ಪೂರ್ವ ಕಾಲೇಜು ಹಾಗೂ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮಾಜಿ ಸಚಿವರು ಮತ್ತು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ರೋವರ್ ಮತ್ತು ರೇಂಜರ್ ಘಟಕಗಳ ಉದ್ಘಾಟಿಸಿ ಶುಭಹಾರೈಸಿ ಮಾತನಾಡಿದರು. ಈ ಸಂದರ್ಭದಲ್ಲಿ ಡಾ. ಬಿ. ಷಡಕ್ಷರಪ್ಪ ಪ್ರಾಂಶುಪಾಲರು, ಸಾಯಿರಾಮ್ ಶಿಕ್ಷಣ ಸಂಸ್ಥೆ ಸಿ.ಇ.ಓ, ಡಾ. ಅರುಣ್ ಕುಮಾರ್, ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರ ಕುಮಾರ್, ಜಿಲ್ಲಾ ಖಜಾಂಚಿ ಶ್ರೀ ಲಕ್ಷ್ಮೀಕಾಂತರಾಜ್, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಆರ್.ಎಲ್ ನಾರಾಯಣಸ್ವಾಮಿ, ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್ ರವರು ಹಾಗೂ ರೋವರ್ ಮತ್ತು ರೇಂಜರ್‌ಗಳು 250 ಹೆಚ್ಚು ಮಂದಿ ಭಾಗವಹಿಸಿದ್ದರು. ಸದರಿ ಕಾರ್ಯಕ್ರಮಕ್ಕೆ ಸಾಯಿ ಶಿಕ್ಷಣ ಸಂಸ್ಥೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

* ಆಗಸ್ಟ್ 16 ರಂದು ಚಾಮರಾಜನಗರ ಜಿಲ್ಲಾ ಸಂಸ್ಥೆಯ ಪ್ರಗತಿ ಪರಿಶೀಲನಾ ಸಭೆಯನ್ನು ಉಪನಿರ್ದೇಶಕರ ಕಛೇರಿ ಸಭಾಂಗಣದಲ್ಲಿ ಮಾಜಿ ಸಚಿವರು ಮತ್ತು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ಈ ಸಭೆಯನ್ನು ಗಿಡಕ್ಕೆ ನೀರೆರೆಯುವುದರ ಮೂಲಕ ಉದ್ಘಾಟಿಸಲಾಯಿತು. ಈ ಸಭೆಗೆ ಶ್ರೀ ಬಿ.ಕೆ. ಬಸವರಾಜ್ ಸಹಾಯಕ ಆಯುಕ್ತರು, ಶ್ರೀ ರಾಮಚಂದ್ರ ರಾಜೆ ಅರಸ್, ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ ಮತ್ತು ಶ್ರೀಮತಿ ಪುಟ್ಟ ಗೌರಮ್ಮ ಉಪನಿರ್ದೇಶಕರು ಪದವಿಪೂರ್ವ ಶಿಕ್ಷಣ ಇಲಾಖೆ, ಶ್ರೀ ರಾಜೇಂದ್ರ ಪ್ರಸಾದ್ ಸಹಾಯಕ ನಿರ್ದೇಶಕರು ಜಿಲ್ಲಾ ಪಂಚಾಯಿತಿ ಚಾಮರಾಜನಗರ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳಾದ ಶ್ರೀ ಶಂಕರ್ , ಜಿಲ್ಲಾ ಆಯುಕ್ತಾರಾದ ಶ್ರೀ ವಿ ಮಲ್ಲಿಕಾರ್ಜುನ ಸ್ವಾಮಿ, ಜಿಲ್ಲಾ ಕಾರ್ಯದರ್ಶಿ ಶ್ರೀ ವಿ.ಎಂ. ರಾಮಚಂದ್ರ ಹಾಗೂ ಜಿಲ್ಲಾ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಮತ್ತು ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.





* ಆಗಸ್ಟ್ 20 ರಂದು ಶ್ರೀ ಎಸ್.ಎಂ. ಕಲೂತಿ ಕಂಪೋಸಿಟ್ ರೆಸಿಡೆನ್ಷಿಯಲ್, ಸಿ.ಬಿ.ಎಸ್.ಇ. ಆಂಗ್ಲ ಮತ್ತು ಕನ್ನಡ ಮಾಧ್ಯಮ ಕ್ರೀಡಾ ಶಾಲೆ, ಚಂದರಗಿ, ತಾ–ರಾಮದುರ್ಗ ಬೆಳಗಾವಿ ಜಿಲ್ಲೆ ಸದರಿ ಕಾರ್ಯಕ್ರಮಗಳನ್ನು ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯ ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರು, ಕರ್ನಾಟಕ ಸರ್ಕಾರ ರವರು ಉದ್ಘಾಟಿಸಿ ಭಾಗವಹಿಸಿದ ಎಲ್ಲಾ ಶಿಕ್ಷಣ ಇಲಾಖೆ ಅಧಿಕಾರಿಗಳು ಹಾಗೂ ಉಪನ್ಯಾಸಕರಗಳನ್ನು ಉದ್ದೇಶಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆ ಮತ್ತು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರುದ್ದರು.



* ಆಗಸ್ಟ್ 20 ರಂದು ರಾಜ್ಯ ಮುಖ್ಯ ಆಯುಕ್ತರು ಮತ್ತು ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಬೆಳಗಾವಿ ನಗರ ಜೈನ್ ಹೆರಿಟೇಜ್ ಶಾಲೆಯ ನಿರ್ದೇಶಕಿಯರಾದ ಶ್ರೀಮತಿ ಶ್ರದ್ಧಾ ಕಟವತೆ ಇವರನ್ನು ಭೇಟಿ ಮಾಡಿ ಸ್ಕೌಟ್ಸ್ ಮತ್ತು ಗೈಡ್ ಚಟುವಟಿಕೆಗಳ ಕುರಿತು ಚರ್ಚಿಸಲಾಯಿತು ಹಾಗೂ ಸದರಿ ಶಾಲೆಯಲ್ಲಿ ಅಂತರಾಷ್ಟ್ರೀಯ ಕಬ್ಬೂರಿ (ಕಬ್ಸ್ ಉತ್ಸವ) ಆಯೋಜಿಸುವ ಕುರಿತು ಪ್ರಸ್ತಾಪಿಸಿದರು. ಸ್ಕೌಟ್ಸ್ ಮತ್ತು ಗೈಡ್ಸ್ ಸಮಾಜ ಪರಿವರ್ತನೆಯ ಕೆಲಸ ಮಾಡುತ್ತಿದೆ.

ಉತ್ತಮ ಜೀವನ ನಡೆಸಲು ಹಾಗೂ ಜೀವನದ ಕೌಶಲ್ಯವನ್ನು ರೂಢಿಸುವ ಜೊತೆಗೆ ಸಮಾಜದ ಪರಿವರ್ತನೆ ಮಾಡುವುದು ಮತ್ತು ಸೇವೆಯ ಜೊತೆಗೆ ಜ್ಞಾನ ನೀಡುವುದು ಸ್ಕೌಟ್ಸ್ ಮತ್ತು ಗೈಡ್ಸನ ಉದ್ದೇಶವಾಗಿದೆ ಎಂದು ಮಾಜಿ ಗೃಹ ಸಚಿವ ಮತ್ತು ರಾಜ್ಯ ಮುಖ್ಯ ಆಯುಕ್ತರು ಶ್ರೀ ಪಿ.ಜಿ.ಆರ್. ಸಿಂಧ್ಯ ಹೇಳಿದರು. ಅವರು ಸಮೀಪದ ಚಂದರಗಿಯ ಎಸ್.ಎಂ. ಕಲೂತಿ ಸಂಯುಕ್ತ ಕ್ರೀಡಾ ವಸತಿ ಶಾಲೆಯಲ್ಲಿನ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳ ಉದ್ಘಾಟನೆ ಮಾಡಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಉಪನಿರ್ದೇಶಕರಾದ ಶ್ರೀಮತಿ ಲೀಲಾವತಿ ಹಿರೇಮಠ ಮತ್ತು ರಾಜ್ಯ ಸಂಘಟನಾ ಆಯಕ್ತರಾದ ಶ್ರೀಮತಿ ಸಿ. ಮಂಜುಳಾ ಅವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಕ್ರೀಡಾ ವಸತಿ ಶಾಲೆಯ ಅಧ್ಯಕ್ಷರಾದ ಮೃಣಾಲಿನಿ ಎಂ. ಪಟ್ಟಣ, ಸಂಸ್ಥಾಪಕ ಎಸ್.ಎಂ. ಕಲೂತಿ, ನಿರ್ದೇಶಕರಾದ ಶ್ರೀಮತಿ ರಾಜೇಶ್ವರಿ ಯಾದವಾಡ, ರಾಜ್ಯ ಉಪಾಧ್ಯಕ್ಷರು ಹಾಗೂ ಜಿಲ್ಲಾ ಮುಖ್ಯ ಆಯುಕ್ತರು, ಬೆಳಗಾವಿಯ ಶ್ರೀ ಗಜಾನನ ಮನ್ನಿಕೇರಿ, ಬೆಳಗಾವಿ ದಕ್ಷಿಣ ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಅಕ್ಷರ ಖಾಜಿ, ಶ್ರೀ ರವಿ ಬಜಂತ್ರಿ, ಶ್ರೀ ಆಂಜನೇಯ ಕೆ.ಆರ್, ಶ್ರೀ ಸುರೇಂದ್ರ ಕಾಂಬ್ಳೆ, ಶ್ರೀಮತಿ ಪ್ರಭಾವತಿ ಪಾಟೀಲ, ಶ್ರೀ ಬಿ.ಆರ್ ಸಿಗಳಾದ ಶೀಲವಂತರ ಮಠ ಹಾಗೂ ಶ್ರೀ ಎಂ.ಎಸ್ ಮೇದಾರ ಮತ್ತು ಎಲ್ಲ ತಾಲೂಕಗಳ ಸಿ.ಆರ್.ಪಿಗಳು, ಜಿಲ್ಲಾ ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು ತಾಲೂಕ ದೈಹಿಕ ಶಿಕ್ಷಣ ಪರಿವೀಕ್ಷಕರು ಕಾಲೇಜು ಉಪನ್ಯಾಸಕರು ಮತ್ತು ತಾಲೂಕ ಕಾರ್ಯದರ್ಶಿಗಳು ಹಾಜರಿದ್ದರು ಕಾರ್ಯಕ್ರಮದಲ್ಲಿ ಬೆಳಗಾವಿ ಘಟಕದ ಆಯುಕ್ತರಾದ ಗಜಾನನ ಮನ್ನಿಕೇರಿ ಪ್ರಾಸ್ಥಾವಿಕವಾಗಿ ಮಾತನಾಡಿ ಸರ್ವರನ್ನು ಸ್ವಾಗತಿಸಿದರು, ಶ್ರೀ ಸತೀಸ ಪಾಟೀಲ ವಂದಿಸಿದರು, ಶ್ರೀ ರಾಜಕುಮಾರ ನಿರೂಪಿಸಿದರು. ನಂತರ ಬೆಳಗಾವಿ ಜಿಲ್ಲಾ ಕಾಲೇಜು ಉಪನ್ಯಾಸಕರಿಗೆ ತರಬೇತಿ ಶಿಬಿರದ ಆಯೋಜನೆ ಮಾಡಲಾಯಿತು.



* ಆಗಸ್ಟ್ 20 ರಂದು ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಮತ್ತು ಮಾಜಿ ಸಚಿವರು, ಕರ್ನಾಟಕ ಸರ್ಕಾರ ಇವರು ಬೆಳಗಾವಿ ಜಿಲ್ಲಾ ಸ್ಕೌಟ್ ಭವನಕ್ಕೆ ಭೇಟಿ ನೀಡಿ, ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ಜಿಲ್ಲಾ ಪದಾಧಿಕಾರಿಗಳೊಂದಿಗೆ ಸ್ಕೌಟ್ಸ್ ಮತ್ತು ಗೈಡ್ ಚಟುವಟಿಕೆಗಳು ಮತ್ತು ಅಭಿವೃದ್ಧಿಯ ಕುರಿತು ಚರ್ಚಿಸಲಾಯಿತು. ಎಲ್ಲಾ ಪದಾಧಿಕಾರಿಗಳನ್ನು ಪ್ರೋತ್ಸಾಹಿಸಿದರು ಹಾಗೂ ಜಿಲ್ಲೆಯ ಪ್ರಗತಿಯನ್ನು ಕುರಿತು ಅಭಿನಂದನೆಗಳನ್ನು ಸಲ್ಲಿಸಿದರು.



* ಆಗಸ್ಟ್ 21 ರಂದು ರಾಜ್ಯ ಮುಖ್ಯ ಆಯುಕ್ತರು ಮತ್ತು ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಶ್ರೀ ಗಜಾನನ ಮನ್ನಿಕೇರಿ, ಜಿಲ್ಲಾ ಮುಖ್ಯ ಆಯುಕ್ತರು ಬೆಳಗಾವಿ, ಶ್ರೀಮತಿ ಮಂಜುಳಾ .ಸಿ, ರಾಜ್ಯ ಸಂಘಟನಾ ಆಯುಕ್ತೆ ಮತ್ತು ಶ್ರೀ ವಿಠಲ್, ಎ.ಎಸ್.ಒ.ಸಿ ಇವರುಗಳು ಜಿಲ್ಲಾ ಪಂಚಾಯತ್ ಬೆಳಗಾವಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಗಳಾದ ಶ್ರೀ ರಾಹುಲ್ ಶಿಂಧೆ ರವರನ್ನು ಭೇಟಿ ಮಾಡಿ ಬೆಳಗಾವಿ ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ ಸ್ಕೌಟ್ ಮತ್ತು ಗೈಡ್ ಘಟಕ ಪ್ರಾರಂಭಿಸುವ ಕುರಿತು ಸಮಗ್ರ ಚರ್ಚಿಸಲಾಯಿತು.



* ಆಗಸ್ಟ್ 21 ರಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯ, ಮಾಜಿ ಸಚಿವರು ಮತ್ತು ರಾಜ್ಯ ಮುಖ್ಯ ಆಯುಕ್ತರು, ಶ್ರೀ ಗಜಾನನ ಮನ್ನಿಕೇರಿ ಜಿಲ್ಲಾ ಮುಖ್ಯ ಆಯುಕ್ತರು. ಬೆಳಗಾವಿ, ಶ್ರೀಮತಿ ಮಂಜುಳಾ .ಸಿ,

ರಾಜ್ಯ ಸಂಘಟನಾ ಆಯುಕ್ತ (ಗೈ), ಶ್ರೀ ವಿಠಲ ಬಾಚಗುಂಡಿ, ಎ.ಎಸ್.ಓ.ಸಿ ಇವರುಗಳು ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿದ್ಯಾಶಂಕರ್ ಮತ್ತು ಶ್ರೀ ರಂಗಸ್ವಾಮಿ ರಿಜಿಸ್ಟ್ರಾರ್ ಇವರೊಂದಿಗೆ ರೋವರ್ಸ್ ಮತ್ತು ರೇಂಜರ್ಸ್ ದಳಗಳನ್ನು ತೆರೆಯುವಂತೆ ಮತ್ತು ಬಿಗಿನರ್ ಕೋರ್ಸ್ ಪ್ರಾರಂಭಿಸಲು ಚರ್ಚಿಸಲಾಯಿತು.




* ಆಗಸ್ಟ್ 21 ರಂದು ಶ್ರೀ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇಲ್ಲಿ ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಸಿ.ಎಂ ತ್ಯಾಗರಾಜ ಇವರೊಂದಿಗೆ ರೋವರ್ಸ್ ಮತ್ತು ರೇಂಜರ್ಸ್ ದಳಗಳನ್ನು ತೆರೆಯುವಂತೆ ಮತ್ತು ಬಿಗಿನರ್ ಕೋರ್ಸ್ ಪ್ರಾರಂಭಿಸಲು ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಗಜಾನನ ಮನ್ನಿಕೇರಿ, ಜಿಲ್ಲಾ ಮುಖ್ಯ ಆಯುಕ್ತರು. ಬೆಳಗಾವಿ, ಶ್ರೀಮತಿ ಮಂಜುಳಾ .ಸಿ, ರಾಜ್ಯ ಸಂಘಟನಾ ಆಯುಕ್ತೆ (ಗೈ) ಶ್ರೀ ವಿಠ್ಠಲ್ ಬಾಚಗುಂಡಿ, ಎ.ಎಸ್.ಓ.ಸಿ ಇವರುಗಳು ಉಪಸ್ಥಿತರಿದ್ದರು.

* ಆಗಸ್ಟ್ 22 ರಂದು ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಡಾ॥ ಅನಿಬೆಸೆಂಟ್ ಸ್ಕೌಟ್ಸ್–ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ವತಿಯಿಂದ ಆಯೋಜಿಸಿರುವ ಜಿಲ್ಲಾ ಮಟ್ಟದ ತೃತೀಯ ಸೋಪಾನ ಪರೀಕ್ಷಾ ಶಿಬಿರ, ಪಟಾಲಂ ನಾಯಕರ ತರಬೇತಿ ಶಿಬಿರ, ನಿಪುಣ್ ಪರೀಕ್ಷಾ ಶಿಬಿರ ಮತ್ತು ದಳ ನಾಯಕರುಗಳ ಮೂಲ ತರಬೇತಿ ಶಿಬಿರದ ಶಿಬಿರಾಗ್ನಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ ಶುಭಹಾರೈಸಿದರು.



ಈ ಸಂದರ್ಭದಲ್ಲಿ ಶ್ರೀ ಎಮ್.ಕೆ ಖಾನ್, ಶ್ರೀ ಎ.ಎಸ್ ಮಧುಸೂಧನ್, ಶ್ರೀ ಎಂ.ಎಸ್. ಸತೀಶ್, ಶ್ರೀ ಟಿ.ಕೆ. ನಾರಾಯಣಸ್ವಾಮಿ, ಶ್ರೀ ವಿ.ಎಂ. ನಾರಾಯಣಸ್ವಾಮಿ, ಶ್ರೀಮತಿ ಗೌರಬಾಯಿ, ಶ್ರೀ ಶರತ್, ಶ್ರೀ ಚಂದ್ರು .ಪಿ ಮತ್ತು ಹಲವಾರು ಮುಖಂಡರು ಹಾಗೂ ಸ್ಕೌಟ್ ಮತ್ತು ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್, ದಳ ನಾಯಕರುಗಳು ಭಾಗವಹಿಸಿದ್ದರು.



* ಆಗಸ್ಟ್ 23ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ ಚಾಮುಂಡಿ ಮುಕ್ತ ದಳ ಆವರಣ, ಮಲ್ಲೇಶ್ವರ ಇಲ್ಲಿ ಆಗಸ್ಟ್ 18 ರಿಂದ 24ರ ವರೆಗೆ ನಡೆಯುತ್ತಿರುವ ಕಬ್ ಮಾಸ್ಟರ್, ಸ್ಕೌಟ್ ಮಾಸ್ಟರ್, ಫ್ಲಾಕ್ ಲೀಡರ್, ಗೈಡ್ ಕ್ಯಾಪ್ಟನ್ ಮೂಲ ತರಬೇತಿ ಶಿಬಿರದಲ್ಲಿ ಭಾಗವಹಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಶೇಷಾದ್ರಿ, ಶ್ರೀ ಹೇಮಂತ್, ಶ್ರೀಮತಿ ನಿರ್ಮಲ, ಶ್ರೀ ಆನಂದ ಅಡಿಗ, ಶ್ರೀಮತಿ ಜ್ಯೋತಿ, ಶ್ರೀ ನಿತಿನ್ ಅಮಿನ್ ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಆಗಸ್ಟ್ 24 ರಿಂದ 26ರ ವರಿಗೆ ರಾಜ್ಯ ಸಂಸ್ಥೆ ಮತ್ತು ಕೋಲಾರ ಜಿಲ್ಲಾ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಿರುವ 'ರಾಜ್ಯ ಮಟ್ಟದ ವೃತ್ತಿ ಕೌಶಲ್ಯ ತರಬೇತಿ' ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಆಗಸ್ಟ್ 24 ರಂದು ಭಾಗವಹಿಸಿ ಶಿಬಿರವನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಉದ್ಘಾಟಿಸಿ ಶುಭಹಾರೈಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ ಶಂಕರಪ್ಪ, ಜಿಲ್ಲಾ ಕಾರ್ಯದರ್ಶಿ ಶ್ರೀ ವಿ.ಎಂ. ನಾರಾಯಣಸ್ವಾಮಿ, ಜಿಲ್ಲಾ ಆಯುಕ್ತರಾದ ಶ್ರೀ ಕೆ.ಆರ್.ಸುರೇಶ್, ಮಾಜಿ ಕಾರ್ಯದರ್ಶಿ ಶ್ರೀ ಎಂ.ವಿ. ಜನಾರ್ಧನ್, ಪದಾಧಿಕಾರಿಗಳಾದ ಶ್ರೀ ಟಿ.ಎಂ. ರಾಮಕೃಷ್ಣೇಗೌಡ, ಶ್ರೀಮತಿ ಗೌರಬಾಯಿ, ಶ್ರೀ ವಿ. ಬಾಬು, ದಳ ನಾಯಕರು ಹಾಗೂ ಪದಾಧಿಕಾರಿಗಳು ಮತ್ತು ವಿವಿಧ ಜಿಲ್ಲೆಗಳಿಂದ ಆಗಮಿಸಿದಂತಹ ರೋವರ್ಸ್ ಮತ್ತು ರೇಂಜರ್ಸ್ ಉಪಸ್ಥಿತರಿದ್ದರು.





* ಆಗಸ್ಟ್ 25 ರಂದು ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು, ಉಡುಪಿ–ಚಿಕ್ಕಮಗಳೂರು ಸಂಸದರು ಮತ್ತು ಮಾಜಿ ಸಚಿವರಾದ ಮಾನ್ಯ ಕೋಟ ಶ್ರೀನಿವಾಸ ಪೂಜಾರಿ ರವರನ್ನು ಭೇಟಿ ಮಾಡಿ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳಿಗೆ ಸಹಕಾರ ಮಾರ್ಗದರ್ಶನ ನೀಡುವಂತೆ ಸಹಕಾರ ಮಾರ್ಗದರ್ಶನ ನೀಡುವಂತೆ ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ಜಯಕರ ಶೆಟ್ಟಿ ಇಂದ್ರಾಳಿ, ರಾಜ್ಯ ಸಂಘಟನಾ ಆಯುಕ್ತ ಶ್ರೀ ಎಂ. ಪ್ರಭಾಕರ್ ಭಟ್ ಹಾಗೂ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಆಗಸ್ಟ್ 25 ರಂದು ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಉಡುಪಿ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ಉಡುಪಿ ಜಿಲ್ಲಾ ಸಂಸ್ಥೆಯ ವತಿಯಿಂದ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳಿಗೆ ಆಯೋಜಿಸಿದ ರೋವರಿಂಗ್ ಮತ್ತು ರೇಂಜರಿಂಗ್ ಪ್ರಾರಂಭಿಕ ಶಿಬಿರವನ್ನು ಉದ್ಘಾಟಿಸಿ ಶುಭಹಾರೈಸಿದರು.



ಈ ಸಂದರ್ಭದಲ್ಲಿ ಉಪನಿರ್ದೇಶಕರು (ಪದವಿ ಪೂರ್ವ ಶಿಕ್ಷಣ ಇಲಾಖೆ) ಶ್ರೀ ಮಾರುತಿ ರವರು, ಪ್ರಾಂಶುಪಾಲರ ಸಂಘದ ಅಧ್ಯಕ್ಷರಾದ ಶ್ರೀ ವರ್ಗಿಸ್, ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಜಯಕರ ಶೆಟ್ಟಿ ಇಂದ್ರಾಳಿ, ರಾಜ್ಯ ಸಂಘಟನಾ ಆಯುಕ್ತ ಶ್ರೀ ಪ್ರಭಾಕರ್ ಭಟ್, ಜಿಲ್ಲಾ ಸಂಸ್ಥೆ ಪದಾಧಿಕಾರಿಗಳಾದ ಶ್ರೀ ಜನಾರ್ದನ್ ಕೊಡವೂರು, ಶ್ರೀಮತಿ ಜ್ಯೋತಿ ಪೈ, ಆನಂದ ಅಡಿಗ, ಶ್ರೀಮತಿ ಸುಮನ್ ಶೇಖರ್ ಸೇರಿದಂತೆ ಇತರರು ಉಪಸ್ಥಿತರಿದ್ದರು. ಜಿಲ್ಲೆಯ ವಿವಿಧ ಕಾಲೇಜುಗಳಿಂದ ಉಪನ್ಯಾಸರು ಭಾಗವಹಿಸಿದ್ದರು.



* ಆಗಸ್ಟ್ 25 ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಉಡುಪಿ ಜಿಲ್ಲೆಯ ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀಮತಿ ಟಿ.ಕೆ. ಸ್ವರೂಪ, ಭಾ.ಆ.ಸೇ ರವರನ್ನು ಭೇಟಿ ಮಾಡಿ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳಿಗೆ ಸಂಪೂರ್ಣ ಸಹಕಾರ ಮಾರ್ಗದರ್ಶನ ನೀಡುವಂತೆ ಕೋರಿ ಚರ್ಚಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಜಯಕರ್ ಶೆಟ್ಟಿ ಇಂದ್ರಾಳಿ, ಜಿಲ್ಲಾ ಆಯುಕ್ತರಾದ ಶ್ರೀ ಜನಾರ್ಧನ ಕೊಡವೂರು, ಜಿಲ್ಲಾ ಗೈಡ್ ಆಯುಕ್ತೆ ಶ್ರೀಮತಿ ಜ್ಯೋತಿ ಪೈ, ಜಿಲ್ಲಾ ಕಾರ್ಯದರ್ಶಿ ಶ್ರೀ ಆನಂದ್ ಅಡಿಗೆ, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಪ್ರಭಾಕರ್ ಭಟ್, ಎ.ಎಸ್.ಒ.ಸಿ ಶ್ರೀಮತಿ ಸುಮನ್ ಶೇಖರ್ ಹಾಗೂ ಮುಂತಾದವರು ಉಪಸ್ಥಿತರಿದ್ದರು.

* ಆಗಸ್ಟ್ 25ರಂದು ಆನಂದ ತೀರ್ಥ ವಿದ್ಯಾಲಯ, ಕುಂಜಾರಗಿರಿ, ಕಟ್ಟಾಡಿ, ಉಡುಪಿ ಇಲ್ಲಿಗೆ ಮಾಜಿ ಸಚಿವರು ಮತ್ತು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಭೇಟಿ ನೀಡಿ ಆಗಸ್ಟ್ 20 ರಿಂದ 23ರ ವರೆಗೆ ರಾಜ್ಯ ಮಟ್ಟದ ಕಬ್, ಬುಲ್‌ಬುಲ್ಸ್ ಉತ್ಸವ ಸಂಘಟಿಸುವ ಬಗ್ಗೆ ಪೂರ್ವ ಸಿದ್ಧತಾ ಸಭೆಯುನ್ನು ಸಂಘಟಿಸಲಾಯಿತು. ಶಾಲಾ ಆಡಳಿತ ಮಂಡಳಿಯು ಟ್ರಸ್ಟಿ ಶ್ರೀ ಮಧ್ವರಾಜ ಭಟ್, ಶಾಲಾ ಪ್ರಾಂಶುಪಾಲರಾದ ಶ್ರೀಮತಿ ಗೀತಾ ಕೋಟಿಯಾನ್, ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ಜಯಕರ ಶೆಟ್ಟಿ ಇಂದ್ರಾಳಿ, ಶ್ರೀ ಜನಾರ್ದನ ಕೊಡವೂರು, ಶ್ರೀ ಎಂ. ಪ್ರಭಾಕರ್ ಭಟ್, ಶ್ರೀಮತಿ ಸುಮನ್ ಶೇಖರ್ ಇವರುಗಳು ಉಪಸ್ಥಿತರಿದ್ದರು.





The HAL Rover Crew had their Annual Camp 2025 at Ganganagar, West Bengal from 28th July to 8th August 2025,under the leadership of RSL Sri H.L. Adarshkumar. 12 Rover Scouts attended the camp.

Sri P. Nandakumar, Ex RSL, HAL Rover Crew also accompanied the Rovers. The Rovers also visited HAL Barrackpur Division and met the General Manager of the Division. Sri Soumya Kanti Guha and briefed about our purpose of the camp. The Rovers had very informative interaction with the Rajaya Puraskar Scouts and Guides. The Rovers also met the officials of the west Bengal Headquarters.

# 15th ASIA PACIFIC REGIONAL Conference (WAGGGS)

**held at The Leela Ambience Convention Hotel, New Delhi, India from 19th to 23rd August 2025**

It was a proud moment for The Bharat Scouts & Guides, India to host the 15th Asia Pacific Regional Conference held at At Leela Ambience Convention Hotel, New Delhi, India from 19th to 23rd August, 2025

The Participants shared their leadership journeys, simulating the Regional Conference governance processes, learning skills, leadership to be used into global spaces like WAGGGS!

The day began with a traditional Indian welcome of tika and aarti, followed by a vibrant flag march with delegates from 23 Member Organizations. The World Song and BSG Prayer filled the hall with unity and spirit, while inspiring words from WAGGGS leaders and The Bharat Scouts and Guides dignitaries added meaning to the occasion.

Colorful Haryana and Rajasthan folk dances brought joy to the audience, and Dato' Dr. Juseon Byun was honored for 25 years of dedicated service. The day concluded with gratitude, smiles, and a memorable group photo - a beautiful start to a journey of leadership, culture, and togetherness.

India Night - was the highlight of the day, exploring the rich culture and diversity of our country!. The celebrations of the 09th FAPW REGIONAL GATHERING and the 25 years of FAPW was grace by Her Majesty Tunku Azizah Aminah Maimunah Iskandariah, Queen of Malaysia,

Dr. Rupam Sandhu, Headquarters Commissioner of Haryana State Bharat Scoutls and Guides, has been elected as a member of the Asia Pacific Regional Committee (2025–2028) of the World Association of Girl Guides and Girl Scouts (WAGGGS).

The Bharat Scouts and Guides, India has made a remarkable mark at the 15th Asia-Pacific Regional Conference by bagging multiple prestigious awards!. We are proud to Mention that the BSG, Karnataka's contribution and participation in the Conference is remarkable.

* Our State Commissioner (G) Smt. Geetha Nataraj, as Vice President of BSG, India has acted as the Advisor of the Conference Host Committee.
* Mrs. Radha Venkatesh, ASC(G), was the Support Staff, FAPW Committee
* Our State Secretary Sri Gangappa Gowda attended the India Night on behalf of our State Chief Commissioner Sri P.G.R. Sindhia.
* 8 Rangers with their Ranger Leader from Govinda Dasa College and Govinda Dasa Pre-University College of Suratkal Dakshina Kannada, were part of the Ranger Service Team who have rendered their utmost services and have performed cultural dances at the FAPW Pin Ceremony and at the Closing Ceremony showcasing our rich culture and tradition.





Under the dynamic leadership of our Chief National Commissioner Dr. K K. Khandelwal and the Director Ms. Darshana Pawaskar and her team, hosting the 15th Asia Pacific Regional Conference was a tremendous success. Hearty congratulations to all the commissioners, professionals, staff and members who showcased dedication, leadership, and the true spirit of Scouting/Guiding! and have made India proud!

- Report By: Smt. Geetha Nataraj, S.C (G)
Smt. Radha Venkatesh, A.S.C (G)



# ಜಿಲ್ಲಾ ವಾರ್ತೆಗಳು

## ಬಳ್ಳಾರಿ

* ಆಗಸ್ಟ್ 01 ರಂದು ವಿಶ್ವ ಸ್ಕಾರ್ಫ್ ದಿನಾಚರಣೆಯನ್ನು ಸಿರುಗುಪ್ಪ ತಾಲ್ಲೂಕು ಬಳ್ಳಾರಿ ಜಿಲ್ಲೆಯ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಆಚರಿಸಲಾಯಿತು. ಸರ್ಕಾರಿ ಪ್ರೌಢ ಶಾಲೆ ಅರಳಿಗನೂರು ತಾಲ್ಲೂಕು ಸಿರಗುಪ್ಪ ಜಿಲ್ಲೆ ಬಳ್ಳಾರಿಯಲ್ಲಿ ಶ್ರೀ ಹುಸೇನ್ ಪೀರ, ಮುಖ್ಯ ಗುರುಗಳು, ಶ್ರೀ ನಟರಾಜ ಸ್ವಾಮಿ, ಎ.ಎಲ್.ಟಿ.(ಸ್ಕೌ) ಕಾರ್ಯದರ್ಶಿಗಳು, ಶ್ರೀ ಜಿ. ಯೋಗೀಶ್, ಖಜಾಂಚಿಗಳು ಸ್ಥಳೀಯ ಸಂಸ್ಥೆ ಸಿರುಗುಪ್ಪ ಜಿಲ್ಲೆ ಬಳ್ಳಾರಿ, ಸಹ ಶಿಕ್ಷಕರು ಹಾಗೂ ಸ್ಕೌಟ್ಸ್ ಮಕ್ಕಳು ಭಾಗವಹಿಸಿದ್ದರು. ಮುಖ್ಯ ಗುರುಗಳು ಮಾವಿನ ಸಸಿ ನೆಡುವುದರೊಂದಿಗೆ ವಿಶ್ವ ಸ್ಕಾರ್ಫ್ ದಿನದ ಶುಭಾಶಯಗಳನ್ನು ತಿಳಿಸಿದರು. ಶಾಂತಿನಿಕೇತನ ವಿದ್ಯಾ ಮಂದಿರ ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢಶಾಲೆ ಬಳ್ಳಾರಿ ರಸ್ತೆ ಸಿರುಗುಪ್ಪದಲ್ಲಿ ಶಾಲಾ ಆಡಳಿತ ಮಂಡಳಿಯ ಮುಖ್ಯಸ್ಥರಾದ, ಶ್ರೀ ಕೆ. ಕೃಷ್ಣ, ಮುಖ್ಯ ಗುರುಗಳಾದ ಶ್ರೀಮತಿ ಲಲಿತಶಾಸ್ತ್ರಿ, ಶ್ರೀಮತಿ ರುಕ್ಸಾನ ಪರ್ವೀನ್, ಸ್ಕೌಟ್ ಶಿಕ್ಷಕರಾದ ಶ್ರೀ ಸುಧೀಂದ್ರ .ಕೆ, ಗೈಡ್ ಕ್ಯಾಪ್ಟನ್ ಶ್ರೀಮತಿ ಯೋಗೇಶ್ವರಿ ಮತ್ತು ಎಲ್ಲಾ ಶಿಕ್ಷಕಿಯರು ಹಾಗೂ ಸ್ಕೌಟ್ಸ್-ಗೈಡ್ಸ್‌ಗಳು ಹಾಗೂ ಶಿಕ್ಷಕರು ಭಾಗವಹಿಸಿದರು. ಶಾಲಾ ಆವರಣವನ್ನು ಸ್ವಚ್ಛಗೊಳಿಸುವುದರ ಮೂಲಕ ವಿಶ್ವ ಸ್ಕಾರ್ಫ್ ದಿನಾಚರಣೆಯನ್ನು ಆಚರಿಸಿದರು ಮತ್ತು ಸಮುದಾಯ ಸೇವಾ ಚಟುವಟಿಕೆ ಮಾಡಿಸಿದರು. ಶ್ರೀ ನಟರಾಜ ಸ್ವಾಮಿ ಕಾರ್ಯದರ್ಶಿಗಳು ತಾಲ್ಲೂಕಿನ ಎಲ್ಲಾ ಶಾಲಾ-ಕಾಲೇಜುಗಳಲ್ಲಿ ವಿಶ್ವ ಸ್ಕಾರ್ಫ್ ದಿನದ ಅಂಗವಾಗಿ 15 ದಿನಗಳವರೆಗೆ "ದಿನಕ್ಕೊಂದು ಒಳ್ಳೆಯ ಕೆಲಸ" ಅಭಿಯಾನ ಮಾಡಲು ತಿಳಿಸಿದರು.



– ಆಗಸ್ಟ್ 20 ರಂದು 'ಪರಿಸರ ಸ್ನೇಹಿ ಗಣೇಶ ಕಾರ್ಯಕ್ರಮ'ವನ್ನು ಜಿಲ್ಲಾ ಸಂಸ್ಥೆ ಬಳ್ಳಾರಿ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬಳ್ಳಾರಿ ಇವರ ಸಹಯೋಗದೊಂದಿಗೆ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಭವನ ಬಳ್ಳಾರಿಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಟಿ.ಎಂ. ಸಿದ್ದೇಶ್ವರ್ ಬಾಬು, ಪರಿಸರಾಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ ಇವರು ನೆರವೇರಿಸಿದರು, ಉದ್ಘಾಟಕರ ನುಡಿಯಲ್ಲಿ ಗೌರಿ-ಗಣೇಶ ಹಬ್ಬ ಆಚರಣೆ ಕ್ರಮಗಳ ಬಗ್ಗೆ ಭಕ್ತಿಭಾವನೆ ಪೂಜೆಯ ಕ್ರಮಗಳ ಬಗ್ಗೆ ಗಣೇಶನ ವಿಸರ್ಜನೆ ಬಗ್ಗೆ ಮಾಹಿತಿಯನ್ನು ನೀಡಿದರು ಮತ್ತು ಮುಖ್ಯ ಅತಿಥಿಗಳಾಗಿ ಶ್ರೀ ಅಲ್ತಾಫ್ ಹುಸೇನ್, ಅಧೀಕ್ಷಕರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬಳ್ಳಾರಿ ಹಾಗೂ ಶ್ರೀ ಕೆ. ಸೋಮಶೇಖರ್, ಕ್ಷೇತ್ರ ಸಹಾಯಕರು, ಕರ್ನಾಟಕ ರಾಜ್ಯ ಮಾಲಿನ್ಯ




ನಿಯಂತ್ರಣ ಮಂಡಳಿ ಬಳ್ಳಾರಿ ಭಾಗವಹಿಸಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಕುಪ್ಪಗಲ್ ವೀರೇಶ್, ಜಿಲ್ಲಾ ಸ್ಕೌಟ್ ಆಯುಕ್ತರು, ಜಿಲ್ಲಾ ಸಂಸ್ಥೆ ಬಳ್ಳಾರಿ ಇವರು ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಶ್ರೀಮತಿ ಮಲ್ಲೇಶ್ವರಿ ಜುಜಾರೆ, ರಾಜ್ಯ ಸಹಾಯಕ ಸಂಘಟನಾ ಆಯುಕ್ತರು, ಕಲ್ಯಾಣ ಕರ್ನಾಟಕದ ಉಸ್ತುವಾರಿ ಸ್ವಾಗತಿಸಿ, ಕಾರ್ಯನಿರ್ವಹಿಸಿದರು.

– ಆಗಸ್ಟ್ 09 ರಂದು ಗುರುಭವನ ಸಿರುಗುಪ್ಪ ಜಿಲ್ಲಾ ಬಳ್ಳಾರಿಯಲ್ಲಿ ಸ್ಕೌಟ್ಸ್-ಗೈಡ್ಸ್, ಕಬ್ಸ್-ಬುಲ್‌ಬುಲ್ಸ್ ಶಿಕ್ಷಕರ ಸಮಾವೇಶ ನಡೆಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಸ್ಥೆಯಿಂದ ಡಿ.ಟಿ.ಸಿ. ಶ್ರೀ ಎಂ. ನಾಗರಾಜ, ಎಲ್.ಟಿ.(ಎಸ್) ಹಾಗೂ ಶ್ರೀ ಸರ್ಫುದ್ದೀನ್ ಎಸ್.ಜಿ.ವಿ., ಬಳ್ಳಾರಿ, ಶ್ರೀ ನಟರಾಜಸ್ವಾಮಿ ಕಾರ್ಯದರ್ಶಿಗಳು ಶ್ರೀ ಯೋಗೀಶ್ .ಜಿ, ಖಜಾಂಚಿ ಶ್ರೀ ಸಿರುಗುಪ್ಪ ಸ್ಕೌಟ್ಸ್-39, ಗೈಡ್ಸ್-28, ಕಬ್ಸ್-6, ಬುಲ್‌ಬುಲ್ಸ್-1 ಒಟ್ಟು 84 ಶಿಕ್ಷಕರು ಭಾಗವಹಿಸಿದ್ದರು. ಹೂವಿನ ಗಿಡಕ್ಕೆ ನೀರು ಹಾಕುವುದರ ಮೂಲಕ ಉದ್ಘಾಟನೆ ಮಾಡಲಾಯಿತು. ಶ್ರೀ ನಟರಾಜ ಸ್ವಾಮಿ ಕಾರ್ಯದರ್ಶಿಗಳು ಪ್ರಾಸ್ತಾವಿಕ ನುಡಿಯನ್ನು ನುಡಿದರು. ಶ್ರೀ ಸರ್ಫುದ್ದೀನ್ ಎಸ್.ಜಿ.ವಿ. ಬಳ್ಳಾರಿ ಇವರನ್ನು ಸ್ಥಳೀಯ ಸಂಸ್ಥೆ ವತಿಯಿಂದ ಸನ್ಮಾನಿಸಲಾಯಿತು.



## ಬೆಂಗಳೂರು ಗ್ರಾಮಾಂತರ

– ಜುಲೈ 25ರಂದು ದೇವನಹಳ್ಳಿ ತಾಲ್ಲೂಕಿಗೆ ನೂತನವಾಗಿ ಆಗಮಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಭೇಟಿ ಮಾಡಿ ಸ್ಕೌಟಿಂಗ್–ಗೈಡಿಂಗ್ ಚಟುವಟಿಕೆಗಳನ್ನು ವಿವರಿಸಿ ತಿಳಿಸಲಾಯಿತು.

– ಜುಲೈ 25ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಉಪನಿರ್ದೇಶಕರು (ಆಡಳಿತ) ಇವರನ್ನು ಭೇಟಿ ಮಾಡಿ ವಾರ್ಷಿಕ ಕ್ರಿಯಾ ಯೋಜನೆ ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು ಹಾಗೂ ಸ್ಕೌಟಿಂಗ್–ಗೈಡಿಂಗ್ ಚಟುವಟಿಕೆಗಳನ್ನು ವಿವರಿಸಿ ತಿಳಿಸಲಾಯಿತು.



– ಜುಲೈ 25 ರಂದು ಬೆಂ. ಗ್ರಾಮಾಂತರ ಜಿಲ್ಲೆಯ ಉಪನಿರ್ದೇಶಕರು (ಪ.ಪೂ.) ಇವರನ್ನು ಭೇಟಿ ಮಾಡಿ ವಾರ್ಷಿಕ ಕ್ರಿಯಾ ಯೋಜನೆ ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು ಹಾಗೂ ಸ್ಕೌಟಿಂಗ್–ಗೈಡಿಂಗ್ ಚಟುವಟಿಕೆಗಳನ್ನು ವಿವರಿಸಿ ತಿಳಿಸಲಾಯಿತು.

– ಜುಲೈ 25 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಇವರನ್ನು ಭೇಟಿ ಮಾಡಿ ವಾರ್ಷಿಕ ಕ್ರಿಯಾ ಯೋಜನೆ ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು ಹಾಗೂ ಸ್ಕೌಟಿಂಗ್–ಗೈಡಿಂಗ್ ಚಟುವಟಿಕೆಗಳನ್ನು ವಿವರಿಸಿ ತಿಳಿಸಲಾಯಿತು.

– ಜುಲೈ 29 ರಂದು ಘಾಟಿ ಸುಬ್ರಹ್ಮಣ್ಯ ದೇವಸ್ಥಾನ ದೊಡ್ಡಬಳ್ಳಾಪುರ ಇಲ್ಲಿ ಜಿಲ್ಲಾ ಮಟ್ಟದಲ್ಲಿ ಸೇವಾ ಶಿಬಿರವನ್ನು ಆಯೋಜಿಸಲಾಗಿತ್ತು. ರೋವರ್ಸ್–ರೇಂಜರ್ಸ್‌ಗಳು ಶಿಬಿರದಲ್ಲಿ ಭಾಗವಹಿಸಿದ್ದರು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ನಾಗರಾಜ್ ಹಾಗೂ ಎಡಿಸಿ ಶ್ರೀ ವೆಂಕಟರಾಜು, ಎಸ್.ಜಿ.ವಿ. ಶ್ರೀ ನಿಹಾಲ್ ಎನ್.ಎಸ್. ಉಪಸ್ಥಿತರಿದ್ದರು.



– ಸ್ಥಳೀಯ ಸಂಸ್ಥೆ ಹೊಸಕೋಟೆ ವತಿಯಿಂದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಹೊಸಕೋಟೆ ಇಲ್ಲಿ ಸ್ಕೌಟ್ಸ್ ಸ್ಕಾರ್ಫ್ ದಿನವನ್ನು ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ಸ್ಥಳೀಯ ಸಂಸ್ಥೆ ಉಪಾಧ್ಯಕ್ಷರಾಗಿರುವ ಶ್ರೀ ಇಮ್ತಿಯಾಜ್ ಪಾಷಾ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀಮತಿ ದಾಕ್ಷಾಯಿಣಿ ದೇವಿ ಮತ್ತು ಶಾಲೆಯ ಇನ್ನಿತರ ಶಿಕ್ಷಕರು ಭಾಗವಹಿಸಿದ್ದರು.



– ಸ್ಥಳೀಯ ಸಂಸ್ಥೆ ನೆಲಮಂಗಲ ತಾಲ್ಲೂಕು ವತಿಯಿಂದ ಜಿ.ಹೆಚ್.ಪಿ.ಎಸ್. ಜಕ್ಕಸಂದ್ರದಲ್ಲಿ ಸ್ಕೌಟ್ಸ್ ಸ್ಕಾರ್ಫ್ ದಿನ ಹಾಗೂ ಸ್ಕೌಟಿಂಗ್ ಸೂರ್ಯೋದಯ ದಿನಾಚರಣೆಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ಪ್ರಕಾಶ್ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಶಾಲೆಯ ಇನ್ನಿತರ ಶಿಕ್ಷಕರು, ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

– ಆಗಸ್ಟ್ 09 ರಿಂದ 10ರ ವರೆಗೆ ರಾಜ್ಯ ಪುರಸ್ಕಾರ ಪೂರ್ವಸಿದ್ಧತಾ ಪರೀಕ್ಷೆಯನ್ನು ಡಾ. ಅನಿಬೆಸೆಂಟ್ ರಾಜ್ಯ ತರಬೇತಿ ಕೇಂದ್ರ ದೊಡ್ಡಬಳ್ಳಾಪುರ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಒಟ್ಟು 147 ಸ್ಕೌಟ್ಸ್ ಹಾಗೂ 177 ಗೈಡ್ಸ್‌ಗಳು ಹಾಗೂ 2 ರೋವರ್ಸ್, 6 ರೇಂಜರ್ಸ್‌ಗಳು ಭಾಗವಹಿಸಿದ್ದರು.

– ಆಗಸ್ಟ್ 15 ರಂದು 79ನೆಯ ಸ್ವಾತಂತ್ರ್ಯ ದಿನಾಚರಣೆಯನ್ನು ಹೊಸಕೋಟೆಯ ಶ್ರೀ ಚನ್ನಬೈರೇಗೌಡ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಮಾನ್ಯ ಶಾಸಕರಾದಂತಹ ಶ್ರೀ ಶರತ್ ಬಚ್ಚೇಗೌಡ ತಹಶೀಲ್ದಾರ್ ಹಾಗೂ ತಾಲ್ಲೂಕಿನ ಹಲವಾರು ಗಣ್ಯರು ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಎಸ್.ಜಿ.ಆರ್.ಎಸ್. ಶಾಲೆಯ ಗೈಡ್‌ಗಳು ಮತ್ತು ಸಿಟಿಜನ್ ಆಂಗ್ಲ ಮಾಧ್ಯಮ ಶಾಲೆಯ ಗೈಡ್ಸ್‌ಗಳು ಪಥಸಂಚಾಲನದಲ್ಲಿ ಭಾಗವಹಿಸಿದ್ದರು. ಇದೇ ಕಾರ್ಯಕ್ರಮದಲ್ಲಿ 2024–25ನೇ ಸಾಲಿನ ರಾಜ್ಯ ಪುರಸ್ಕಾರ ಪಡೆದಂತಹ ವಿದ್ಯಾರ್ಥಿಗಳಿಗೆ ಹಾಗೂ ರಾಜ್ಯಮಟ್ಟದ ಶಿಬಿರದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ನೀಡಿ ಮಾನ್ಯ ಶಾಸಕರು ಶುಭ ಹಾರೈಸಿದರು.



– 79ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮವನ್ನು ದೇವನಹಳ್ಳಿ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ದೇವನಹಳ್ಳಿ ತಾಲ್ಲೂಕು ಶಾಸಕರು ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿ ಶ್ರೀ ಕೆ.ಎಚ್. ಮುನಿಯಪ್ಪ ತಾಲ್ಲೂಕಿನ ತಹಶೀಲ್ದಾರ್, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಇತರೇ ಗಣ್ಯರು ಉಪಸ್ಥಿತರಿದ್ದರು. ದೇವನಹಳ್ಳಿ ತಾಲ್ಲೂಕಿನ ವಾಣಿ ವಿದ್ಯಾ ಕೇಂದ್ರದ ಸ್ಕೌಟ್ಸ್‌ಗಳು ಪಥಸಂಚಲನದಲ್ಲಿ ಭಾಗವಹಿಸಿ ಪ್ರಶಂಸೆಗೆ ಪಾತ್ರರಾದರು.

– ಆಗಸ್ಟ್ 16 ರಿಂದ 17ರ ವರೆಗೆ ಜಿಲ್ಲಾ ಸಂಸ್ಥೆ, ಸ್ಥಳೀಯ ಸಂಸ್ಥೆ ದೊಡ್ಡಬಳ್ಳಾಪುರದ ಜಿ.ಎಚ್.ಪಿ.ಎಸ್. ಅರಳುಮಲ್ಲಿಗೆ ಬಾಗಿಲು ದೊಡ್ಡಬಳ್ಳಾಪುರ ಈ ಶಾಲೆಯಲ್ಲಿ ತಾಲ್ಲೂಕು ಹಂತದ ದ್ವಿತೀಯ ಸೋಪಾನ ಪರೀಕ್ಷೆಯನ್ನು ನಡೆಸಲಾಯಿತು. ಈ ಶಿಬಿರಕ್ಕೆ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ನಾಗರಾಜ್, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಪ್ರಸಾದ್ ಹಾಗೂ ಶಾಲೆಯ ಇತರೆ ಶಿಕ್ಷಕರು, ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.



## ಬೆಂಗಳೂರು ದಕ್ಷಿಣ

– ಬೆಂಗಳೂರು ದಕ್ಷಿಣ ಜಿಲ್ಲಾ ಸಂಸ್ಥೆ ವತಿಯಿಂದ ಜುಲೈ 24 ರಿಂದ 26ರ ವರಗೆ ರಾಜ್ಯ ಕೇಂದ್ರ ಕಛೇರಿ ಆವರಣದಲ್ಲಿ ಬನ್ನಿ ಲೀಡರ್ ತರಬೇತಿ ಶಿಬಿರವನ್ನು ಶ್ರೀಮತಿ ಸುಶೀಲಾ ಮಹಾದೇವ್, ಶ್ರೀ ಎ.ಎಲ್.ಟಿ (ಗೈಡ್) ಇವರ ನಾಯಕತ್ವದಲ್ಲಿ ಆಯೋಜನೆ ಮಾಡಲಾಯಿತ್ತು. ಜಿಲ್ಲೆಯ 9 ಶಿಬಿರಾರ್ಥಿಗಳು ತರಬೇತಿಯಲ್ಲಿ ಭಾಗವಹಿಸಿದರು. ತರಬೇತಿಯ ಸಮಾರೋಪ ಸಮಾರಂಭವು ಶ್ರೀಮತಿ ಗಾಯತ್ರಿ ಗೌಡ, ಜಿಲ್ಲಾ ತರಬೇತಿ ಆಯುಕ್ತರು, ಗೈಡ್ ಅಧ್ಯಕ್ಷತೆಯಲ್ಲಿ ನಡೆಯಿತ್ತು. ಕಾರ್ಯಕ್ರಮದಲ್ಲಿ ಶ್ರೀಮತಿ ಸುಶೀಲಾ ಮಹಾದೇವ್, ಶ್ರೀ ಎ.ಎಲ್.ಟಿ. (ಗೈಡ್) ಶಿಬಿರದ ನಾಯಕರು, ಶ್ರೀಮತಿ ಗಾಯತ್ರಿ, ಜಿ.ಎಲ್.ಟಿ. (ಗೈ) ಶಿಬಿರದ ಸಹ ನಾಯಕರು. ಶಿಬಿರಾರ್ಥಿಗಳು ಉಪಸ್ಥಿತರಿದ್ದರು.



– ಜುಲೈ 26 ರಂದು ಕಾರ್ಗಿಲ್ ವಿಜಯ್ ದಿವಸ್ ಕಾರ್ಯಕ್ರಮವನ್ನು ಬೆಂಗಳೂರು ದಕ್ಷಿಣ ಜಿಲ್ಲೆಯ ದಳಗಳ ಮಟ್ಟದಲ್ಲಿ ವೀರಯೋಧರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮುಂಖಾಂತರ ಆಚರಿಸಲಾಯಿತ್ತು.



– ಬೆಂಗಳೂರು ದಕ್ಷಿಣ ಜಿಲ್ಲೆಯ ದಳ ಮಟ್ಟಗಳಲ್ಲಿ ಆಗಸ್ಟ್ 01 ರಂದು ವಿಶ್ವ ಸನ್‌ರೈಸ್ ಡೇ ಮತ್ತು ವಿಶ್ವ ಸ್ಕಾರ್ಫ್‌ಡೇಯನ್ನು ಪ್ರತಿಜ್ಞೆಯನ್ನು ಮರು ಉಚ್ಚರಿಸುವ ಮೂಲಕ ಮತ್ತು ಸ್ಕಾರ್ಫ್ ಹಾಕುವ ಮುಂಖಾಂತರ ಆಚರಣೆ ಮಾಡಲಾಯಿತು. ಕಬ್ ಬುಲ್-ಬುಲ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್, ದಳ ನಾಯಕರುಗಳು, ಸ್ಥಳಿಯ ಸಂಸ್ಥೆಯ ಮತ್ತು ಜಿಲ್ಲಾ ಪದಾಧಿಕಾರಿಗಳು ವಿಶ್ವ ಸನ್‌ರೈಸ್‌ಡೇ ಮತ್ತು ವಿಶ್ವ ಸ್ಕಾರ್ಫ್‌ಡೇಯನ್ನುಆಚರಿಸಲಾಯಿತು.

– ಆಗಸ್ಟ್ 02 ರಂದು ಬೆಂಗಳೂರು ದಕ್ಷಿಣ ಜಿಲ್ಲಾ ಸಂಸ್ಥೆಯ ವತಿಯಿಂದ ರಾಜ್ಯ ಕೇಂದ್ರ ಕಛೇರಿ ಶ್ರೀ ಕೊಂಡಜ್ಜಿ ಬಸಪ್ಪ ಸಂಭಾಗಣ, ಶಾಂತಿ ಗೃಹ ಬೆಂಗಳೂರಿನಲ್ಲಿ ಆಯೋಜಿಸಲಾದ ಒಂದು ಪ್ರಾರಂಭಿಕ ಶಿಬಿರವನ್ನು ಶ್ರೀ ಟಿ.ಕೆ. ನಾರಾಯಣಸ್ವಾಮಿ, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌ) ಇವರ ನಾಯಕತ್ವದಲ್ಲಿ ಆಯೋಜಿಸಲಾಗಿತ್ತು.



ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಶಿಬಿರವನ್ನು ಉದ್ಘಾಟಿಸಿ ಶಿಬಿರಾರ್ಥಿಗಳನ್ನು ಉದ್ದೇಶಿ ಮಾತನಾಡಿದರು. ಪ್ರಾರಂಭಿಕ ಶಿಬಿರದಲ್ಲಿ ಶ್ರೀ ಎಂ.ಎಸ್ ಸತೀಶ್, ಜಿಲ್ಲಾ ಕಾರ್ಯದರ್ಶಿ ಹಾಗೂ ರಾಜ್ಯ ಜಂಟಿ ಕಾರ್ಯದರ್ಶಿ (ಸ್ಕೌ), ಶ್ರೀ ನಾಗೇಶ್ ಆರ್. ಶಿವಪುರ್, ರಾಜ್ಯ ತರಬೇತಿ ಆಯುಕ್ತರು (ಸ್ಕೌ), ಶ್ರೀ ಟಿ.ಕೆ. ನಾರಾಯಣಸ್ವಾಮಿ, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌ) ಪ್ರಾರಂಭಿಕ ಶಿಬಿರದ ನಾಯಕರು, ಶ್ರೀಮತಿ ಗಾಯತ್ರಿ ಗೌಡ, ಜಿಲ್ಲಾ ತರಬೇತಿ ಆಯುಕ್ತರು (ಗೈ), ಶ್ರೀಮತಿ ವಿಕ್ಟೋರಿಯಾ ಅಮಲಾರಾಣಿ, ಜಿಲ್ಲಾ ಜಂಟಿ ಕಾರ್ಯದರ್ಶಿ (ಗೈ), 90 ಶಿಬಿರಾರ್ಥಿಗಳು ಭಾಗವಹಿಸಿದರು.

– ಆಗಸ್ಟ್ 02 ರಂದು ಬೆಂಗಳೂರು ದಕ್ಷಿಣ ಜಿಲ್ಲೆ, ವಿಲ್ಸನ್ ಗಾರ್ಡನ್ ಸ್ಥಳಿಯ ಸಂಸ್ಥೆಯ ವತಿಯಿಂದ ಗೀತಾ ಗಾಯನ ಸ್ಪರ್ಧೆಯನ್ನು ವಿತ್ರಾ ಅಕಾಡೆಮಿ ಶಾಲೆಯಲ್ಲಿ ಆಯೋಜನೆ ಮಾಡಲಾಯಿತು. ಈ ಕಾರ್ಯಕ್ರಮದ ಮುಕ್ತಾಯ ಸಮಾರಂಭಕ್ಕೆ ಮುಖ್ಯ ಅಥಿತಿಗಳಾಗಿ ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಎಲ್ಲಾರನ್ನೂ ಉದ್ದೇಶಿ ಮಾತಾನಾಡಿ ಶುಭ ಕೋರಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಎಂ.ಎಸ್. ಸತೀಶ್ ಹಾಗೂ ಶಾಲೆಯ ಸಿ.ಇ.ಓ.ಆದ ಶ್ರೀ ತನ್ವೀರ್ ಅಹಮದ್, ಪ್ರಾಂಶುಪಾಲರಾದ ಶ್ರೀಮತಿ ವಾಣಿ ಹಾಗೂ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಮತ್ತು ಕಬ್-ಬುಲ್‌ಬುಲ್, ಸ್ಕೌಟ್ಸ್-ಗೈಡ್ಸ್, ರೇಂಜರ್ಸ್‌ಗಳು ಗೀತಾಗಾಯನ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.



– ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಆಗಸ್ಟ್ 03 ರಿಂದ 05ರ ವರೆಗೆ 3 ದಿನಗಳ ಕಾಲ ಬೆಂಗಳೂರು ದಕ್ಷಿಣ ಜಿಲ್ಲೆಯ ಮುಕ್ತ ದಳ ಮತ್ತು ವಿವಿಧ ಸ್ಕೌಟ್ಸ್-ಗೈಡ್ಸ್ 15ನೇ ಕಂಠೀರವ ಮುಕ್ತ ದಳ, ಆಕ್ಸ್‌ಫರ್ಡ್ ಶಾಲೆ, ಅಪೋಲೋ ಪಬ್ಲಿಕ್ ಸ್ಕೂಲ್, ಅಪೋಲೋ ಕಾನ್ವೆಂಟ್, ಮಾರ್ಡನ್ ಶಾಲೆ, ಅಡನ್ ಶಾಲೆಯನ್ನು ಭೇಟಿ ನೀಡಿ ಸ್ಕೌಟಿಂಗ್ ಮತ್ತು ಗೈಡಿಂಗ್ ಚಟುವಟಿಕೆಗಳು ಉತ್ತಮವಾಗಿ ನೆಡೆಸುವಂತೆ ಶಾಲೆಯ ಆಡಳಿತ ಮಂಡಳಿ ಮತ್ತು ಶಾಲೆಯ ಪ್ರಾಂಶುಪಾಲರ ಜೊತೆ ಚರ್ಚಿಸಿದರು. ಈ ಸಂದರ್ಭದಲ್ಲಿ ಶ್ರೀ ಎಂ.ಕೆ. ಖಾನ್, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಎಂ.ಎಸ್. ಸತೀಶ್, ಜಿಲ್ಲಾ ಕಾರ್ಯದರ್ಶಿ, ಶ್ರೀ ಟಿ.ಕೆ. ನಾರಾಯಣ ಸ್ವಾಮಿ, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌ), ಸ್ಕೌಟ್ಸ್-ಗೈಡ್ಸ್‌ಗಳು ಹಾಗೂ ದಳ ನಾಯಕರುಗಳು ಭಾಗವಹಿಸಿದರು.



– ಆಗಸ್ಟ್ 15 ರಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಉಪನಿರ್ದೇಶಕರ ಕಛೇರಿ ಆವರಣದಲ್ಲಿ 79ನೇ ಸ್ವಾತಂತ್ರ ದಿನಾಚರಣೆಯನ್ನು ಆಚರಿಸಲಾಯಿತ್ತು. ಶ್ರೀ ಎಂ. ವಿವೇಕಾನಂದ, ಉಪನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ ಇವರು ಧ್ವಜಾರೋಹಣ ನೆರವೇರಿಸಿ ಎಲ್ಲರನ್ನು ಉದ್ದೇಶಿ ಮಾತಾನಾಡಿದರು. ಕಾರ್ಯಕ್ರಮದಲ್ಲಿ ಶ್ರೀ ಶಿವಮೂರ್ತಿ ಜಿಲ್ಲಾ ದೈಹಿಕ



ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರ ಕಛೇರಿಯ ಸಿಬ್ಬಂದಿಗಳು, ಶ್ರೀ ಚಂದ್ರು ಪಿ, ಎ.ಎಸ್.ಓ.ಸಿ, ಶ್ರೀ ವಿಶ್ವನಾಥ್ ರೋವರ್ಸ್ ಉಪಸ್ಥಿತರಿದರು.

– ಬೆಂಗಳೂರು ದಕ್ಷಿಣ ಜಿಲ್ಲೆಯ ದಳ ಮಟ್ಟದಲ್ಲಿ ಆಗಸ್ಟ್ 15 ರಂದು 79ನೇ ಸ್ವಾತಂತ್ರ ದಿನಾಚರಣೆಯನ್ನು ಆಚರಿಸಲಾಯಿತ್ತು. ಪಥಸಂಚಲನ, ಹಾಡು ನೃತ್ಯ ಹಾಗೂ ಇನ್ನಿತರ ಕಾರ್ಯಕ್ರಮಗಳ ಮೂಲಕ ದೇಶ ಪೇಮ ಮತ್ತು ದೇಶಭಕ್ತಿಯನ್ನು ಸಾರಿದರು.

– ಆಗಸ್ಟ್ 20 ರಂದು ಬೆಂಗಳೂರು ದಕ್ಷಿಣ ಜಿಲ್ಲೆಯ ದಳ ಮಟ್ಟದಲ್ಲಿ ಸದ್ಭಾವನಾ ದಿನಾಚರಣೆಯನ್ನು ಪ್ರತಿಜ್ಞೆಯನ್ನು ಸ್ವೀಕರಿಸುವ ಮುಖಾಂತರ ಆಚರಿಸಲಾಯಿತು.

## ಬೆಂಗಳೂರು ಉತ್ತರ

- The Shivajinagar Local Association conducted Patorl Leaders and Sixers Caomp on July 18th at Alliance Francaise Bangalore. On this occasion Vice Presiden of the LA Presented the Kempegowda Award to the following members. Sri B.S. Patil IAS (R), Former Chief Secretary to Government of Karnataka; Sri T.S. Lucas, President and Leader Trainer (S); Sri K. Mohandev Alva, Former President of Alliance Francise Bangalore Cubs, Bulbus, Scouts and Guides were present. Sri Prabhudeva J. Chigateri Vice-President of SLA Sponsored the Programme in loving memory of his father late Jayanna M. Chigateri. The Secretary co-ordinated the Activities. Unit leaders also were present.



– ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ಆಗಸ್ಟ್ 14 ರಂದು ಬೆಂಗಳೂರು ನಗರ ಪ್ರದೇಶದಲ್ಲಿ ಇರುವ ಸಾರ್ವಜನಿಕ ಪ್ರತಿಮೆಗಳನ್ನು ರೋವರ್–ರೇಂಜರ್ ಸಹಕಾರದಲ್ಲಿ ಸ್ವಚ್ಛತೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಹಾಗೂ ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ಪ್ರಸನ್ನಕುಮಾರ್ ಭಾಗವಹಿಸಿದ್ದರು.







– ಜುಲೈ 26 ರಂದು ಬೆಂಗಳೂರು ಉತ್ತರ ಜಿಲ್ಲೆಯಲ್ಲಿ ದಳಮಟ್ಟದಲ್ಲಿ ಕಾರ್ಗಿಲ್ ದಿವಸ್ ದಿನಾಚರಣೆಯನ್ನು ಆಚರಿಸಲಾಯಿತು.



– ಆಗಸ್ಟ್ 01 ರಂದು ವಿಶ್ವ ಸ್ಕಾರ್ಫ್ ದಿನಾಚರಣೆಯನ್ನು ಬೆಂಗಳೂರು ಉತ್ತರ ಜಿಲ್ಲೆಯಲ್ಲಿ ದಳ ಮಟ್ಟದಲ್ಲಿ ಆಚರಿಸಲಾಯಿತು.



– ಆರ್.ಟಿ. ನಗರ ಪಬ್ಲಿಕ್ ಶಾಲೆ ಇಲ್ಲಿ ಆಗಸ್ಟ್ 06 ರಂದು ಸ್ಕೌಟ್ ಗೈಡ್ ಶಿಕ್ಷಕರ ಮತ್ತು ಆಗಸ್ಟ್ 07 ರಂದು ಕಬ್–ಬುಲ್‌ಬುಲ್ ಶಿಕ್ಷಕರ ಸಮಾವೇಶವನ್ನು ಹಮ್ಮಿಕೊಳ್ಳಲಾಯಿತು. ಶಿಬಿರದ ಉದ್ಘಾಟನೆಯನ್ನು ಮಾಡಿದ ಜಿಲ್ಲಾ ಮುಖ್ಯ ಆಯುಕ್ತರಾದ ಡಾ॥ ಪ್ರಸನ್ನ ಕುಮಾರ್ ಇವರು ಬೆಂಗಳೂರು ಉತ್ತರ ಜಿಲ್ಲೆ ಸ್ಕೌಟಿಂಗ್ ಪ್ರಗತಿಗೆ ಎಲ್ಲರೂ ಕೈಜೊಡಿಸಬೇಕೆಂದು ಕರೆನೀಡಿ ಸಮಾವೇಶಕ್ಕೆ ಶುಭ ಕೋರಿದರು. ಎಲ್ಲರನ್ನೂ ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಉತ್ತಮ ದಳಗಳಿಗೆ ಬಹುಮಾನ ನೀಡಲಾಯಿತು. ಶ್ರೀ ಸತ್ಯಜಿತ್ ಚಟರ್ಜಿರವರು ಸಮಾವೇಶದ ಸ್ಕೌಟ್ ವಿಭಾಗದ ನೇತೃತ್ವ ವಹಿಸದ್ದರು, ಗೈಡ್ ವಿಭಾಗದ ನೇತೃತ್ವ ಶ್ರೀಮತಿ ಜ್ಯೋತಿ ವಹಿಸಿದ್ದರು ವಹಿಸಿದ್ದರು.

– ಆಗಸ್ಟ್ 07 ರಂದು ಮುಖ್ಯ ಅತಿಥಿಯಾಗಿ ರಾಜ್ಯ ಮುಖ್ಯ ಆಯುಕ್ತರು ಶ್ರೀ ಪಿ.ಜಿ.ಆರ್. ಸಿಂಧ್ಯ ಭಾಗವಹಿಸಿ ನಿವೃತ್ತಿಯಾದ ಶಿಕ್ಷಕರನ್ನು ಸನ್ಮಾನಿಸಿದರು. ನಂತರ ಕಬ್–ಬುಲ್‌ಬುಲ್ ಬನ್ನಿ ಉತ್ತಮ ಘಟಕಗಳಿಗೆ ಬಹುಮಾನ ನೀಡಲಾಯಿತು. ರಾಜ್ಯ ಮುಖ್ಯ ಆಯುಕ್ತರು ಸಭೆ ಉದ್ದೇಶಿ ನಿಮ್ಮ ಸೇವೆ ಅನನ್ಯವಾಗಿದೆ ಇದು ಮುಂದುವರೆಯಲಿ ಎಂದರು.



– ಜುಲೈ 26 ಮತ್ತು 27 ರಂದು ಜಿಲ್ಲಾ ಕಛೇರಿಯ ಚಾಮುಂಡಿ ಸ್ಕೌಟ್ಸ್ ಮುಕ್ತದಳ ಇಲ್ಲಿ ಪಿ.ಯು ಕಾಲೇಜಿನ ರೋವರ್–ರೇಂಜರ್‌ಗಳಿಗೆ ರೋವರ್ ಮೇಟ್ ರೇಂಜರ್ ಮೇಟ್ ಶಿಬಿರವನ್ನು ಆಯೋಜಿಸಲಾಯಿತು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಶಿಬಿರವನ್ನು ಸಂಘಟಿಸಿದರು.



– ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ ಸ್ಕೌಟ್ಸ್–ಗೈಡ್ಸ್ ನಡಿಗೆ ಹಳ್ಳಿ ಕಡೆಗೆ ಎಂಬ ಸಮುದಾಯದ ಸೇವಾ ಕಾರ್ಯಕ್ರಮದಡಿಯಲ್ಲಿ ಜುಲೈ 30 ರಂದು ಗಂಟಿಗಾನಹಳ್ಳಿಯಲ್ಲಿ ಯಲಹಂಕ ಬೆಂಗಳೂರು ಇಲ್ಲಿ ಸಮುದಾಯ ಸೇವೆ ಮಾಡಲಾಯಿತು. ಗಂಟಿಗಾನಹಳ್ಳಿಯ ನದಿಯ ದಂಡೆಯಲ್ಲಿ ಶೇಖರಣೆಗೊಂಡ ಪ್ಲಾಸ್ಟಿಕ್ ತ್ಯಾಜ್ಯವನ್ನು ತೆಗೆದು ಸ್ವಚ್ಛಗೊಳಿಸಲಾಯಿತು. ಬೆಂಗಳೂರು ಉತ್ತರ ಜಿಲ್ಲೆಯ ವಿವಿಧ ಕಾಲೇಜುಗಳಿಂದ 35 ರೋವರ್ ರೇಂಜರ್ ಭಾಗವಹಿದರು.

– ಮಾಣಿಕ್ ಷಾ ಪೇರೆಡ್ ಮೈದಾನದಲ್ಲಿ ನಡೆದ ರಾಜ್ಯ ಮಟ್ಟದ ಪಥಸಂಚಲನೆಯಲ್ಲಿ ಬೆಂಗಳೂರು ಉತ್ತರ ಜಿಲ್ಲೆಯ ಆರ್.ಟಿ.ನಗರ ದ್ವಿತೀಯ ಬಹುಮಾನ ಗಳಿಸಿತು.



## ಬೆಂಗಳೂರು ಪೂರ್ವ

– ಸಂತ ಜೋಸೆಫರ ಪ್ರೌಢ ಶಾಲೆಯ ಗೈಡ್ ಕ್ಯಾಪ್ಟನ್ ಶ್ರೀಮತಿ ಹಂಸವೇಣಿರವರು ಜುಲೈ 5 ರಿಂದ 11ರ ವರಗೆ ನಡೆದ ಎಸ್.ಎಸ್.ಎಲ್.ಸಿ ಪೂರಕ ಪರೀಕ್ಷಾ ಕೇಂದ್ರದಲ್ಲಿ ತಮ್ಮ ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ತಂಡದೊಂದಿಗೆ ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿದ್ದಾರೆ.



– ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹೀಲಲಗೆ ಶಾಲೆಯ ಗೈಡ್ ಕ್ಯಾಪ್ಟನ್ ಶ್ರೀಮತಿ ಭಾರತಿ ಕೊಡಗಲಿ ನೇತೃದಲ್ಲಿ ಜುಲೈ 10 ರಂದು ತಮ್ಮ ಘಟಕದ ಸ್ಕೌಟ್ಸ್–ಗೈಡ್ಸ್‌ಗಳಿಗೆ ಒಂದು ದಿನದ ಹೈಕ್ ಅಂಗವಾಗಿ ಹೀಲಲಗೆ ಸ್ಥಳೀಯ ರೈಲ್ ನಿಲ್ದಾಣಕ್ಕೆ ಭೇಟಿ ನೀಡಿ. ರೈಲ್ವೆ ಇಲಾಖೆ ಅಧಿಕಾರಿಗಳಿಂದ ರೈಲ್ವೆ ಇಲಾಖೆಯ ಅನೇಕ ಮಾಹಿತಿಯನ್ನು ತಿಳಿಸಲಾಯಿತು.

– ಜುಲೈ 05 ರಂದು ಹೆಬ್ಬಗೋಡಿಯ ಸೆಂಟ್ ಮೇರಿಸ್ ಪ್ರೌಢ ಶಾಲೆಯ ಸ್ಕೌಟ್ ಮಾಸ್ಟರ್ ಶ್ರೀ ಟಿ. ಕೃಷ್ಣಾನಾಯಕ್ ಹಾಗೂ ಗೈಡ್ ಕ್ಯಾಪ್ಟನ್ ಶ್ರೀಮತಿ ಸೆಲಿನಾ ಮೇರಿರವರ ನೇತೃತ್ವದಲ್ಲಿ ಶಾಲೆಯ ನೂತನ ಸ್ಕೌಟ್ಸ್–ಗೈಡ್ಸ್‌ಗಳಿಗೆ ದೀಕ್ಷಾ ಸಮಾರಂಭವನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಶಾಲಾ ಸಂಸ್ಥಾಪಕರಾದ ಡಾ. ಎಲ್.ಎನ್. ಬಾಬು, ಮುಖ್ಯ ಶಿಕ್ಷಕಿ ಶ್ರೀಮತಿ ರೋಸ್ ಮೇರಿ ಹಾಗೂ ಕಬ್ ಮಾಸ್ಟರ್ ಶ್ರೀ ಟಿ.ಆರ್. ರಮೇಶ್ ಮೊದಲಾದವರು ಭಾಗವಹಿಸಿದ್ದರು.



– ಆಗಸ್ಟ್ 20 ರಂದು ಜಿಲ್ಲಾ ಕಛೇರಿಯಲ್ಲಿ 'ಸದ್ಭಾವನಾ ದಿನಾಚರಣೆ' ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಸಮಾಜ ಕಂಡಂತ ಧೀಮಂತ ನಾಯಕರು ಹಾಗೂ ಸಮಾನತೆಯ ಹರಿಕಾರರೆಂದು ದೇಶದಾದ್ಯಂತ ಹೆಸರುವಾಸಿಯಾಗಿರುವ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ರಾಜೀವ್ ಗಾಂಧಿರವರ ಭಾವಚಿತ್ರಕ್ಕೆ ಹೂ ಗಾಕಿ ದೀಪ ಬೆಳಗಿಸಿ ಪೂಜೆ ಸಲ್ಲಿಸಲಾಯಿತು.



## ಬೀದರ್

– ಆಗಸ್ಟ್ 01 ರಂದು ಸ್ಕಾರ್ಫ್ ಹಾಗೂ ಸನ್‌ರೈಸ್ ಡೇ ಅನ್ನು ಬೀದರ್ ಜಿಲ್ಲೆಯ ಯುನಿಕ್ ಪಬ್ಲಿಕ್ ಶಾಲೆಯಲ್ಲಿ ಆಚರಿಸಲಾಯಿತು ಮತ್ತು ವಿಶ್ವವಿದ್ಯಾಲಯ ಬೀದರ್ ಇಲ್ಲಿಗೆ ಭೇಟಿ ನೀಡಿ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಕುಮಾರಿ ಸುರೇಖಾ ಅವರಿಗೆ ಹಾಗೂ ಜಿಲ್ಲಾ ನೆಹರು ಕ್ರೀಡಾಂಗಣದ ಸಹಾಯಕ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಶ್ರೀಮತಿ ರಮ್ಯಾ ಆರ್. ಅವರಿಗೆ ಸ್ಕಾರ್ಫ್ ಧಾರಣೆ ಮಾಡಿ ಸ್ಕೌಟಿಂಗ್ ಸ್ವಾಗತಿಸಲಾಯಿತು.



– ಸ್ಥಳೀಯ ಸಂಸ್ಥೆ ಬಸವ ಕಲ್ಯಾಣದಲ್ಲಿ ಕಾರ್ಯದರ್ಶಿಯಾದ ಶ್ರೀ ಅನಿಲ್ ಕುಮಾರ್ ಶಾಸ್ತ್ರಿ ಅವರ ನೇತೃತ್ವದಲ್ಲಿ ಕಬ್ಸ್–ಬುಲ್‌ಬುಲ್ಸ್‌ಗಳಿಗೆ ಯೂತ್ ಸೇವಾ ವತಿಯಿಂದ ಡಾಕ್ಟರ್ ಶೀತಲ್ ಅವರು ತಾಲ್ಲೂಕಿನ ಪ್ರಮಾಣ ನೀಡಿದರು.

– ಆಗಸ್ಟ್ 14 ರಂದು ಬೀದರ್ ಜಿಲ್ಲೆ ಆಡಳಿತ ವತಿಯಿಂದ ತ್ರಿರಂಗ ಯಾತ್ರೆ ಹಾಗೂ ಆಗಸ್ಟ್ 15 ರಂದು ನಗರದ ನೆಹರು ಕ್ರೀಡಾಂಗಣದಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆ ಆಚರಣೆಯಲ್ಲಿ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿಗಳಾದಂತಹ ಶ್ರೀ ಶಿಲ್ಪಶರ್ಮ ಹಾಗೂ ಕಾರ್ಯನಿರ್ವಾಹಣ ಅಧಿಕಾರಿಗಳಾಂತ ಶ್ರೀ ಗಿರೀಶ್ ದಿಲೀಪ್ ಬದೋಲೆ ಹಾಗೂ ಪೊಲೀಸ್ ವರಿಷ್ಠಾಧಿಕಾರಿ ಶ್ರೀ ಪ್ರದೀಪ್ ಕುಂಟೆ ಅವರು ಮಕ್ಕಳಿಗೆ ಪ್ರಶಸ್ತಿಯನ್ನು ನೀಡಿದರು.



– ರಕ್ಷಾಬಂಧನ ಹಾಗೂ ಕೃಷ್ಣ ಜನ್ಮಾಷ್ಟಮಿಯನ್ನು ಜಿಲ್ಲಾ ಸಂಸ್ಥೆ ವತಿಯಿಂದ ಯೂನಿಕ್ ಪಬ್ಲಿಕ್ ಶಾಲೆ ಹಾಗೂ ಮಿಲೆನಿಯಂ ಶಾಲೆಗಳಲ್ಲಿ ಆಚರಿಸಲಾಯಿತು ಹಾಗೂ ಸ್ಥಳೀಯ ಸಂಸ್ಥೆ ಸಮವಸ್ತ್ರವನ್ನು ಸರ್ಕಾರಿ ಕನ್ಯೆ ಪ್ರೌಢಶಾಲೆಯ ಗೈಡ್ ವಿಭಾಗಕ್ಕೆ ತಾಲೂಕ ಪಂಚಾಯತಿ ಅಧ್ಯಕ್ಷರು ಅಭಿವೃದ್ಧಿ ಅಧಿಕಾರಿಗಳು ಮುಖ್ಯ ಗುರುಗಳು ಜಿಲ್ಲಾ ಅವರ ಸಮ್ಮುಖದಲ್ಲಿ ವಿತರಿಸಲಾಯಿತು.



## ಚಿತ್ರದುರ್ಗ

– ಜುಲೈ 19 ರಿಂದ 20ರ ವರೆಗೆ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಕೆಜಿಬಿವಿ ವಸತಿ ಶಾಲೆ ಹೊಸದುರ್ಗದಲ್ಲಿ ಸಂಘಟಿಸಲಾಯಿತು. ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಸೈಯದ್ ಮೊಷಿನ್‌ರವರು ಈ ಶಿಬಿರವನ್ನು ಉದ್ಘಾಟಿಸಿ "ಮಕ್ಕಳಲ್ಲಿ ಶಿಸ್ತು ಸಮಯ ಪಾಲನೆ ಸ್ಕೌಟ್ಸ್-ಗೈಡ್ಸ್ ಚಟುವಟಿಕೆಗಳಿಗೆ ರಾಜ್ಯ ಮತ್ತು ರಾಷ್ಟ್ರಮಟ್ಟದ ಶಿಬಿರಗಳಿಗೆ ಹೆಚ್ಚಿನ ರೀತಿಯಲ್ಲಿ ನಮ್ಮ ಸ್ಥಳೀಯ ಸಂಸ್ಥೆಯ ವಿದ್ಯಾರ್ಥಿಗಳು ಭಾಗವಹಿಸಲಿ" ಎಂದು ತಿಳಿಸಿದರು. ಈ ಸಭೆಯ ಮುಖ್ಯ ಅತಿಥಿಗಳಾಗಿ ಶ್ರೀ ಶ್ರೀನಿವಾಸ್, ಬಿ.ಆರ್.ಸಿ. ಕೇಂದ್ರ, ಹೊಸದುರ್ಗ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಅಜ್ಜಪ್ಪ ಆಗಮಿಸಿದ್ದರು. ಪರೀಕ್ಷಾ ಶಿಬಿರವನ್ನು ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ, ಶ್ರೀ ಯೋಗರಾಜ್ ಮತ್ತು ಶ್ರೀ ಪ್ರದೀಪ್‌ರವರು ಅವರು ಸಂಘಟಿಸಿದರು. ಈ ಶಿಬಿರದ ನಾಯಕರಾಗಿ ಶ್ರೀ ಮಲ್ಲೇಶಪ್ಪ ಕೆ.ಟಿ., ಜಿಲ್ಲಾ ಸಂಘಟಕರು ಭಾಗವಹಿಸಿದ್ದರು. ಈ ಶಿಬಿರದಲ್ಲಿ ಸ್ಕೌಟ್ 125 ಮಕ್ಕಳು ಗೈಡ್ 150 ಮಕ್ಕಳು ಭಾಗವಹಿಸಿದ್ದರು.



– ಜುಲೈ 26 ರಿಂದ 27ರ ವರೆಗೆ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಜಿಲ್ಲಾ ಸಂಸ್ಥೆ ಸಹಯೋಗದೊಂದಿಗೆ ರಾಜ್ಯ ಪುರಸ್ಕಾರ ಪೂರ್ವಭಾವಿ ತರಬೇತಿ ಶಿಬಿರ ಶ್ರೀ ಮುರುಘರಾಜೇಂದ್ರ ಬೃಹನ್ಮಠದಲ್ಲಿ ನಡೆಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಉಪಾಧ್ಯಕ್ಷರಾದ ಶ್ರೀ ಉಜ್ಜಿನಪ್ಪ ವಹಿಸಿದ್ದರು.



– ಜುಲೈ 26 ರಂದು ಶ್ರೀ ಮುರುಘ ರಾಜೇಂದ್ರ ಬೃಹನ್ಮಠದಲ್ಲಿ ಕಾರ್ಗಿಲ್ ವಿಜಯ್ ದಿವಸ್ ಅನ್ನು ಆಚರಿಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಗೈಡ್ ಆಯುಕ್ತ ಶ್ರೀಮತಿ ಎಲ್. ಸವಿತಾ ಶಿವಕುಮಾರ್‌ರವರು ವಹಿಸಿಕೊಂಡಿದ್ದರು.




– ಆಗಸ್ಟ್ 01 ರಂದು ಶ್ರೀ ಜಗದ್ಗುರು ತರಳಬಾಳು ವಿದ್ಯಾ ಸಂಸ್ಥೆ ಸಿರಿಗೆರೆ ಮಠದಲ್ಲಿ, ಸ್ಕಾರ್ಫ್ ಡೇ ಮತ್ತು ಸ್ಕೌಟ್ ಮತ್ತು ಗೈಡ್‌ಗಳಿಗೆ ದೀಕ್ಷಾ ಸಮಾರಂಭವನ್ನು ಆಚರಿಸಲಾಯಿತು, ಜಿಲ್ಲಾ ಗೈಡ್ ಆಯುಕ್ತರಾದ, ಶ್ರೀಮತಿ ಎಲ್. ಸವಿತಾ ಶಿವಕುಮಾರ್ ಹಾಗೂ ಜಿಲ್ಲಾ ಸಂಘಟಿಕರಾದ ಶ್ರೀ ಮಲ್ಲೇಶಪ್ಪ ಕೆ.ಟಿ. ಮತ್ತು ದಾವಣಗೆರೆ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀಮತಿ ರತ್ನಮ್ಮ ಇವರುಗಳು ದೀಕ್ಷಾ ಸಮಾರಂಭವನ್ನು ನಡೆಸಿಕೊಟ್ಟರು. ಸ್ಕೌಟ್ಸ್ ಶಿಕ್ಷಕರಾದ ಶ್ರೀ ಸಾಗರ್‌ರವರು ಸ್ಕೌಟ್ಸ್‌ಗಳಿಗೆ ದೀಕ್ಷೆಯನ್ನು ನೀಡಿದರು ಮತ್ತು ಗೈಡ್ ಕ್ಯಾಪ್ಟನ್ ಶ್ರೀಮತಿ ಅರ್ಪಿತ, ಗೈಡ್ ವಿದ್ಯಾರ್ಥಿಗಳಿಗೆ ದೀಕ್ಷೆಯನ್ನು ಬೋಧಿಸಿದರು, ಈ ಸಂದರ್ಭದಲ್ಲಿ ಶಾಲಾ ಮುಖ್ಯ ಶಿಕ್ಷಕಿಯಾದ ಶ್ರೀಮತಿ ಶಾಂತ ಅವರು ವಿದೇಶದಿಂದ ಆಗಮಿಸಿದಂತಹ ಪ್ರಜೆಗಳಿಗೆ ಸ್ಕಾರ್ಫ್ ಅನ್ನು ಧಾರಣೆ ಮಾಡಿದರು.



– ಆಗಸ್ಟ್ 10 ರಿಂದ 12ರ ವರೆಗೆ ಶ್ರೀ ರಾಘವೇಂದ್ರ ಮಠದಲ್ಲಿ ರಾಘವೇಂದ್ರ ಸ್ವಾಮಿಯ 354ನೇ ಆರಾಧನಾ ಮಹೋತ್ಸವದಲ್ಲಿ ಸರ್ಕಾರಿ ಕಲಾ ಕಾಲೇಜು ಮತ್ತು ಚಳ್ಳಕೆರೆ ಎಚ್.ಪಿ.ಸಿ., ಕಾಲೇಜಿನ ರೋವರ್ಸ್ ಮತ್ತು ರೇಂಜರ್ಸ್‌ಗಳು ಸ್ವಯಂ ಸೇವಕರಾಗಿ ಸೇವೆಯನ್ನು ಸಲ್ಲಿಸಿದರು.

– ಆಗಸ್ಟ್ 11 ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರ ಅಧ್ಯಕ್ಷತೆಯಲ್ಲಿ 2024–25ನೇ ಸಾಲಿನ ಜಿಲ್ಲಾ ಸಂಸ್ಥೆಯ ಪ್ರಗತಿ ಪರಿಶೀಲನ ಸಭೆ ನಡೆಯಿತು. ಸ್ಥಳೀಯ, ಜಿಲ್ಲಾ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.





– 79ನೇ ಸ್ವಾತಂತ್ರ್ಯ ದಿನಾಚರಣೆಯ ಜಿಲ್ಲಾ ಸಂಸ್ಥೆಯ ಜಿಲ್ಲಾ ಕಾರ್ಯಾಲಯ ಮುಂಭಾಗದಲ್ಲಿ ಜಿಲ್ಲಾ ಆಯುಕ್ತರು (ಗೈ) ಶ್ರೀಮತಿ ಎಲ್. ಸವಿತಾ ಶಿವಕುಮಾರ್ ಇವರು ಧ್ವಜಾರೋಹಣವನ್ನು ನಡೆಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಉಜ್ಜಿನಪ್ಪನವರು, ಶ್ರೀ ಎಸ್ ಪರಮೇಶ್ವರ್ ಜಿಲ್ಲಾ ಉಪಾಧ್ಯಕ್ಷರು ಉಪಸ್ಥಿತರಿದ್ದರು.

– 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಹೊಸದುರ್ಗ ತಾಲ್ಲೂಕಿನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಚರಿಸಲಾಯಿತು. ಈ ಸಮಾರಂಭದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಅಶ್ವತ್ ಯಾದವ್ ಜಿ.ಎಸ್. ರವರು ಧ್ವಜಾರೋಹಣವನ್ನು ನೆರವೇರಿಸಿದರು. ಕಾಲೇಜಿನ ಎಲ್ಲಾ ಉಪನ್ಯಾಸಕ ಮತ್ತು ಉಪನ್ಯಾಸಕಿಯರು ಹಾಗೂ ಕಾಲೇಜಿನ ಎಲ್ಲಾ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳು ರೋವರ್ಸ್ ರೇಂಜರ್ಸ್ ಲೀಡರ್ಸ್‌ಗಳು ಭಾಗವಹಿಸಿದ್ದರು.

– ಆಗಸ್ಟ್ 15 ರಂದು ಸ್ವಾತಂತ್ರ್ಯ ದಿನಾಚರಣೆಯನ್ನು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಳಘಟ್ಟ ಮತ್ತು ಮುತ್ತುಗದೂರು ಕ್ಲಸ್ಟರ್ ಹಾಗೂ ಚಿತ್ರದುರ್ಗ ಕ್ಲಸ್ಟರ್‌ನ ಹಿರೇಕಂದವಾಡಿ ಪ್ರೌಢ ಶಾಲೆಯಲ್ಲಿ ಆಚರಿಸಲಾಯಿತು.

– 79ನೇ ಸ್ವಾತಂತ್ರ್ಯೋತ್ಸವದ ಪ್ರಯುಕ್ತ ಡಿ.ವಿ.ಎಸ್.ಆಂಗ್ಲ ಮಾಧ್ಯಮ ಶಾಲೆಯ ಕಬ್ ಮತ್ತು ಬುಲ್‌ಬುಲ್ಸ್‌ಗಳಿಗೆ ಪ್ರಶಸ್ತಿ ಪತ್ರ ವಿತರಣಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಡಿ.ವಿ.ಎಸ್. ಆಂಗ್ಲ ಮಾಧ್ಯಮ ಶಾಲೆಯ ಆಡಳಿತ ಮುಖ್ಯಸ್ಥರಾದ ಶ್ರೀ ಪ್ರದೀಪ್ ಅವರು ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಿದರು. ಜಿಲ್ಲಾ ಹಂತದ ಕಬ್ಸ್ ವಿಭಾಗದ ತೃತೀಯ ಚರಣ ಪರೀಕ್ಷೆ ಹಾಗೂ ಬುಲ್‌ಬುಲ್ಸ್ ವಿಭಾಗದ ಸುವರ್ಣ ಪಂಖ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರಗಳನ್ನು ನೀಡಿ ಅಭಿನಂದನೆಗಳನ್ನು ಸಲ್ಲಿಸಲಾಯಿತು.

– ಸ್ಥಳೀಯ ಸಂಸ್ಥೆ ಮೊಳಕಾಲ್ಮುರು ಇಲ್ಲಿ ಶ್ರೀ ಶ್ರೀನಿವಾಸ ಪ್ರೌಢ ಶಾಲೆ ಸ್ಕೌಟ್ಸ್‌ಗಳು 79ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಪಥಸಂಚಲನದಲ್ಲಿ ಭಾಗವಹಿಸಿ ಪ್ರಥಮ ಸ್ಥಾನಗಳಿಸಿದ್ದಾರೆ.

– ಹೊಳಲ್ಕೆರೆ ಸ್ಥಳೀಯ ಸಂಸ್ಥೆಯಲ್ಲಿ ಡ್ರೀಮ್ ವರ್ಲ್ಡ್ ಶಾಲೆಯ ಸ್ಕೌಟ್ಸ್–ಗೈಡ್ಸ್‌ಗಳು ಮೂರು ತಂಡಗಳಾಗಿ ಭಾಗವಹಿಸಿ ಪ್ರಥಮ ಸ್ಥಾನವನ್ನು ಪಡೆದುಕೊಂಡಿರುತ್ತಾರೆ.

– ಸ್ಥಳೀಯ ಸಂಸ್ಥೆ ಹೊಳಲ್ಕೆರೆಯಲ್ಲಿ, ಡ್ರೀಮ್ ವರ್ಲ್ಡ್ ಶಾಲೆಯಲ್ಲಿ ಶ್ರೀ ಕೃಷ್ಣಜನ್ಮಾಷ್ಟಮಿ ದಿನಾಚರಣೆಯನ್ನು ಮಕ್ಕಳಲ್ಲಿ ಆಚರಿಸಲಾಯಿತು. ಈ ಸಮಾರಂಭದಲ್ಲಿ ಜಿಲ್ಲಾ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು.

– ಆಗಸ್ಟ್ 16 ರಂದು ಹೊಳಲ್ಕೆರೆ ಸ್ಥಳೀಯ ಸಂಸ್ಥೆಯ ಸ್ಕೌಟ್ಸ್ ಮಾಸ್ಟರ್ ಮತ್ತು ಶಾಲಾ ಮುಖ್ಯೋಪಾಧ್ಯಾಯರುಗಳಿಗೆ ಒಂದು ದಿನದ ಮಾಹಿತಿ ಶಿಬಿರ ಮತ್ತು ಘಟಕ ನೊಂದಣಿ, ಶಿಬಿರವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ಈ ಸಭೆಯ ಅಧ್ಯಕ್ಷತೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಶ್ರೀನಿವಾಸ್, ವಹಿಸಿಕೊಂಡು ಮಾತನಾಡಿದರು ನಂತರ ಜಿಲ್ಲಾ ಸ್ಥಾನಿಕ ಆಯುಕ್ತರಾದ ಶ್ರೀ ಎಂ.ಕೆ. ಅನಂತರೆಡ್ಡಿ ಅವರು ಮಾತನಾಡಿದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ವೆಂಕಟೇಶ್ವರ ಅವರು ಮತ್ತು ಸಹ ಕಾರ್ಯದರ್ಶಿಯಾದ ಶ್ರೀಮತಿ ಗಿರಿಜಮ್ಮನವರು ಈ ಸಭೆಯನ್ನು ಸಂಘಟಿಸಿ ಎಲ್ಲರಿಗೂ ವಂದನಾರ್ಪಣೆಯನ್ನು ಸಲ್ಲಿಸಿದರು.



## ದಾವಣಗೆರೆ

– ಆಗಸ್ಟ್ 15 ರಂದು ಧ.ರಾ.ಮ ಸ್ಕೌಟ್ ಭವನದಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು ಧ್ವಜಾರೋಹಣ ಮಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.



– ಆಗಸ್ಟ್ 15 ರಂದು ಜಿಲ್ಲಾ ಕ್ರೀಡಾಂಗಣದಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ನಡೆದ ಪಥ ಸಂಚಲನದಲ್ಲಿ ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಗೈಡ್ಸ್‌ಗಳು ತೃತೀಯ ಬಹುಮಾನವನ್ನು ಪಡೆದರು. ಡಾ॥ ಪ್ರಭಾ ಮಲ್ಲಿಕಾರ್ಜುನ್, ಮಾನ್ಯ ಸಂಸದರು ಹಾಗೂ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾ ಉಸ್ತುವಾರಿ ಸಚಿವರು ಪ್ರಶಸ್ತಿ ಪ್ರಧಾನ ಮಾಡಿದರು.



– ಆಗಸ್ಟ್ 15 ರಂದು 79ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಸಿದ್ದಗಂಗಾ ಸ್ಥಳೀಯ ಸಂಸ್ಥೆ ವತಿಯಿಂದ ತಿರಂಗ ಪದಕ, ತಿರಂಗ ಹ್ಯಾಂಡ್ ಬುಕ್ ತಯಾರಿಕೆಯ ಚಟುವಟಿಕೆಯನ್ನು ಆಯೋಜಿಸಲಾಗಿತ್ತು. ಕಬ್ ಮತ್ತು ಬುಲ್‌ಬುಲ್ ಮಕ್ಕಳು ತಾವೇ ತಯಾರಿಸಿದ ಪದಕ ಮತ್ತು ಹ್ಯಾಂಡ್ ಬುಕ್‌ಗಳನ್ನು ಹಂಚಿಕೊಂಡು ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಶ್ರೀಮತಿ ರೇಖಾರಾಣಿ, ಜಿಲ್ಲಾ ಸಹಾಯಕ ಆಯುಕ್ತರು, ಕಬ್ ಮಾಸ್ಟರ್ ಫ್ಲಾಕ್ ಲೀಡರ್‌ಗಳಾದ ಶ್ರೀಮತಿ ನೀಲಮ್ಮ, ಶ್ರೀಮತಿ ಹೀನಾಕೌಸರ್, ಶ್ರೀಮತಿ ಸ್ವಪ್ನ, ಶ್ರೀಮತಿ ಮಾನಸ ಮುಂತಾದವರು ಉಪಸ್ಥಿತರಿದ್ದರು.

– ಆಗಸ್ಟ್ 19 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಅನ್‌ಮೋಲ್ ಪಬ್ಲಿಕ್ ಶಾಲೆಯಲ್ಲಿ ಕೃಷಿ ನಡಿಗೆ ಸಪ್ತಾಹ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸ್ಕೌಟ್ಸ್-ಗೈಡ್ಸ್‌ಗಳು ನಾಗನೂರು ಗ್ರಾಮಕ್ಕೆ ತೆರಳಿ ರೈತರಿಂದ ಭತ್ತ ನಾಟಿಯ ಬಗ್ಗೆ ಪ್ರಾಯೋಗಿಕವಾಗಿ ತಿಳಿದುಕೊಂಡರು. ಈ ಸಂದರ್ಭದಲ್ಲಿ ಸ್ಕೌಟ್ ಮಾಸ್ಟರ್ ಶ್ರೀ ವಿಜಯ್ ಕುಮಾರ್, ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ರವೀಂದ್ರ ಸ್ವಾಮಿ .ಟಿ.ಎಂ. ಉಪಸ್ಥಿತರಿದ್ದು ಮಕ್ಕಳನ್ನು ಪ್ರೋತ್ಸಾಹಿಸಿದರು.



– ಜುಲೈ 16 ರಂದು ಧ.ರಾ.ಮ ಸ್ಕೌಟ್ ಭವನದಲ್ಲಿ ಪದವಿ ಪೂರ್ವ ಕಾಲೇಜಿನ ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್‌ಗಳ ಸಭೆಯನ್ನು ಶ್ರೀಮತಿ ಶಾರದಾ ಮಾಗನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀ ಪುಟ್ಟಪ್ಪ ಕಾಶೀಪುರ್ ಜಿಲ್ಲಾ ಕಬ್ ಆಯುಕ್ತರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ವಾರ್ಷಿಕ ಕಾರ್ಯಚಟುವಟಿಕೆಗಳ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಶ್ರೀಮತಿ ಅಶ್ವಿನಿ .ಜೆ., ಎಸ್.ಜಿ.ವಿ ಸಭೆಯನ್ನು ಯಶಸ್ವಿಯಾಗಿ ಆಯೋಜಿಸಿದರು.



– ಜುಲೈ 18 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಸೆಂಟ್ ಪಾಲ್ಸ್ ಕಾನ್ವೆಂಟ್ ಶಾಲೆಗೆ ಕರ್ನಾಟಕ ಸರ್ಕಾರದ ಸಂಚಾರಿ ಆರೋಗ್ಯ ಘಟಕದ ದಾವಣಗೆರೆ ಘಟಕದ ಅಧಿಕಾರಿಗಳು ಭೇಟಿ ನೀಡಿ ಗೈಡ್ಸ್‌ಗಳಿಗೆ ಪ್ರಾಥಮಿಕ ಚಿಕಿತ್ಸೆ, ಬ್ಯಾಂಡೇಜ್‌ಗಳ ಬಳಸುವ ವಿಧಾನ ಹಾಗೂ ಸಂಚಾರಿ ಆರೋಗ್ಯ ವಾಹನದ ಕುರಿತು ಸಂಪೂರ್ಣ ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಶಾಲಾ ಮುಖ್ಯಸ್ಥರಾದ ಸಿಸ್ಟರ್ ಸ್ವೆಲ್ಲಾ ಮೇರಿಸ್, ಸಿಸ್ಟರ್ ವನೀಸಾ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ರವೀಂದ್ರಸ್ವಾಮಿ .ಟಿ.ಎಂ, ಎಸ್.ಜಿ.ವಿ. ಶ್ರೀಮತಿ ಅಶ್ವಿನಿ .ಜೆ, ಗೈಡ್ ಕ್ಯಾಪ್ಟನ್ ಶ್ರೀಮತಿ ರಜನಿ .ಹೆಚ್.ಎಂ., ಸಂಚಾರಿ ಆರೋಗ್ಯ ಘಟಕದ ಸಂಯೋಜಕ ಹಾಗೂ ಅವರ ವೈದ್ಯಕೀಯ ತಂಡ ಉಪಸ್ಥಿತರಿದ್ದರು.



– ಜುಲೈ 26 ರಂದು ದಾವಣಗೆರೆ ಜಿಲ್ಲಾ ಸಂಸ್ಥೆ ವತಿಯಿಂದ ಕಾರ್ಗಿಲ್ ವಿಜಯ್ ದಿವಸ್ ಅನ್ನು ನಗರದ ಅಮರ್ ಜವಾನ್ ಪಾರ್ಕ್‌ನಲ್ಲಿ ಗೌರವ ವಂದನೆಗಳೊಂದಿಗೆ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಮುರುಘ



ರಾಜೇಂದ್ರ ಜೆ. ಚಿಗಟೇರಿ, ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು, ಮಾಜಿ ಸೈನಿಕರುಗಳಾದ ಡಾ. ಸುರೇಶ್‌ರಾವ್, ಶ್ರೀ ಸತ್ಯಪ್ರಕಾಶ್, ಶ್ರೀ ಬೀರಪ್ಪ ಉಪಸ್ಥಿತರಿದ್ದರು. ಶ್ರೀ ಧರಣೇಶ್ ರೋವರ್ ಸ್ಕೌಟ್ ಲೀಡರ್, ಶ್ರೀಮತಿ ಮಂಜುಳ, ಶ್ರೀಮತಿ ಸಂಗೀತ ರೇಂಜರ್ ಲೀಡರ್, ಯುವ ಸಮಿತಿ ಸದಸ್ಯರು ಉಪಸ್ಥಿತರಿದ್ದರು. ಶ್ರೀಮತಿ ಅಶ್ವಿನಿ .ಜೆ., ಎಸ್.ಜಿ.ವಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಸಂಘಟಿಸಿದರು.

– ಆಗಸ್ಟ್ 01 ರಂದು ವಿಶ್ವ ಸ್ಕಾರ್ಫ್ ದಿನಾಚರಣೆಯನ್ನು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಪಿ.ಎಸ್.ಎಸ್.ಇ.ಎಂ.ಆರ್. ಶಾಲೆಯಲ್ಲಿ ಆಚರಿಸಲಾಯಿತು. ಶ್ರೀ ಮಂಜುನಾಥ ರಂಗರಾಜು ಶಾಲೆಯ ಡೀನ್‌ರವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಶ್ರೀ ರವೀಂದ್ರಸ್ವಾಮಿ .ಟಿ.ಎಂ., ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು, ಶ್ರೀ ಉಮಾಪತಿ ಉಪ ಪ್ರಾಂಶುಪಾಲರು.

– ಆಗಸ್ಟ್ 01 ರಂದು ಸಿದ್ದಗಂಗಾ ಸ್ಥಳೀಯ ಸಂಸ್ಥೆ ವತಿಯಿಂದ ಸೂರ್ಯೋದಯ ದಿನ ಹಾಗೂ ಸ್ಕೌಟ್ ಸ್ಕಾರ್ಫ್ ದಿನವನ್ನು ಆಚರಿಸಲಾಯಿತು. ಗೈಡ್ ವಿದ್ಯಾರ್ಥಿನಿ ಕು. ಮಾನಸ .ಆರ್.ಎನ್. ಸ್ಕಾರ್ಫ್ ಡೇ ದಿನದ ವಿಶೇಷತೆಯನ್ನು ವಿವರಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆ ಅಧ್ಯಕ್ಷರಾದ ಡಾ. ಜಸ್ಟೀನ್ ಡಿಸೋಜರವರು ಉಪಸ್ಥಿತರಿದ್ದರು. ಶ್ರೀ ಮಹೇಶ್ ಕಾರ್ಯಕ್ರಮವನ್ನು ನಡೆಸಿದರು. ಕಬ್, ಬುಲ್‌ಬುಲ್, ಸ್ಕೌಟ್ಸ್-ಗೈಡ್ಸ್‌ಗಳು ಶಿಕ್ಷಕರು ಸ್ಕಾರ್ಫ್ ಧರಿಸಿ ಸ್ಕೌಟ್ ಪ್ರತಿಜ್ಞೆಯನ್ನು ಪುನರುಚ್ಚಿಸಿದರು.

– ಆಗಸ್ಟ್ 01 ರಂದು ಧ.ರಾ.ಮ ಸ್ಕೌಟ್ ಭವನದಲ್ಲಿ ವಿಶ್ವ ಸ್ಕಾರ್ಫ್ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು ವಹಿಸಿದ್ದರು. ಸ್ಕಾರ್ಫ್ ದಿನಾಚರಣೆಯ ಮಹತ್ವವನ್ನು ತಿಳಿಸಿ ಪ್ರತಿಜ್ಞೆಯನ್ನು ಪುನರುಚ್ಚರಿಸಿದರು. ಈ ಸಂದರ್ಭದಲ್ಲಿ ಶ್ರೀಮತಿ ಶಾರದಾ ಮಾಗನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು, ಶ್ರೀ ಪುಟ್ಟಪ್ಪ ಕಾಶೀಪುರ್, ಜಿಲ್ಲಾ ಕಬ್ ಆಯುಕ್ತರು ಉಪಸ್ಥಿತರಿದ್ದರು. ಶ್ರೀಮತಿ ಅಶ್ವಿನಿ. ಜೆ, ಎಸ್.ಜಿ.ವಿ ಕಾರ್ಯಕ್ರಮವನ್ನು ಸಂಘಟಿಸಿದರು.

– ಆಗಸ್ಟ್ 01 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಬಾಪೂಜಿ ಹಿರಿಯ ಇಂಗ್ಲಿಷ್ ಪ್ರಾಥಮಿಕ ಶಾಲೆ ಮತ್ತು ಸೆಂಟ್ ಪಾಲ್ಸ್ ಕಾನ್ವೆಂಟ್ ಶಾಲೆ ದಾವಣಗೆರೆ ಉತ್ತರ ಸ್ಥಳೀಯ ಸಂಸ್ಥೆಯ ಆರ್.ವಿ.ಜಿ.ಕೆ. ಶಾಲೆ, ಚನ್ನಗಿರಿಯ ಚಿರಡೋಣಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ದಾವಣಗೆರೆ ದಕ್ಷಿಣದ ಅಮೃತ ವಿದ್ಯಾಲಯ ಶಾಲೆಯಲ್ಲಿ ವಿಶ್ವ ಸ್ಕಾರ್ಫ್ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಆಡಳಿತ ಮಂಡಳಿ ಸದಸ್ಯರು, ಸ್ಕೌಟರ್ಸ್ ಗೈಡರ್ಸ್‌ಗಳು ಉಪಸ್ಥಿತರಿದ್ದರು.

– ಆಗಸ್ಟ್ 09 ರಂದು ಸಿದ್ದಗಂಗಾ ಸ್ಥಳೀಯ ಸಂಸ್ಥೆಯಲ್ಲಿ ನೂಲು ಹುಣ್ಣಿಮೆ ಪ್ರಯುಕ್ತ ರಕ್ಷಾ ಬಂಧನ ಆಚರಿಸಲಾಯಿತು. ಗೈಡ್ಸ್‌ಗಳು ತಾವೇ ತಯಾರಿಸಿದ ರಾಖಿಗಳನ್ನು ತಮ್ಮ ಸಹೋದರ ಸ್ಕೌಟ್‌ಗಳಿಗೆ ಕಟ್ಟುವುದರ ಮೂಲಕ ಹಾಗೂ ಸ್ಕೌಟ್‌ಗಳು ತಾವೇ ತಯಾರಿಸಿದ ಗ್ರೀಟಿಂಗ್‌ಗಳನ್ನು ಉಡುಗೊರೆಯಾಗಿ ಕೊಡುವುದರ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

– ಆಗಸ್ಟ್ 09 ರಂದು ದಾವಣಗೆರೆ ಉತ್ತರ ವಲಯದ ನ್ಯೂ ಸೆಂಟ್ ಪೀಟರ್ ಶಾಲೆಯಲ್ಲಿ ದೀಕ್ಷಾ ಸಮಾರಂಭ, ರಕ್ಷಾ ಬಂಧನ, ಚಿತ್ರಕಲೆ ಸ್ಪರ್ಧೆ ಮತ್ತು ಸ್ಕಾರ್ಫ್ ದಿನಾಚರಣೆಯನ್ನು ಆಚರಿಸಲಾಯಿತು. ಶ್ರೀಮತಿ ಅಶ್ವಿನಿ. ಜೆ, ಎಸ್.ಜಿ.ವಿ ಕಾರ್ಯಕ್ರಮದಲ್ಲಿ ಭಾಗವಹಿಸಿ ದೀಕ್ಷಾ ಸಮಾರಂಭದ ಮಹತ್ವವನ್ನು ತಿಳಿಸಿದರು. ಸ್ಕಾರ್ಫ್ ದಿನಾಚರಣೆಯ ಬಗ್ಗೆ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ಸುರೇಶ್ ತಿಳಿಸಿದರು. ಕಾರ್ಯಕ್ರಮವನ್ನು ಶ್ರೀಮತಿ ವಾಣಿ ಲೇಡಿ ಸ್ಕೌಟ್ ಮಾಸ್ಟರ್ ಅಚ್ಚುಕಟ್ಟಾಗಿ ಆಯೋಜಿಸಿದ್ದರು.

– ಆಗಸ್ಟ್ 10 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಶ್ರೀ ತರಳಬಾಳು ವಸತಿ ಶಾಲೆಯಲ್ಲಿ ಸ್ಕೌಟ್-ಗೈಡ್‌ಗಳಿಂದ ರಕ್ಷಾ ಬಂಧನವನ್ನು ಆಚರಿಸಲಾಯಿತು.

ವಿದ್ಯಾರ್ಥಿಗಳು ರಕ್ಷಾ ಬಂಧನದ ಇತಿಹಾಸ, ಸಂಪ್ರದಾಯ ಮತ್ತು ಅದರ ಸಾಮಾಜಿಕ ಸಂದೇಶ ಕುರಿತು ಸಣ್ಣ ಭಾಷಣಗಳನ್ನು ನೀಡಿದರು. ಈ ಸಂದರ್ಭದಲ್ಲಿ ಗೈಡ್ ಕ್ಯಾಪ್ಟನ್ ಶ್ರೀಮತಿ ಅನಿತಾ ಸ್ಕೌಟ್ ಮಾಸ್ಟರ್ ಶಶಿಕುಮಾರ್ ಹಾಗೂ ಶಾಲೆಯ ಶಿಕ್ಷಕ ಶಿಕ್ಷಕಿಯರು ಉಪಸ್ಥಿತರಿದ್ದರು.

– ಆಗಸ್ಟ್ 10 ರಂದು ವಂದೇ ಭಾರತ್ ರೈಲು, ದಾವಣಗೆರೆ ರೈಲು ನಿಲ್ದಾಣಕ್ಕೆ ಆಗಮಿಸಿದಾಗ ಸ್ವಾಗತಿಸಲಾಯಿತು. ಶ್ರೀ ಸಿದ್ದಗಂಗಾ ಸ್ಥಳೀಯ ಸಂಸ್ಥೆಯ ಸ್ಕೌಟ್–ಗೈಡ್‌ಗಳಿಂದ ದೇಶಭಕ್ತಿ ಗೀತೆ, ನೃತ್ಯ ನಡೆಯಿತು. ನೈರುತ್ಯ ರೈಲ್ವೆ ವಿಭಾಗದಿಂದ ಆಯೋಜಿಸಿದ್ದ ಚಿತ್ರಕಲಾ, ಭಾಷಣ ಮತ್ತು ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿದ ಸಿದ್ದಗಂಗಾ ಶಾಲೆಯ ಸ್ಕೌಟ್ ಗೈಡ್‌ಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಾನ್ಯ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್‌ರವರಿಂದ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನ ಪಡೆದರು. ದಾವಣಗೆರೆಯಿಂದ ಹಾವೇರಿಯ ತನಕ ನೂತನ ವಂದೇ ಭಾರತ್ ರೈಲಿನಲ್ಲಿ ಸ್ಕೌಟ್–ಗೈಡ್‌ಗಳು ಪ್ರಯಾಣಿಸಿ ಪುಳಕಿತಗೊಂಡರು.

– ಆಗಸ್ಟ್ 20 ರಂದು ಧ.ರಾ.ಮ ಸ್ಕೌಟ್ ಭವನದಲ್ಲಿ ಸದ್ಭಾವನಾ ದಿನಾಚರಣೆಯನ್ನು ಆಚರಿಸಲಾಯಿತು. ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು ಇವರ ನೇತೃತ್ವದಲ್ಲಿ ಪ್ರತಿಜ್ಞೆಯನ್ನು ಸ್ವೀಕರಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿಗಳು, ಸಹ ಕಾರ್ಯದರ್ಶಿಗಳು, ಜಿಲ್ಲಾ ಸಹಾಯಕ ಆಯುಕ್ತರು, ಜಿಲ್ಲಾ ಸ್ಥಾನಿಕ ಆಯುಕ್ತರು, ಯುವ ಸಮಿತಿ ಸದಸ್ಯರು, ರೋವರ್ಸ್ ರೇಂಜರ್ಸ್‌ಗಳು ಉಪಸ್ಥಿತರಿದ್ದರು.



## ಹಾಸನ

– ಸ್ಥಳೀಯ ಸಂಸ್ಥೆ ಆಲೂರು ವತಿಯಿಂದ ಆಲೂರು ಪಟ್ಟಣದ ಕ್ಷೇತ್ರ ಸಂಪನ್ಮೂಲ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 'ವಾರ್ಷಿಕ ಕಾರ್ಯಕ್ರಮಗಳ ಯೋಜನೆ' ಹೊತ್ತಿಗೆಯನ್ನು, ತಾಲ್ಲೂಕು ಸಂಸ್ಥೆಯ ಅಧ್ಯಕ್ಷರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಎ.ಜೆ. ಕೃಷ್ಣೇಗೌಡರವರು ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಪ್ರಭಾರ ಕ್ಷೇತ್ರ ಸಮನ್ವಯಾಧಿಕಾರಿ ಶ್ರೀ ವಿಜಯ ಕುಮಾರ್, ತಾಲ್ಲೂಕು ಕಾರ್ಯದರ್ಶಿ ಶ್ರೀ ಕೊಟ್ರೇಶ್ ಎಸ್. ಉಪ್ಪಾರ್, ಜಿಲ್ಲಾ ಸಹಾಯಕ ಆಯುಕ್ತ ಶ್ರೀ ಎಂ. ಬಾಲಕೃಷ್ಣ, ಶಿಕ್ಷಣ ಸಂಯೋಜಕರಾದ ಶ್ರೀ ತಿಮ್ಮಶೆಟ್ಟಿ, ಶ್ರೀ ರವಿಕಿರಣ್, ಶ್ರೀ ದಿವಾಕರ ಹಾಗೂ ತಾಲ್ಲೂಕು ಖಜಾಂಚಿ ಶ್ರೀ ಬಿ.ಎಸ್. ಹಿಮ, ಸಂಘಟನಾ ಕಾರ್ಯದರ್ಶಿ ಶ್ರೀ ಕೆ.ಎಲ್. ವೆಂಕಟರಂಗಯ್ಯ, ಗೈಡ್ ಕ್ಯಾಪ್ಟನ್ ಶ್ರೀಮತಿ ಮೈಮೂನ, ಶ್ರೀಮತಿ ಪ್ರಮೀಳಾ ಮುಂತಾದವರು ಉಪಸ್ಥಿತರಿದ್ದರು.



– ಮಾನ್ಯ ಉಪನಿರ್ದೇಶಕರು ಶ್ರೀ ಗಂಗಾಧರ್, ಹಾಸನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಕೆ. ರಂಗನಾಥ್‌ರವರುಗಳನ್ನು ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಭೇಟಿ ಮಾಡಿ ವಾರ್ಷಿಕ ಯೋಜನೆ ಪುಸ್ತಕಗಳನ್ನು ನೀಡಿ ಕಾರ್ಯಕ್ರಮದ ಬಗ್ಗೆ ಮಾಹಿತಿಯನ್ನು ನೀಡಿದರು.



– ಜುಲೈ 26 ರಂದು ಕಾರ್ಗಿಲ್ ವಿಜಯೋತ್ಸವವನ್ನು ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ 17 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತ ಯೋಧರಾದ ಶ್ರೀ ಕೆ.ಬಿ. ಲವರವರು ದೇಶ ಸೇವೆಗೆ ಸದಾ ಸಿದ್ಧರಾಗಬೇಕೆಂದು ಪ್ರೇರಣೆಯನ್ನು ನೀಡಿದರು. ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಪೂರ್ಣಿಮ ಸಿ.ಎಸ್.ರವರು ವಿದ್ಯಾರ್ಥಿಗಳಲ್ಲಿ ಯೋಧರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಕಿವಿಮಾತನ್ನು ಹೇಳಿದರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದಂತಹ ವಿಶ್ವೇಶ್ವರಯ್ಯ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಂಶುಪಾಲರಾದ ಶ್ರೀ ಎಚ್.ವಿ. ನಾಗಭೂಷಣ್‌ರವರು ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ದೇಶಕ್ಕೆ ಗೌರವನ್ನು ಸಲ್ಲಿಸಬೇಕು ಹಾಗೂ ದೇಶಪ್ರೇಮವನ್ನು ಬೆಳೆಸಬೇಕು ಎಂದು ಸಲಹೆ ನೀಡಿದರು. ಈ ಕಾರ್ಯಕ್ರಮದಲ್ಲಿ ಗೈಡ್ ಕ್ಯಾಪ್ಟನ್ ಶ್ರೀಮತಿ ರೋಹಿಣಿ ಹಾಗೂ ಶ್ರೀಮತಿ ರೂಪಿ, ಸ್ಕೌಟ್ ಮಾಸ್ಟರ್ ಶ್ರೀಮತಿ ಜ್ಯೋತಿ ಹಾಗೂ ಶ್ರೀಮತಿ ಶಕುಂತಲಾ ಮತ್ತು ಕಬ್ ಮಾಸ್ಟರ್ ಶ್ರೀ ರಾಮಚಂದ್ರ ಕೆ.ಜೆ. ಇವರು ಉಪಸ್ಥಿತರಿದ್ದರು.



– 'ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಾಪನೆಯಾಗಿರುವುದೇ ವ್ಯಕ್ತಿತ್ವ ವಿಕಸನ ಜೊತೆಗೆ ಸಾಮಾಜಿಕ ಮೌಲ್ಯಗಳನ್ನು ಬೆಳೆಸಲು. ಈ ಸಂಸ್ಥೆಯ ಸಮವಸ್ತ್ರ ಧರಿಸಿದ ಸ್ಕೌಟ್, ಗೈಡ್ ನಾಯಕಿಯರು ಉತ್ತಮ ನಾಗರೀಕ ಸಂಸ್ಕಾರ ರೂಢಿಸಿಕೊಳ್ಳುವುದರ ಮೂಲಕ ವಿದ್ಯಾರ್ಥಿಗಳಿಗೆ ಹಾಗೂ ಸಮಾಜಕ್ಕೆ ಮಾದರಿಯಾಗಬೇಕಿದೆ' ಎಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಜಿಲ್ಲಾ ಸ್ಕೌಟ್ ಆಯುಕ್ತ ಶ್ರೀ ಸ್ಟೀಫನ್ ಪ್ರಕಾಶ್ ಅಭಿಪ್ರಾಯಪಟ್ಟರು. ಅವರು ತಾಲ್ಲೂಕು ಸ್ಥಳೀಯ ಸಂಸ್ಥೆ ಆಲೂರು ವತಿಯಿಂದ ತಾಲ್ಲೂಕಿನ ಕಬ್ ಮಾಸ್ಟರ್, ಫ್ಲಾಕ್ ಲೀಡರ್ಸ್, ಸ್ಕೌಟ್ ಮಾಸ್ಟರ್ ಹಾಗೂ ಗೈಡ್ ಕ್ಯಾಪ್ಟನ್‌ಗಳಿಗಾಗಿ ಹಮ್ಮಿಕೊಂಡಿದ್ದ ತಾಲ್ಲೂಕು ಮಟ್ಟದ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು. ವೇದಿಕೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ವಾರ್ಷಿಕ ಕಾರ್ಯ ಚಟುವಟಿಕೆಗಳ ಯೋಜನಾ ಹೊತ್ತಿಗೆಯನ್ನು ಬಿಡುಗಡೆಗೊಳಿಸಿದರು. ತಾಲ್ಲೂಕು ಕಾರ್ಯದರ್ಶಿ ಶ್ರೀ ಕೊಟ್ರೇಶ್ ಎಸ್. ಉಪ್ಪಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಜಿಲ್ಲಾ ಖಜಾಂಚಿ ಶ್ರೀ ಆರ್.ಎಸ್. ರಮೇಶ್, ತಾಲ್ಲೂಕು ಖಜಾಂಚಿ ಶ್ರೀ ಬಿ.ಎಸ್. ಹಿಮ, ತಾಲ್ಲೂಕು ಸಹ ಕಾರ್ಯದರ್ಶಿ ಶ್ರೀ ವೆಂಕಟರಂಗಯ್ಯ ಸೇರಿದಂತೆ ಹಲವರು ಮಾತನಾಡಿದರು.



–'ಸ್ಕೌಟ್ಸ್ ಗೈಡ್ಸ್‌ಗಳಿಗಾಗಿ ಅವರ ಚಟುವಟಿಕೆಗಳ ಜೊತೆಗೆ ಹಂತ ಹಂತವಾಗಿ ಪದಕ ಪ್ರಾವಿಣ್ಯತೆ ನೀಡಲಾಗುವುದು. ಇವು ಮಕ್ಕಳಲ್ಲಿ ವಿಶೇಷ ಕೌಶಲ ಹಾಗೂ ಪ್ರಾವಿಣ್ಯತೆಯನ್ನು ವೃದ್ಧಿಸುತ್ತವೆ' ಎಂದು ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ಅಭಿಪ್ರಾಯಪಟ್ಟರು. ಅವರು ತಾಲ್ಲೂಕು ಸ್ಥಳೀಯ ಸಂಸ್ಥೆ ಆಲೂರು ವತಿಯಿಂದ ತಾಲ್ಲೂಕಿನ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗಾಗಿ ಹಮ್ಮಿಕೊಂಡಿದ್ದ ತಾಲ್ಲೂಕು ಮಟ್ಟದ ಪದಕ ಪ್ರಾವಿಣ್ಯತಾ ತರಬೇತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ತಾಲ್ಲೂಕು ಉಪಾಧ್ಯಕ್ಷೆ ಶ್ರೀಮತಿ ಸಿ.ಎಸ್. ಪೂರ್ಣಿಮಾ ಮಾತನಾಡಿ ಸುರಕ್ಷತೆ ಕೇವಲ ರಸ್ತೆಯಲ್ಲಿ, ನಮ್ಮ

ಸುತ್ತಮುತ್ತ, ಕುಟುಂಬದಲ್ಲಿ ಹೆಣ್ಣು ಮಕ್ಕಳು ತಮ್ಮ ರಕ್ಷಣೆಯ ಬಗ್ಗೆ ಗಮನಹರಿಸಬೇಕು. ಗುಡ್‌ಟಚ್, ಬ್ಯಾಡ್‌ಟಚ್ ಬಗ್ಗೆ ಮಕ್ಕಳಿಗೆ ಸಂಬಂಧಿಸಿದ ಶಿಕ್ಷಕರು ತಿಳಿ ಹೇಳಬೇಕು ಎಂದರು. ವೇದಿಕೆಯಲ್ಲಿ ಜಿಲ್ಲಾ ಸ್ಕೌಟ್ ಆಯುಕ್ತ ಶ್ರೀ ಸ್ಟೀಫನ್ ಪ್ರಕಾಶ್, ಜಿಲ್ಲಾ ಸಹಾಯಕ ಆಯುಕ್ತ ಶ್ರೀ ಎಂ. ಬಾಲಕೃಷ್ಣ ಮುಂತಾದವರು ಉಪಸ್ಥಿತರಿದ್ದರು.

– ಹಾಸನ ತಾಲ್ಲೂಕು ಸ್ಥಳೀಯ ಸಂಸ್ಥೆಯ ವತಿಯಿಂದ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಪದಕ ತರಬೇತಿ ಶಿಬಿರವನ್ನು ಆಯೋಜನೆ ಮಾಡಲಾಯಿತು. ಶ್ರೀ ಕುಮಾರ್ ಸ್ವಾಮಿ ಮತ್ತು ಶ್ರೀ ಬಿ.ಪಿ. ಗಿರೀಶ್‌ರವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಮಾಹಿತಿಯನ್ನು ನೀಡಿದರು. ಜಿಲ್ಲಾ ಮುಖ್ಯ ಆಯುಕ್ತರು ಡಾ. ವೈ.ಎಸ್. ವೀರಭದ್ರಪ್ಪ, ಭಾಗವಹಿಸಿ ಮಾಹಿತಿಯನ್ನು ನೀಡಿದರು. ಹಾಸನ ತಾಲ್ಲೂಕು ಖಜಾಂಚಿ ಶ್ರೀ ಮಹಾಲಿಂಗೇಗೌಡ ಹಾಗೂ ತಾಲ್ಲೂಕು ಕಾರ್ಯದರ್ಶಿಗಳಾದ ಶ್ರೀಮತಿ ವನಜಾಕ್ಷಿ ಬಿ.ಎಸ್.ರವರು ಶಿಬಿರವನ್ನು ಸಂಘಟಿಸಿದರು.

– 'ಸ್ಕೌಟ್ಸ್ ಮತ್ತು ಗೈಡ್ಸ್‌ಗಳಲ್ಲಿ ಸಾಮಾಜಿಕ ಮೌಲ್ಯಗಳನ್ನು ಬಿತ್ತುವುದರ ಜೊತೆಗೆ ಶಿಕ್ಷಣ ಸಂಸ್ಥೆಗಳ ಶಿಸ್ತನ್ನೂ ವೃದ್ಧಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ' ಎಂದು ಮಗ್ಗೆ ಕಾರಗೋಡು ಇನ್‌ಸ್ಪೈರ್ ಇಂಟರ್ ನ್ಯಾಷನಲ್ ಶಾಲೆಯ ಕಾರ್ಯದರ್ಶಿ ಶ್ರೀ ಅಶೋಕ ಅಭಿಪ್ರಾಯಪಟ್ಟರು. ಅವರು ಆಲೂರು ತಾಲ್ಲೂಕು ಭಾರತ್ ಸ್ಕೌಟ್ಸ್ & ಗೈಡ್ಸ್ ಸ್ಥಳೀಯ ಸಂಸ್ಥೆ ವತಿಯಿಂದ ಮಗ್ಗೆ ಕಾರಗೋಡು ಇನ್‌ಸ್ಪೈರ್ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಶಿಕ್ಷಕರಿಗಾಗಿ ಹಮ್ಮಿಕೊಂಡಿದ್ದ ಆರಂಬಿಕ ತರಬೇತಿ ಶಿಬಿರ ಉದ್ಘಾಟನೆ ಮಾಡಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಸ್ಕೌಟ್ ಆಯುಕ್ತ ಶ್ರೀ ಸ್ಟೀಫನ್ ಪ್ರಕಾಶ್, ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ಸೇರಿದಂತೆ ಶಾಲೆಯ ಶಿಕ್ಷಕರು ಹಾಜರಿದ್ದರು.



– ಎಸ್.ವಿ.ಎಂ. ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಹಾಗೂ ಹೆಚ್.ಆರ್.ಎಸ್. ಕಿಡ್ಸ್ ಶಾಲೆಯ ಬನ್ನಿಸ್ ವಿದ್ಯಾರ್ಥಿಗಳಾದ ಸನ್‌ರೈಸ್ ಡೇ ಕಾರ್ಯಕ್ರಮವನ್ನು ಆಚರಣೆ ಮಾಡಿರುತ್ತಾರೆ. ಶಾಲೆಯಲ್ಲಿ ಚಿತ್ರಕಲೆ ಸ್ಪರ್ಧೆ, ಬೆಂಕಿ ಇಲ್ಲದೆ ಅಡುಗೆ ಚುಟುವಟಿಕೆಯನ್ನು ಆಯೋಜನೆ ಮಾಡುವುದರ ಮೂಲಕ ಕಾರ್ಯಕ್ರಮವನ್ನು ಆಚರಣೆ ಮಾಡಿರುತ್ತಾರೆ. ಕಾರ್ಯಕ್ರದಲ್ಲಿ ಶಾಲಾ ಮುಖ್ಯೋಪಾಧ್ಯಾಯರು ಸೂರ್ಯಕಾಂತ ಗೈಡ್ ಶಿಕ್ಷಕಿ ಆಶಿಯಾ ತರನಂ, ಸ್ಕೌಟ್ ಮಾಸ್ಟರ್ ಶ್ರೀ ತಿಮ್ಮರಾಜು ಉಪಸ್ಥಿತರಿದ್ದರು.

– ಪಯೋನಿರ್ ಪಬ್ಲಿಕ್ ಶಾಲೆಯಲ್ಲಿ ಸ್ಕಾರ್ಫ್ ಡೇ ಕಾರ್ಯಕ್ರಮವನ್ನು ಆಚರಣೆ ಮಾಡಿರುತ್ತಾರೆ. ಈ ಸಂದರ್ಭದಲ್ಲಿ ಸ್ಕೌಟ್ ಮಾಸ್ಟರ್ ಶ್ರೀ ಉಮೇಶ್, ಗೈಡ್ ಕ್ಯಾಪ್ಟನ್ ಶ್ರೀಮತಿ ಜ್ಯೋತಿ ಮತ್ತು ಸ್ಕೌಟ್ ಗೈಡ್‌ಗಳು ಉಪಸ್ಥಿತರಿದ್ದರು.

– ಹಾಸನ ತಾಲ್ಲೂಕು ಸ್ಥಳೀಯ ಸಂಸ್ಥೆಯ ಹೋಲಿ ಸಿಸ್ಟರ್ ಶಾಲೆಯ ಬುಲ್ ಬುಲ್ ಮತ್ತು ಗೈಡ್‌ಗಳು ಸನ್‌ರೈಸ್ ಡೇ ಪ್ರಯುಕ್ತ ಪ್ರಥಮ ಚಿಕಿತ್ಸೆ ತರಬೇತಿ ಶಿಬಿರವನ್ನು ನಡೆಸಿರುತ್ತಾರೆ. ಶಿಬಿರದಲ್ಲಿ ಫ್ಲಾಕ್ ಲೀಡರ್ ಸುಪ್ರೀಯಾ ಗೈಡ್ ಶಿಕ್ಷಕಿ ಸುಮಿತ್ರ ರವರು ಉಪಸ್ಥಿತರಿದ್ದರು.

– ಹಾಸನ ತಾಲ್ಲೂಕು ಸ್ಥಳೀಯ ಸಂಸ್ಥೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವಳಗೆರಹಳ್ಳಿ ಶಾಲ್ಲೆಯಲ್ಲಿ ಸನ್‌ರೈಸ್ ಡೇ ಕಾರ್ಯಕ್ರಮವನ್ನು ಆಚರಣೆ ಮಾಡಿರುತ್ತಾರೆ. ಗೈಡ್ ಶಿಕ್ಷಕಿ ಶ್ರೀಮತಿ ಶುಭಮಂಗಳ ಕಾರ್ಯಕ್ರಮದ ಉಸ್ತುವಾರಿಯನ್ನು ವಹಿಸಿಕೊಂಡಿದ್ದರು.

– ಸಕಲೇಶಪುರ ತಾಲ್ಲೂಕಿನ ಸಂತ ಜೋಸೆಫರ್ ಶಾಲೆಯಲ್ಲಿ ಸನ್‌ರೈಸ್ ಡೇ ಕಾರ್ಯಕ್ರಮವನ್ನು ಆಚರಣೆ ಮಾಡಿರುತ್ತಾರೆ. ಕಾರ್ಯಕ್ರಮದ ಉಸ್ತುವಾರಿಯನ್ನು ಸ್ಕೌಟ್–ಗೈಡ್ ಶಿಕ್ಷಕರಾದ ಶ್ರೀ ಕೀರ್ತಿಕುಮಾರ್, ಶ್ರೀ ವಿಜಯಕುಮಾರ್, ಶ್ರೀಮತಿ ಮೋಹನ್ ಕುಮಾರಿರವರು ಕಾರ್ಯಕ್ರಮವನ್ನು ನೇರವೆರಿಸಿದ್ದರು.

– ಸಂತ ಫಿಲೋಮಿನ ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಕಾನೂನು ಅರಿವು ಕಾರ್ಯಕ್ರಮವನ್ನು ನಡೆಸಲಾಯಿತು. ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀಮತಿ ಗಿರಿಜಾಂಬಿಕ ಎಂ.ಬಿ.ರವರು ಮಾಹಿತಿಯನ್ನು ನೀಡಿರುತ್ತಾರೆ. ಗೈಡ್ ಶಿಕ್ಷಕಿ ಶ್ರೀಮತಿ ಧನಲಕ್ಷ್ಮಿ, ರೇಂಜರ್ ಲೀಡರ್ ಶ್ರೀಮತಿ ಅಶ್ವಿನಿ ಹಾಗೂ ಶ್ರೀಮತಿ ಸುಜಾತರವರು ಉಪಸ್ಥಿತರಿದ್ದರು.



– ಎಸ್.ಜಿ.ಆರ್. ಪಬ್ಲಿಕ್ ಶಾಲೆಯಲ್ಲಿ ರಕ್ಷಾಬಂಧನ ಕಾರ್ಯಕ್ರಮವನ್ನು ಆಚರಣೆ ಮಾಡಲಾಯಿತು. ಸಹೋದರತ್ವ ಸಂಕೇತವಾದ ಈ ದಿನದ ಮಹತ್ವವನ್ನು ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಗೈಡ್ ಶಿಕ್ಷಕಿ ಶ್ರೀಮತಿ ಮಮತ ತಿಳಿಸಿದರು, ಗೈಡ್ ವಿದ್ಯಾರ್ಥಿಗಳು ತಾವೆ ತಯಾರಿಸಿದ ರಕ್ಷಬಂಧನವನ್ನು ಕಬ್, ಸ್ಕೌಟ್ ಹಾಗೂ ಇತರೆ ವಿದ್ಯಾರ್ಥಿಗಳಿಗೆ ಕಟ್ಟಿದರು ಸ್ಕೌಟ್ ಸಹೋದರರು ಗೈಡ್ ವಿದ್ಯಾರ್ಥಿಗಳಿಗೆ ತಾವುಗಳೇ ಸಿದ್ಧ ಮಾಡಿದ ಗ್ರೀಟಿಂಗ್ ಕಾರ್ಡ್‌ಗಳನ್ನು ನೀಡಿದರು.

– ಸ್ಕೌಟ್ಸ್–ಗೈಡ್ಸ್ ನಿಯಮದ ಒಂಭತ್ತು ಅಂಶಗಳಲ್ಲಿ ಸಹೋದರತೆಯು ಒಂದು ಮುಖ್ಯವಾದ ಅಂಶವಾಗಿದ್ದು ಸ್ಕೌಟ್ಸ್ ಮತ್ತು ಗೈಡ್ಸ್ ನಡುಗೆ ಸಹೋದರತೆಯ ಅನ್ಯೋನ್ಯ ಅನುಬಂಧ ಬೆಸೆಯಲು ರಕ್ಷಾಬಂಧನ ಬಹಳ ಪ್ರಮುಖವಾದ ಆಚರಣೆಯಾಗಿದೆ" ಎಂದು ಸ್ಥಳೀಯ ಸಂಸ್ಥೆ ಆಲೂರಿನ ಉಪಾಧ್ಯಕ್ಷೆ ಶ್ರೀಮತಿ ಸಿ.ಎಸ್. ಪೂರ್ಣಿಮಾ ಅಭಿಪ್ರಾಯ ಪಟ್ಟರು. ಅವರು ಸ್ಥಳೀಯ ಸಂಸ್ಥೆ ಆಲೂರು ಹಾಗೂ ವಿಶ್ವೇಶ್ವರಯ್ಯ ಪಬ್ಲಿಕ್ ಸ್ಕೂಲ್ ಆಲೂರು ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ರಕ್ಷಾಬಂಧ'ನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿಶ್ವೇಶ್ವರಯ್ಯ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾಂಶುಪಾಲರಾದ ಶ್ರೀ ಎಚ್.ವಿ. ನಾಗಭೂಷಣ್ ಅವರು ಮುಖ್ಯ ಅತಿಥಿಗಳಾಗಿ ಮಾತನಾಡಿ ಎಲ್ಲಾ ಮತಧರ್ಮದ ಜನರಲ್ಲಿಯೂ ಕೂಡ ಅಣ್ಣ–ತಂಗಿಯರ ಭಾವನೆಯನ್ನು ಬೆಸೆದು–ಬಾಂಧವ್ಯವನ್ನು ಇಮ್ಮಡಿಗೊಳಿಸುತ್ತದೆ" ಎಂದು ರಕ್ಷಾಬಂಧನದ ಮಹತ್ವವನ್ನು ತಿಳಿಸಿದರು.



– 'ಭಾರತ್ ಸ್ಕೌಟ್ಸ್–ಗೈಡ್ಸ್ ಕಮ್ಮಿಕೊಂಡಿರುವ ದೇಶಭಕ್ತಿ ಗೀತಗಾಯನ ಹಾಗೂ ಜಾನಪದ ಗೀತಗಾಯನ ಸ್ಪರ್ಧೆಗಳು ಮಕ್ಕಳಲ್ಲಿ ದೇಶಾಭಿಮಾನ ಬೆಳೆಸುವುದರ ಜೊತೆಗೆ ಸಂಗೀತಾಭಿರುಚಿಯನ್ನು ವೃದ್ಧಿಸುತ್ತದೆ' ಎಂದು ಆಲೂರು ವಿಶ್ವೇಶ್ವರಯ್ಯ ಐಟಿಐ ಕಾಲೇಜಿನ ಪ್ರಾಂಶುಪಾಲ ಶ್ರೀ ಎಚ್.ವಿ. ನಾಗಭೂಷಣ್ ಅಭಿಪ್ರಾಯಪಟ್ಟರು. ಅವರು ಆಲೂರು ಪಟ್ಟಣದ ವಿಶ್ವೇಶ್ವರಯ್ಯ ಪಬ್ಲಿಕ್ ಶಾಲೆಯಲ್ಲಿ ಸ್ಥಳೀಯ ಸಂಸ್ಥೆ ಆಲೂರು ವತಿಯಿಂದ ತಾಲ್ಲೂಕು ಮಟ್ಟದ ದೇಶಭಕ್ತಿ ಗೀತಗಾಯನ ಸ್ಪರ್ಧೆಯಲ್ಲಿ ಮಕ್ಕಳನ್ನು ಉದ್ದೇಶಿಸಿ ಮಾತನಾಡಿದರು. ಆಲೂರು ತಾಲ್ಲೂಕು ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷೆ ಶ್ರೀಮತಿ ಸಿ.ಎಸ್. ಪೂರ್ಣಿಮಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ "ನಮ್ಮ ಆಲೂರು ತಾಲ್ಲೂಕಿನಲ್ಲಿ ಬೆರಳೆಣಿಕೆಯಲ್ಲಿದ್ದ ಸ್ಕೌಟ್ಸ್–ಗೈಡ್ಸ್ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ಪ್ರತಿ ಶಾಲೆಯಲ್ಲಿಯೂ ನೂರಾರು ಮಕ್ಕಳು ಸಮವಸ್ತ್ರ ಧರಿಸಿ ಕಾರ್ಯಚಟವಟಿಕೆಗಳಲ್ಲಿ ತೊಡಗಿರುವುದು ಸಂತೋಷದ ಸಂಗತಿಯಾಗಿದೆ' ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾ ಸ್ಕೌಟ್ಸ್ ಆಯುಕ್ತ ಶ್ರೀ ಸ್ಟೀಫನ್ ಪ್ರಕಾಶ್, ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಶ್ರೀ ಬೊಮ್ಮೇಗೌಡ ಭಾಗವಹಿಸಿದ್ದರು.

– ಬೇಲೂರು ತಾಲ್ಲೂಕು ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಎಸ್.ಜಿ.ಆರ್. ಶಾಲೆಯಲ್ಲಿ ಸಂಘಟಿಸಿದರು. ಜಿಲ್ಲಾ ಸಂಸ್ಥೆಯ ಪದಾಧೀಕಾರಿಗಳು ತಾಲ್ಲೂಕು ಸಂಸ್ಥೆಯ ಪದಾಧಿಕಾರಿಗಳು ಶಿಬಿರದಲ್ಲಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಶುಭಕೋರಿದರು. ತಾಲ್ಲೂಕು ಕಾರ್ಯದರ್ಶಿ ಶ್ರೀ ಪರಮೇಶ್ವರಪ್ಪ ಶಿಬಿರವನ್ನು ಸಂಘಟಿಸಿದರು.

– ಆಗಸ್ಟ್ 15 ರಂದು 79ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಭಾರತ್ ಸ್ಕೌಟ್ಸ್–ಗೈಡ್ಸ್ ಶ್ರೀಮತಿ ಪೊನ್ನಮ್ಮ ಕುಶಾಲಪ್ಪ ಸ್ಕೌಟ್ಸ್–ಗೈಡ್ಸ್ ಭವನ ಮಡಿಕೇರಿಯಲ್ಲಿ ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯೂರವರು ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭ ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ರಾಣಿ ಮಾಚಯ್ಯ, ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಕೆ.ಯು. ರಂಜಿತ್ ಉಪಸ್ಥಿತರಿದ್ದರು.



– ಆಗಸ್ಟ್ 15 ರಂದು ಕೊಡಗು ಜಿಲ್ಲಾಡಳಿತ ವತಿಯಿಂದ ನಡೆದ 79ನೇ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಬೋಸ್‌ರಾಜ್, ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಾ. ಮಂತರ್ ಗೌಡ, ಜಿಲ್ಲಾಧಿಕಾರಿಗಳಾದ ಶ್ರೀ ವೆಂಕಟರಾಜ್, ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀ ರಾಮರಾಜನ್, ಕೊಡಗು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಅಪರ ಜಿಲ್ಲಾಧಿಕಾರಿಗಳಾದ ಶ್ರೀಮತಿ ಐಶ್ವರ್ಯ ಇವರೊಡಗೂಡಿ ಸ್ಕೌಟ್ಸ್–ಗೈಡ್ಸ್‌ನಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಶ್ರೀ ಬಿ.ಎ. ಭಾಸ್ಕರ್, ಶ್ರೀ ಸಚಿನ್ ಪುಟ್ಟಯ್ಯ, ಶ್ರೀಮತಿ ಪುಷ್ಪ ಅಶೋಕ್ ಇವರನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭ ಪಥಸಂಚಲನದಲ್ಲಿ ಒಟ್ಟು 23 ತಂಡ ಭಾಗವಹಿಸಿದ್ದು ಇದರಲ್ಲಿ ಮೂರು ಸ್ಕೌಟ್ಸ್, ತಂಡ ಮೂರು ಗೈಡ್ಸ್ ತಂಡ ಪಾಲ್ಗೊಂಡಿದ್ದು ಸಂತ ಜೋಸೆಫ್‌ರ ಪ್ರೌಢ ಶಾಲೆಯ ಗೈಡ್ ತಂಡವು ಪ್ರಥಮ ಸ್ಥಾನವನ್ನು ಪಡೆದುಕೊಂಡಿರುತ್ತದೆ. ಇದೇ ಸಂದರ್ಭ ರಾಜ್ಯ ಪುರಸ್ಕಾರ ಪ್ರಶಸ್ತಿ ಪತ್ರವನ್ನು ಉಸ್ತುವಾರಿ ಸಚಿವರು ವಿತರಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಆಯುಕ್ತರು ಶ್ರೀ ಕೆ.ಟಿ. ಬೇಬಿ ಮ್ಯಾಥ್ಯೂ, ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಜಿಮ್ಮಿ ಸಿಕ್ವೇರಾ, ಪದ್ಮಶ್ರೀ ಪುರಸ್ಕೃತರು ಜಿಲ್ಲಾ ಗೈಡ್ ಆಯುಕ್ತರು ಉಪಸ್ಥಿತರಿದ್ದರು.



– ಆಗಸ್ಟ್ 16 ರಿಂದ 18ರ ವರೆಗೆ ಕೂರ್ಗ್ ಪಬ್ಲಿಕ್ ಸ್ಕೂಲ್ ಗೋಣಿಕೊಪ್ಪ ಇಲ್ಲಿ ರಾಜ್ಯ ಪುರಸ್ಕಾರ ಪೂರ್ವ ಸಿದ್ಧತಾ ಪರೀಕ್ಷೆಯನ್ನು ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ



ಜಿಮ್ಮಿ ಸಿಕ್ವೇರಾ ಇವರ ನೇತೃತ್ವದಲ್ಲಿ ನಡೆಸಲಾಯಿತು. ಈ ಸಂದರ್ಭ ಜಿಲ್ಲಾ ಗೈಡ್ ತರಬೇತಿ ಆಯುಕ್ತರಾದ ಶ್ರೀಮತಿ ಮೈಥಿಲಿ ರಾವ್, ಜಿಲ್ಲಾ ಸಹಾಯಕ ಗೈಡ್ ಆಯುಕ್ತರಾದ ಶ್ರೀಮತಿ ಸುಲೋಚನ ಇವರುಗಳು ಇದ್ದರು.

– ಆಗಸ್ಟ್ 17 ರಂದು ಕುಶಾಲ ನಗರ ಕೂಡು ಮಂಗಳೂರು ಪ್ರೌಢ ಶಾಲೆಯ ಕೂಡ್ಲೂರು ಎಂಬಲ್ಲಿ ನಡೆದ ಕೆಸರುಗದ್ದೆ ಕ್ರೀಡಾಕೂಟ ನಡೆಯಿತು. ಸ್ಕೌಟ್ಸ್–ಗೈಡ್ಸ್ ನಡೆ ಕೃಷಿಯ ಕಡೆಗೆ ಎಂಬ ಸಂದೇಶದೊಂದಿಗೆ ಕೆಸರು ಗದ್ದೆ ಕ್ರೀಡಾಕೂಟಕ್ಕೆ ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯುರವರು ಚಾಲನೆ ನೀಡಿದರು. ಈ ಕಾರ್ಯಕ್ರಮದಲ್ಲಿ ಶ್ರೀ ಪ್ರೇಮ್ ಕುಮಾರ್, ಕುಶಾಲನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು ಮತ್ತು ಎಲ್ಲಾ ಪದಾಧಿಕಾರಿಗಳು ಹಾಗೂ ಊರಿನ ಮುಖ್ಯಸ್ಥರು ಲಯನ್ಸ್ ಕ್ಲಬ್ ಪದಾಧಿಕಾರಿಗಳು ಅಲ್ಲದೆ ಸ್ಕೌಟ್ಸ್–ಗೈಡ್ಸ್‌ಗಳು ಮತ್ತು ಶಿಕ್ಷಕರು ಭಾಗವಹಿಸಿದ್ದರು.




– ಆಗಸ್ಟ್ 18 ರಂದು ಕುಶಾಲನಗರ ತಾಲ್ಲೂಕಿಗೆ ನೂತನವಾಗಿ ಆಗಮಿಸಿರುವ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಕೃಷ್ಣಪ್ಪ ಎಂ. ಇವರನ್ನು ಕಛೇರಿಯಲ್ಲಿ ಭೇಟಿ ಮಾಡಲಾಯಿತು. ಕುಶಾಲನಗರ ಸ್ಥಳೀಯ ಸಂಸ್ಥೆಯ ಖಜಾಂಚಿಯವರಾದ ಶ್ರೀ ನರೇಶ್ ಇವರು ಕಂಠ ವಸ್ತ್ರ ತೊಡಿಸುವುದರ ಮೂಲಕ ಆತ್ಮೀಯವಾಗಿ ಸಂಸ್ಥೆಗೆ ಸ್ವಾಗತಿಸಿದರು. ಈ ಸಂದರ್ಭ ಸಂಸ್ಥೆಯ ಸ್ಮರಣಿಕೆಯನ್ನು ಮಾಹಿತಿ ಪುಸ್ತಕವನ್ನು ಹಾಗೂ ರಾಜ್ಯ ಸಂಸ್ಥೆಯಿಂದ ನೀಡಿರುವ ಕಾರ್ಯಯೋಜನೆ ಪುಸ್ತಕವನ್ನು ನೀಡಲಾಯಿತ್ತು. ಈ ಸಂದರ್ಭ ಕುಶಾಲನಗರ ಸ್ಥಳೀಯ ಸಂಸ್ಥೆಯ ಸದಸ್ಯರಾದ ಶ್ರೀ ಗಣೇಶ್, ಜಿಲ್ಲಾ ಸಹಾಯಕ ಗೈಡ್ ಆಯುಕ್ತರಾದ ಶ್ರೀಮತಿ ಸುಲೋಚನ, ಜಿಲ್ಲಾ ಸಂಘಟಕರು ಶ್ರೀಮತಿ ದಮಯಂತಿ, ದೈಹಿಕ ಶಿಕ್ಷಣ ಪರಿವೀಕ್ಷಕರಾದ ಶ್ರೀಮತಿ ಸುಕುಮಾರಿ ಉಪಸ್ಥಿತರಿದ್ದರು.



– ಕೊಡಗು ಜಿಲ್ಲಾ ಸಂಸ್ಥೆ ಮತ್ತು ಕುಶಾಲನಗರ ಸ್ಥಳೀಯ ಸಂಸ್ಥೆ ಹಾಗೂ ಕುಶಾಲ ನಗರದ ಮುಳ್ಳುಸೋಗೆ ಹಾಗೂ ಮಾಜಿ ಸೈನಿಕರ ಸಂಘದ ಸಂಯುಕ್ತಾಶ್ರಯದಲ್ಲಿ ಮುಳ್ಳು ಸೋಗೆಯ ಮಾಜಿ ಸೈನಿಕರ ಸಂಘದ ಕೆದಂಬಾಡಿ ಶ್ರೀ ಸಣ್ಣಪ್ಪ ಸಭಾಂಗಣದಲ್ಲಿ ಜುಲೈ 26 ರಂದು 'ಕಾರ್ಗಿಲ್ ವಿಜಯೋತ್ಸವ' ಆಚರಣೆಯನ್ನು ಆಚರಿಸಲಾಯಿತು. ವಿಜಯೋತ್ಸವದಲ್ಲಿ ವೀರಮರಣ ಹೊಂದಿದ ಸೈನಿಕರ ಸೇವೆಯನ್ನು ಸ್ಮರಿಸಿ ಗೌರವ ನಮನ ಸಲ್ಲಿಸಲಾಯಿತು. ಯೋಧರ ತ್ಯಾಗ, ಬಲಿದಾನ ಸ್ಮರಿಸಿ, ನಿವೃತ್ತ ಯೋಧರಿಗೆ



ಸನ್ಮಾನಿಸಿ ಗೌರವಿಸಲಾಯಿತು. ಭಾರತೀಯ ಸೇನೆಯ ಮಹತ್ವ ಹಾಗೂ ಕಾರ್ಗಿಲ್ ವಿಜಯೋತ್ಸವದ ಕುರಿತು ಕೊಡಗು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಉಪನ್ಯಾಸಕ ಡಾ. ಜಮೀರ್ ಅಹ್ಮದ್ ಮಾತನಾಡಿದರು. ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆಯ ಪ್ರಧಾನ ಆಯುಕ್ತ ಶ್ರೀ ಕೆ.ಟಿ. ಬೇಬಿಮ್ಯಾಥ್ಯೂ, 'ಕಾರ್ಗಿಲ್ ವಿಜಯೋತ್ಸವವು ನಮ್ಮ ದೇಶದ ಹೆಮ್ಮೆಯ ದಿವಸವಾಗಿದ್ದು, 26 ವರ್ಷಗಳ ಹಿಂದೆ ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ಯೋಧರ ತ್ಯಾಗ, ಬಲಿದಾನಗಳನ್ನು ಸ್ಮರಿಸುವ ಮೂಲಕ ಅವರ ದೇಶ ಸೇವೆ ಬಗ್ಗೆ ನಾವು ಗೌರವಿಸಬೇಕು' ಎಂದರು.

ಕಾರ್ಗಿಲ್ ವಿಜಯೋತ್ಸವದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ಸ್ಕೌಟ್ಸ್ ಆಯುಕ್ತ ಶ್ರೀ ಜಿಮ್ಮಿ ಸಿಕ್ವೇರಾ, 'ಸೇನೆಯಲ್ಲಿ ಯೋಧರು ಸಲ್ಲಿಸಿರುವ ಸೇವೆ ಹಾಗೂ ಯುದ್ದದಲ್ಲಿ ಹುತಾತ್ಮರಾದ ಯೋಧರ ತ್ಯಾಗ, ಬಲಿದಾನದ ಬಗ್ಗೆ ನಾವು ವಿದ್ಯಾರ್ಥಿ ಸಮುದಾಯಕ್ಕೆ ಪರಿಚಯಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ದೇಶಾಭಿಮಾನ ಬೆಳೆಸಬೇಕು' ಎಂದರು. ಕಾರ್ಗಿಲ್ ವಿಜಯೋತ್ಸವ ಹಾಗೂ ಯುದ್ಧ ಭೂಮಿಯಲ್ಲಿ ಯೋಧರ ಕಾರ್ಯತಂತ್ರದ ಕುರಿತು ಮಾಹಿತಿ ನೀಡಿದ ಸಂಘದ ಕಾರ್ಯದರ್ಶಿ ಸುಬೇದಾರ್ ಮೇಜರ್ ಶ್ರೀ ಎಸ್.ಆರ್. ಮಾದಪ್ಪ, ನಾವು ದೇಶದ ರಕ್ಷಣೆಗಾಗಿ ದುಡಿಯಬೇಕು ಎಂದರು. ಅಧ್ಯಕ್ಷತೆ ವಹಿಸಿದ್ದ ಕ್ಯಾಪ್ಟನ್ ಶ್ರೀ ಡಿ.ಕೆ. ಚಿಣ್ಣಪ್ಪ ಮಾತನಾಡಿ, 'ಪ್ರತಿಯೊಬ್ಬರೂ ದೇಶದ ಅಭಿಮಾನ ಬೆಳೆಸಿಕೊಂಡು ರಾಷ್ಟ್ರದ ರಕ್ಷಣೆಗೆ ಪಣತೊಡಬೇಕು' ಎಂದರು.

– ಜಿಲ್ಲಾ ಸಂಸ್ಥೆ, ಕುಶಾಲನಗರ ಸ್ಥಳೀಯ ಸಂಸ್ಥೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ತಾಲ್ಲೂಕು ಗಿರಿಜನ ಸಮಗ್ರ ಅಭಿವೃದ್ಧಿ ಯೋಜನೆ ವತಿಯಿಂದ ಕೂಡಿಗೆ ಗ್ರಾಮ ಪಂಚಾಯಿತ್ ಹಾಗೂ ಬಸವನಹಳ್ಳಿಯಲ್ಲಿರುವ ತಾಲ್ಲೂಕು ಗಿರಿಜನ ದೊಡ್ಡ ಪ್ರಮಾಣದ ವಿವಿಧೋದ್ದೇಶ ಸಹಕಾರ ಸಂಘದ ಸಹಯೋಗದೊಂದಿಗೆ ಬ್ಯಾಡಗೊಟ್ಟ ಗ್ರಾಮದ ಆದಿವಾಸಿಗಳ ಪುನರ್ವಸತಿ ಕೇಂದ್ರದಲ್ಲಿ ಆಗಸ್ಟ್ 09 ರಂದು ಜಿಲ್ಲಾ ಮಟ್ಟದ ವಿಶ್ವ ಬುಡಕಟ್ಟು ದಿನಾಚರಣೆ ನಡೆಸಲಾಯಿತು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಬಸವನಹಳ್ಳಿ ಗಿರಿಜನರ ವಿವಿಧೋದ್ದೇಶ ಸಹಕಾರ ಸಂಘ (ಲ್ಯಾಂಪ್ಸ್)ದ ಉಪಾಧ್ಯಕ್ಷ ಶ್ರೀಮತಿ ಕಾವೇರಿ 'ಆದಿವಾಸಿಗಳು ತಮ್ಮ ಆರೋಗ್ಯ ರಕ್ಷಣೆ ಬಗ್ಗೆ ಹೆಚ್ಚಿನ ನಿಗಾ ವಹಿಸಬೇಕು' ಎಂದು ಮನವಿ ಮಾಡಿದರು. ಐ.ಎ.ಎಸ್. ಸಿವಿಲ್ ಪರೀಕ್ಷೆಯನ್ನು ತೆಗೆದುಕೊಂಡಿರುವ, ಬುಡಕಟ್ಟು ಜನಾಂಗದ ಯುವ ಪ್ರತಿಭಾವಂತ ವಿದ್ಯಾರ್ಥಿ ಶ್ರೀ ಜೆ.ಜಿ. ಸುರೇಶ್ ಮಾತನಾಡಿ 'ಬುಡಕಟ್ಟು ಸಮುದಾಯದವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಮೂಲಕ ಅವರನ್ನು ಸುಶಿಕ್ಷಿತರನ್ನಾಗಿ ರೂಪಿಸುವ ಮೂಲಕ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕು' ಎಂದು ಮನವಿ ಮಾಡಿದರು. ಅಧ್ಯಕ್ಷತೆ ವಹಿಸಿದ್ದ ಕೂಡಿಗೆ ಗ್ರಾಮ ಪಂಚಾಯತಿ ಅಧ್ಯಕ್ಷ ಶ್ರೀ ಕೆ.ಟಿ. ಗಿರೀಶ್ ಮಾತನಾಡಿ 'ಶ್ರಮ ಜೀವಿಗಳಾದ ಬುಡಕಟ್ಟು ಜನಾಂಗದವರು ಯಾವುದೇ ದುಶ್ಚಟಗಳಿಗೆ ಬಲಿಯಾಗದೇ ತಮ್ಮ ಬದುಕನ್ನು ಹಸನಗೊಳಿಸಿಕೊಳ್ಳಬೇಕು' ಎಂದರು. ಜಿಲ್ಲಾ ಸಂಸ್ಥೆಯ ಜಿಲ್ಲಾ ಪ್ರಧಾನ ಆಯುಕ್ತ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯೂ ಮಾತನಾಡಿ 'ಬುಡಕಟ್ಟು ಜನಾಂಗ ಮಕ್ಕಳಲ್ಲಿ ಉತ್ತಮ ಶಿಕ್ಷಣ ಹಾಗೂ ಆರೋಗ್ಯ ರಕ್ಷಣೆಯೊಂದಿಗೆ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶದೊಂದಿಗೆ ಬುಡಕಟ್ಟು ಜನಾಂಗದ ಆಚಾರ–ವಿಚಾರ ಹಾಗೂ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ದಿಸೆಯಲ್ಲಿ ಬುಡಕಟ್ಟು ದಿನಾಚರಣೆಯನ್ನು ಸಂಘಟಿಸಲಾಗಿದೆ' ಎಂದರು. ಜಿಲ್ಲಾ ಸ್ಕೌಟ್ಸ್ ಸಂಸ್ಥೆಯ ಆಯುಕ್ತ ಶ್ರೀ ಜಿಮ್ಮಿ ಸಕ್ವೇರಾ ಮಾತಾನಾಡಿ ಸಮುದಾಯದ ಕೇಂದ್ರದಲ್ಲಿ ಮುಕ್ತದಳ ಆರಂಭಿಸುವ ಮೂಲಕ ಸಂಘಟನೆಯ ಮಹತ್ವದ ತಿಳಿದುಕೊಳ್ಳುವ ಬಗ್ಗೆ ತಿಳಿಸಿದರು. ಸ್ಥಳೀಯ ಸಂಸ್ಥೆಯ ಅಧ್ಯಕ್ಷ ಡಾ॥ ಪ್ರವೀಣ್ ದೇವರಗುಂಡ ಸೋಮಪ್ಪ, ಸಂಸ್ಥೆಯ ಕಾರ್ಯದರ್ಶಿ ಶ್ರೀ ಎಂ.ಎಸ್. ಗಣೇಶ್, ಆದಿವಾಸಿ ರಕ್ಷಣಾ ಪರಿಷತ್ತಿನ ರಾಜ್ಯ ನಿರ್ದೇಶಕ ಶ್ರೀ ಬಿ.ಎ. ಗಂಗಾಧರ್, ಗ್ರಾಮ ಪಂಚಾಯತಿ ಉಪಾಧ್ಯಕ್ಷೆ ಶ್ರೀಮತಿ ಜಯಶ್ರೀ, ಗ್ರಾಮ ಪಂಚಾಯತಿ ಸದಸ್ಯ ಶ್ರೀ ಟಿ.ಪಿ. ಹಮೀದ, ಶ್ರೀ ಕೆ.ಎಸ್. ಶಿವಕುಮಾರ್ ಪಿಡಿಓ, ಶ್ರೀಮತಿ ಮಂಜುಳಾ, ಸ್ಕೌಟ್ಸ್–ಗೈಡ್ಸ್ ಮುಂತಾದವರು ಹಾಜರಿದ್ದರು.

## ಕೋಲಾರ

– ಜೂನ್ 17 ರಂದು ಬೆಂಗಳೂರಿನ ಆರಮನೆ ಮೈದಾನದಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಪರಿಸರ ಇಲಾಖೆಯ ಸಹಯೋಗದೊಂದಿಗೆ 750 ಸ್ಕೌಟ್ಸ್–ಗೈಡ್ಸ್‌ಗಳು ಭಾಗವಹಿಸಿದ್ದರು.

– ಜೂನ್ 18 ರಂದು ಜಿಲ್ಲಾ ಮಟ್ಟದ ವಿಪತ್ತು ನಿರ್ವಹಣಾ ತಂಡದ ಉದ್ಘಾಟನಾ ಸಮಾರಂಭದಲ್ಲಿ ಜಿಲ್ಲೆಯ 60 ಜನ ಯುವ ತಂಡ ಭಾಗವಹಸಿದ್ದರು. ಜಿಲ್ಲಾಧಿಕಾರಿಗಳಾದ ಶ್ರೀಯುತ ಎಂ.ಆರ್. ರವಿರವರು ಉದ್ಘಾಟಿಸಿ 'ಮತ್ತಷ್ಟು ಸ್ವಯಂಸೇವಕರನ್ನು ಸೇರಿಸುವ ಮೂಲಕ ಜಿಲ್ಲೆಯಲ್ಲಿ ಮಾದರಿ ತಂಡ ರಚನೆಗೆ ಎಲ್ಲರೂ ಕೈಜೋಡಿಸಿ' ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಾದ ಶ್ರೀಯುತ ನಿಖಿಲ್, ಜಿಲ್ಲಾ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಪ್ರವೀಣ್ ಪಿ. ಬಾಗೇವಾಡಿ ಮುಂತಾದವರು ಉಪಸ್ಥಿತರಿದ್ದರು.



– ಜೂನ್ 21 ರಂದು ಜಿಲ್ಲಾಮಟ್ಟದ ಯೋಗ ಕಾರ್ಯಕ್ರಮದಲ್ಲಿ ಜಿಲ್ಲೆಯ ಸ್ಕೌಟ್ಸ್ ಗೈಡ್ಸ್ ಸಂಸ್ಥೆಯ ಸದಸ್ಯರು ಮತ್ತು ಪಧಾಧಿಕಾರಿಗಳು ಭಾಗವಹಿಸಿದ್ದರು.

– ಜೂನ್ 22 ರಂದು ಕೋಲಾರ ಸ್ಥಳೀಯ ಸಂಸ್ಥೆಯ ಪ್ರೇಮಸೇವಾ ಶಾಲೆಯ ಆವರಣದಲ್ಲಿ ಅಡುಗೆ ತಯಾರಿಕಾ ಶಿಬಿರವನ್ನು ಕಬ್ ಮತ್ತು ಬುಲ್ ಮಕ್ಕಳಿಂದ ಶಾಲಾ ಶಿಕ್ಷಕಿ ಸಾಹಿರಾ ರವರು ಆಯೋಜನೆ ಮಾಡಿದ್ದರು.



– ಜೂನ್ 25 ರಿಂದ 27ರ ವರೆಗೆ ಜಿಲ್ಲಾ ಮಟ್ಟದ ತೃತೀಯ ಸೋಪಾನ್ ಪರೀಕ್ಷಾ ಶಿಬಿರ ಮತ್ತು ರಾಜ್ಯ ಪುರಸ್ಕಾರ ಪೂರ್ವ ಸಿದ್ದತಾ ಶಿಬಿರವನ್ನು ನಗರದ ಸ್ಕೌಟ್ ಭವನದಲ್ಲಿ ಆಯೋಜನೆ ಮಾಡಲಾಗಿತ್ತು, ಶಿಬಿರ ನಾಯಕರಾಗಿ ಶ್ರೀ ವಿನಯ್ ಕುಮಾರ್, ನಾಯಕಿಯಾಗಿ ಶ್ರೀಮತಿ ರಾಗಿಣಿ ಸೇವೆ ಸಲ್ಲಿಸಿದರು.

– ಆಗಸ್ಟ್ 01 ವಿಶ್ವ ಸ್ಕಾರ್ಫ್ ದಿನದಂದು ಜಿಲ್ಲಾ ಸ್ಕೌಟ್ ಭವನದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರು ನೂತನ ಸ್ಕೌಟ್ಸ್–ಗೈಡ್ಸ್‌ಗಳಿಗೆ ಸ್ಕಾರ್ಫ್ ಧರಿಸುವ ಮೂಲಕ ಸಂಸ್ಥೆಗೆ ಆಹ್ವಾನ ನೀಡಿದರು. ಇದೇ ದಿನ ನಗರದ ಮದರ್ ಥೆರೆಸಾ



ಶಾಲೆ, ಸುಭಾಷ್ ಶಾಲೆ, ಮಹಿಳಾ ಸಮಾಜ ಶಾಲೆ, ವಿದ್ಯಾ ಭೋದಿನಿ ಶಾಲೆ, ವ್ಯಾಲಿ ಶಾಲೆ, ಮುಳಬಾಗಿಲಿನ ನಗವಾರ ಶಾಲೆ, ಅಮರ ಜ್ಯೋತಿ ಶಾಲೆ, ಮಾಲೂರಿನ ಗೋಲ್ಲಹಳ್ಳಿ ಶಾಲೆ, ತೊರ್ನಹಳ್ಳಿ ಶಾಲೆ, ಜೆ.ಎಸ್.ಎಸ್. ಶಾಲೆಯಲ್ಲಿ, ಕಾಮಸಮುದ್ರದ ಆತ್ರೇಯ ಶಾಲೆ, ಕಾರಹಳ್ಳಿಯ ಸಾಧಕ್ ನ್ಯಾಷನಲ್ ಶಾಲೆ,. ದೇಶಿಹಳ್ಳಿಯ ಹೋಲಿ ಕ್ರಾಸ್ ಶಾಲೆ, ಕೆ.ಜಿ.ಎಫ್, ವಿರೂಪಾಕ್ಷಿ ಶಾಲೆ, ಗುಡ್‌ವಿಲ್ ಶಾಲೆ, ಭಗವಾನ್ ಮಹಾವೀರ್ ಕಾಲೇಜು, ಶ್ರೀನಿವಾಸಪುರ ಕೆ.ಪಿ.ಎಸ್ ಶಾಲೆ, ಪ್ರೀತಿ ಶಾಲೆ, ವಿದ್ಯಾ ಭೋದಿನಿ ಶಾಲೆ ಮುಂತಾದ ಶಾಲಾ ಕಾಲೇಜುಗಳಲ್ಲಿ ಆಚರಣೆ ಮಾಡಲಾಯಿತು.

– ಆಗಸ್ಟ್ 02 ಮತ್ತು 03 ರಂದು ತೃತೀಯ ಸೋಪಾನ್ ಪರೀಕ್ಷಾ ಶಿಬಿರವನ್ನು ಬಂಗಾರಪೇಟೆಯ ಸ್ಥಳಿಯ ಸಂಸ್ಥೆಯ ಆಶ್ರಯದಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜು ಆವರಣ ಬಂಗಾರಪೇಟೆ ಇಲ್ಲಿ ಆಯೋಜನೆ ಮಾಡಲಾಗಿತ್ತು.

– ಆಗಸ್ಟ್ 09 ರಂದು ಕೋಲಾರ ತಾಲ್ಲೂಕಿನ ನಾಗಲಾಪುರ ಮಠದ ಆವರಣದಲ್ಲಿ 110 ಗಿಡಗಳನ್ನು ನೆಡುವ ಸೇವಾ ಕಾರ್ಯವನ್ನು ಮುಕ್ತದಳದ ನಾಯಕಿ ಶ್ರೀಮತಿ ಶ್ರೀದೇವಿರವರ ನಾಯಕತ್ವದಲ್ಲಿ ನೆಡಲಾಯಿತು, ಈ ಕಾರ್ಯಕ್ಕೆ ಮಠದ ಸ್ವಾಮೀಜಿಗಳಾದ ಶ್ರೀ ಶ್ರೀ ಶ್ರೀ ತೇಜೇಷಲಿಂಗ ಶಿವಾಚಾರ್ಯ ಸ್ವಾಮಿಗಳು ಗಿಡವನ್ನು ನೆಡುವ ಮೂಲಕ ಚಾಲನೆ ನೀಡಿದರು, ಈ ಸೇವಾ ಶಿಬಿರದಲ್ಲಿ ಸ್ಕೌಟ್ ಶ್ರೀ ಬಾಬು, ಶ್ರೀ ವಸಂತ್‌ಗೌಡ ಮತ್ತು ಮಠದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

– ಆಗಸ್ಟ್ 9 ರಂದು ಕೋಲಾರ ನಗರದ ಮಹಿಳಾ ಸಮಾಜ ಕಾಲೇಜಿನ ಎನ್.ಎಸ್.ಎಸ್., ಸ್ಕೌಟ್ಸ್–ಗೈಡ್ಸ್, ರೆಡ್‌ಕ್ರಾಸ್ ಸಮಿತಿಗಳ ವತಿಯಿಂದ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಆಯೋಜನೆ ಮಾಡಿ 85 ಯುನಿಟ್ ರಕ್ತವನ್ನು ಸಂಗ್ರಹಿಸಲಾಯಿತು. ಕಾಲೇಜಿನ ಕಾರ್ಯದರ್ಶಿ ಶ್ರೀ ನಂದನರವರು ಎಲ್ಲರಿಗೂ ಶುಭಕೋರಿದರು.

– ಆಗಸ್ಟ್ 15 ರಂದು ಜಿಲ್ಲಾ ಸಂಸ್ಥೆಯ ವತಿಯಿಂದ ನಡೆದ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರು ಧ್ವಜಾರೋಹಣವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಮತ್ತು ಸ್ಥಳಿಯ ಸಂಸ್ಥೆಯ ಪದಾಧಿಕಾರಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



– 'ನಮ್ಮ ದೇಶದಲ್ಲಿ ಅನೇಕ ರೀತಿಯ ಹಬ್ಬ ಹರಿದಿನಗಳನ್ನು ಆಚರಣೆ ಮಾಡಿಕೊಂಡು ಬಂದಿದ್ದೇವೆ, ವಿವಿಧತೆಯಲ್ಲಿ ಏಕತೆಯನ್ನು ಕಾಣುವ ದೇಶವಾಗಿದ್ದು ಎಲ್ಲಾ ರೀತಿಯ ಹಬ್ಬಗಳ ಸಂದೇಶ ಒಂದೇ ಆಗಿರುತ್ತದೆ, ಆಚರಣೆ ಬೇರೆ ಬೇರೆ ರೀತಿಯಾಗಿದ್ದರು, ನಾವು ನೆಮ್ಮದಿ ಮತ್ತು ಬಾಂಧವ್ಯವನ್ನು ಮೂಡಿಸುವುದೇ ಮೂಲ ಉದ್ದೇಶವಾಗಿದೆ' ಎಂದು ರವಿ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಕಾರ್ಯದರ್ಶಿಗಳಾದ ಶ್ರೀ ಗೋಪಾಲಪ್ಪ ತಿಳಿಸಿದರು. ಆಗಸ್ಟ್ 16 ರಂದು ಕೋಲಾರ ನಗರದ ರವಿ ಇಂಟರ್ ನ್ಯಾಷನಲ್ ಶಾಲೆಯ ಆವರಣದಲ್ಲಿ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ, ರೋಟರಿ ಕೋಲಾರ ನಂದಿನಿ ಹಾಗೂ ರವಿ ಶಿಕ್ಷಣ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಆಯೋಜನೆ ಮಾಡಿದ್ದ ಶ್ರೀಕೃಷ್ಣ ಜನ್ಮಾಷ್ಟಮಿ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದರು. ರವಿ ಶಿಕ್ಷಣ ಸಂಸ್ಥೆಯ ಆಡಳಿತಾಧೀಕಾರಿ ಶ್ರೀ ನರೇಶ್ ಬಾಬುರವರು ಮಾತನಾಡಿ 'ನಮ್ಮ ದೇಶದಲ್ಲಿ ಅನೇಕ ಧರ್ಮಗಳ ಜನರು ವಾಸಮಾಡುತ್ತಿದ್ದು, ಅನ್ಯೋನತೆಯಿಂದ ಜೀವನ ಸಾಗಿಸುತ್ತಿದ್ದೇವೆ' ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಶಾಲೆಯ ನಿರ್ದೇಶಕಿ ಶ್ರೀಮತಿ ಸುಷ್ಮಾ, ಸ್ಕೌಟ್ ಆಯುಕ್ತ ಶ್ರೀ ಸುರೇಶ್, ರೋಟರಿ ಕೋಲಾರ ಶ್ರೀ ನಂದಿನಿ ಅಧ್ಯಕ್ಷರಾದ ಬೇವಹಳ್ಳಿ ಶ್ರೀ ಶಂಕರಪ್ಪ, ಶಾಲಾ ಮುಖ್ಯ ಶಿಕ್ಷಕಿ ಶ್ರೀಮತಿ ಭವಾನಿ, ಬಿಇಡಿ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಮಂಜುನಾಥ ರೆಡ್ಡಿ, ಶಾಲಾ ಶಿಕ್ಷಕ ವರ್ಗ, ಆಡಳಿತ ಮಂಡಳಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

– ಆಗಸ್ಟ್ 17 ರಂದು 'ಪರಿಸರ ಸಂರಕ್ಷಣೆಯಲ್ಲಿ ಸಮುದಾಯದ ಪಾತ್ರ ಮಹತ್ವದಾಗಿದ್ದು ಎಲ್ಲರೂ ಪರಿಸರ ಸಂರಕ್ಷಣೆಗೆ ಕೈಜೋಡಿಸಬೇಕು' ಎಂದು ರೋಟರಿ ಕೋಲಾರ ಶ್ರೀ ನಂದಿನಿ ಅಧ್ಯಕ್ಷ ಶ್ರೀ ಎಂ. ಶಂಕರಪ್ಪ ತಿಳಿಸಿದರು. ಕೋಲಾರ ನಗರದಲ್ಲಿ ಸ್ಕೌಟ್ಸ್–ಗೈಡ್ಸ್ ಸಂಸ್ಥೆ ಮತ್ತು ರೋಟರಿ ಕೋಲಾರ ಶ್ರೀ ನಂದಿನಿ, ವಂಶೋದಯ ಆಸ್ಪತ್ರೆ, ಹಾಗೂ ಕೋಲಾರ ಹಸಿರು ಪಡೆಯ ವತಿಯಿಂದ ವನಮಹೋತ್ಸವ ಪ್ರಯುಕ್ತ ರಸ್ತೆಯ ವಿಭಜಕಗಳಲ್ಲಿ ಗಿಡ ನೆಡುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದರು. ಕೋಲಾರ ಹಸಿರು ಪಡೆಯ ಸಂಚಾಲಕರಾದ ಸ್ಕೌಟ್ ಬಾಬು ರವರು ಮಾತನಾಡಿ 'ನಗರದಲ್ಲಿ ಐದು ಸಾವಿರ ಗಿಡಗಳನ್ನು ನೆಟ್ಟು ಪೋಷಿಸುವ ಉದ್ದೇಶ ಹೊಂದಿದ್ದು, ನಗರದ ವಾಸಿಗಳು ತಮ್ಮ ಮನೆಗಳ ಸಮೀಪದ ಗಿಡಗಳನ್ನು ಪೋಷಣೆ ಮಾಡುವ ಜವಾಬ್ದಾರಿಯನ್ನು ವಹಿಸಿಕೊಂಡಾಗ ನಮಗೆ ಮತ್ತಷ್ಟು ಹುಮ್ಮಸ್ಸು ಬರಲಿದೆ' ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸ್ಕೌಟ್ ಆಯುಕ್ತರಾದ ಶ್ರೀ ಸುರೇಶ್, ರವಿ ಕಾಲೇಜಿನ ನಿರ್ದೇಶಕರಾದ ಶ್ರೀಮತಿ ಸುಷ್ಮಾ, ಶ್ರೀ ನರೇಶ್ ಬಾಬು, ಜಿಲ್ಲಾ ಹಸಿರು ಪಡೆಯ ಶ್ರೀ ರಮೇಶ್ ನಾಯಕ್, ಶ್ರೀ ಅರುಣ್, ಶ್ರೀ ಮಂಜುನಾಥ್, ಶ್ರೀ ಸುದರ್ಶನ್ ಗೌಡ, ಟೈಗರ್ ಶ್ರೀ ವೆಂಕಟೇಶ್, ಶ್ರೀ ನಾರಾಯಣಪ್ಪ, ಶ್ರೀ ವಸಂತ್ ಗೌಡ, ಶ್ರೀ ದೇವರಾಜ್, ಶ್ರೀಮತಿ ರತ್ನ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

– ಕೋಲಾರ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆಯ ಮಾನ್ಯ ಉಪನಿರ್ದೇಶಕರಾದ ಶ್ರೀ ಕೃಷ್ಣಮೂರ್ತಿರವರು ವರ್ಗಾವಣೆಯಾದ ಕಾರಣ ಜಿಲ್ಲಾ ಸಂಸ್ಥೆ ವತಿಯಿಂದ ಬಿಳ್ಕೋಡುಗೆ ಸಮಾರಂಭವನ್ನು ಆಯೋಜಿಸಿ ಜಿಲ್ಲಾ ಸಂಸ್ಥೆಗೆ ನೀಡಿದ ಸಹಕಾರಕ್ಕೆ ಅಭಿನಂದನೆ ಮತ್ತು ಧನ್ಯವಾದಗಳನ್ನು ಜಿಲ್ಲಾ ಮುಖ್ಯ ಆಯುಕ್ತರು ಸಲ್ಲಿಸಿದರು, ಈ ಸಂದರ್ಭದಲ್ಲಿ ಜಿಲ್ಲಾ ಗೈಡ್ಸ್ ಆಯುಕ್ತೆ ಶ್ರೀಮತಿ ನವೀನಾ ಎಂ., ನೌಕರರ ಸಂಘದ ಉಪಾಧ್ಯಕ್ಷ ಶ್ರೀ ಅನಿಲ್ ಕುಮಾರ್, ಪದಾಧಿಕಾರಿಗಳು ಮತ್ತು ಶಿಕ್ಷಕರು ಉಪಸ್ಥಿತರಿದ್ದರು.



## ಕೊಪ್ಪಳ

– ಆಗಸ್ಟ್ 01 ರಂದು ಕುವೆಂಪು ಶತಮಾನೋತ್ಸವ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಕಿನ್ನಾಳ ತಾ. ಕೊಪ್ಪಳ ವಿಶ್ವ ಸ್ಕಾರ್ಫ್ ದಿನಾಚರಣೆ ಅಂಗವಾಗಿ ಶಾಲೆಯ ಸ್ಕೌಟ್ಸ್‌ಗಳು ತಮ್ಮ ಸ್ಕಾರ್ಫ್ ಧರಿಸಿ ಚಟುವಟಿಕೆಗಳನ್ನು ಮಾಡುವುದರೂಂದಿಗೆ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಶ್ರೀ ಮಾರುತಿ ಅರೇರ್, ಜಿಲ್ಲಾ ಕಾರ್ಯದರ್ಶಿಗಳು ಹಾಗೂ ಶಾಲೆಯ ಮುಖ್ಯ ಗುರುಗಳು ಹಾಗೂ ಶ್ರೀ ಪ್ರಭಾಕರ ದಾಸರ, ಜಿಲ್ಲಾ ಸಹ ಕಾರ್ಯದರ್ಶಿಗಳು ಇತರರು ಉಪಸ್ಥಿತರಿದ್ದರು.



– ಆಗಸ್ಟ್ 02 ರಂದು ಉಪನಿರ್ದೇಶಕರು ಪದವಿ ಪೂರ್ವ ಕಾಲೇಜು ಶಿಕ್ಷಣ ಇಲಾಖೆ ಕೊಪ್ಪಳ ಇಲಾಖೆ ವತಿಯಿಂದ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರು ರವರ ಕಾರ್ಯಗಾರವನ್ನು ಇಲಾಖೆಯಿಂದ ಜರುಗಿಸಲಾಯಿತು. ಶ್ರೀ ಜಿ.ಹೆಚ್. ಜಗದೀಶ್, ಮಾನ್ಯ ಉಪನಿರ್ದೇಶಕರು ಪದವಿ ಪೂರ್ವ ಕಾಲೇಜು ಶಿಕ್ಷಣ ಇಲಾಖೆ ರವರು ಪ್ರತಿ ಕಾಲೇಜಿನಲ್ಲಿ ಘಟಕಗಳನ್ನು ಪ್ರಾರಂಭಿಸಲು ಮತ್ತು ಉಪನ್ಯಾಸಕರು ಕಡ್ಡಾಯವಾಗಿ ತರಬೇತಿ ನಿಯೂಜಿಸಲು ಸೂಚಿಸಿದರು. ನಂತರ ಶ್ರೀ ಮಲ್ಲಿಕಾರ್ಜುನ ಚೌಕಿಮಠ, ಜಿಲ್ಲಾ ಆಯುಕ್ತರು (ಸ್ಕೌಟ್) ಇವರು ಪ್ರತಿಯೊಂದು ಕಾಲೇಜಿನಿಂದ ಉಪನ್ಯಾಸಕರನ್ನು ತರಬೇತಿಗೆ ನೀಯೂಜಿಸಿ



ಮತ್ತು ಘಟಕಗಳನ್ನು ಪ್ರಾರಂಭಿಸುವ ಕುರಿತು, ರೋವರ್ ರೇಂಜರ್ಸ್ ಘಟಕಗಳ ಶುಲ್ಕದ ವಿವರ ಬಗ್ಗೆ ಚಟುವಟಿಕೆಗಳನ್ನು ನಡೆಸಲು ಪರೀಕ್ಷಾ ಶಿಬಿರಗಳು ಮತ್ತು ರಾಜ್ಯ ರಾಷ್ಟ್ರೀಯ ಮಟ್ಟದಲ್ಲಿ ಜರಗುವ ಶಿಬಿರಗಳ ಕುರಿತು ಸಂಪೂರ್ಣ ಮಾಹಿತಿ ನೀಡಿದರು.

– ಆಗಸ್ಟ್ 15ರಂದು ಕೊಪ್ಪಳ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 79ನೇ ಸ್ವತಂತ್ರೋತ್ಸವ ದಿನಾಚರಣೆಯ ಪಥ ಸಂಚಲನದಲ್ಲಿ ಭಾಗವಹಿಸಿದ ಸ್ಕೌಟ್–ಗೈಡ್ ತಂಡಗಳಿಗೆ ಮಾನ್ಯ ಶ್ರೀ ಶಿವರಾಜ ತಂಗಡಗಿ, ಜಿಲ್ಲಾ ಉಸ್ತುವಾರಿ ಸಚಿವರು ಪಾರಿತೋಷಕ ಮತ್ತು ಪ್ರಮಾಣ ಪತ್ರವನ್ನು ವಿತರಿಸಿದರು. ಶ್ರೀ ರಾಘವೇಂದ್ರ ಹಿಟ್ನಾಳ್, ಮಾನ್ಯ ಶಾಸಕರು, ಶ್ರೀ ರಾಜಶೇಖರ ಹಿಟ್ನಾಳ, ಮಾನ್ಯ ಸಂಸದರು, ಶ್ರೀಮತಿ ಹೇಮಲತಾ ನಾಯಕ್, ಮಾನ್ಯ ವಿಧಾನ ಪರಿಷತ್ ಸದಸ್ಯರು, ಶ್ರೀ ಸುರೇಶ್ ಇಟ್ನಾಳ, ಮಾನ್ಯ ಜಿಲ್ಲಾಧಿಕಾರಿಗಳು, ಶ್ರೀ ವರ್ಣಿತ ನೇಗಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಶ್ರೀ ರಾಮ ಅರಸಿದ್ದಿ, ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.



– ಆಗಸ್ಟ್ 01 ರಂದು ಗಂಗಾವತಿ ಸ್ಥಳೀಯ ಸಂಸ್ಥೆಯಿಂದ ವರ್ಲ್ಡ್ ಸ್ಕಾರ್ಫ್ ಡೇ ದಿನಾಚರಣೆಯನ್ನು ಆಚರಿಸಲಾಯಿತು.



## ಮಂಗಳೂರು (ದಕ್ಷಿಣ ಕನ್ನಡ)

– ಜುಲೈ 16 ರಂದು ಶ್ರೀ ನಾರಾಯಣಗುರು ವಿದ್ಯಾ ಸಂಸ್ಥೆ, ಮುಲ್ಕಿಯ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಗುರುಜ್ಯೋತಿ ತಂಡವು ಗೈಡ್ ಕ್ಯಾಪ್ಟನ್ ಶ್ರೀಮತಿ ಸಾವಿತ್ರಿ ಅವರ ಮಾರ್ಗದರ್ಶನದಲ್ಲಿ ನೇಜಿ ಕೃಷಿ ಬಗ್ಗೆ ತಿಳಿದುಕೊಳ್ಳುವ ಉದ್ದೇಶದಿಂದ ಶೈಕ್ಷಣಿಕ ಪ್ರವಾಸ ನಡೆಸಿತು. ಕೃಷಿಕ ಶ್ರೀ ತಾರನಾಥ್‌ರವರ ಗದ್ದೆಗೆ ಭೇಟಿ ನೀಡಿ ನೇಜಿ ಬೆಳೆಯ ಅಭ್ಯಾಸ ಮತ್ತು ತಂತ್ರಜ್ಞಾನಗಳ ಬಗ್ಗೆ ಮಾಹಿತಿ ಪಡೆದರು. ಈ ಸಂದರ್ಭದಲ್ಲಿ ಶಾಲೆಯ ಆಡಳಿತಾಧಿಕಾರಿ ಶ್ರೀಮತಿ ಮಂಜುಳಾ ಕೆ.ವಿ., ವಿಜ್ಞಾನ ಪ್ರಾಧ್ಯಾಪಕಿ ಶ್ರೀಮತಿ ಲೋಲಾಕ್ಷಿ ಸಾಲಿಯಾನ್ ಮತ್ತು ಸಮಾಜಶಾಸ್ತ್ರ ಶಿಕ್ಷಕ ಶ್ರೀ ಪೃಥ್ವಿರಾಜ್ ಭಾಗವಹಿಸಿದ್ದರು.

– ಜುಲೈ 24 ರಂದು ಸಾನಿಧ್ಯ ವಿಶೇಷ ಬಿನ್ನ ಸಾಮರ್ಥ್ಯ ವಸತಿ ಶಾಲೆ, ಶಕ್ತಿನಗರ ಇಲ್ಲಿ 2025–26 ಶೈಕ್ಷಣಿಕ ವರ್ಷದ ಸ್ಕೌಟ್ಸ್–ಗೈಡ್ಸ್, ಕಬ್–ಬುಲ್‌ಬುಲ್‌ನ ಉದ್ಘಾಟನಾ ಸಮಾರಂಭವು ನಡೆಯಿತು. ಮುಖ್ಯ ಅತಿಥಿಯಾಗಿ ದ.ಕ. ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್, ಕೆ.ಎಸ್ ಭಾಗವಹಿಸಿದ್ದರು. ಶ್ರೀ ಮಹಾಬಲ ಮಾರ್ಲ, ಅಧ್ಯಕ್ಷರು ಶ್ರೀ ಗಣೇಶ ಸೇವಾ ಟ್ರಸ್ಟ್, ಡಾ॥ ವಸಂತ್ ಕುಮಾರ್ ಶೆಟ್ಟಿ, ಸಾನಿಧ್ಯ ಆಡಳಿತ ಅಧಿಕಾರಿ, ಶ್ರೀ ಗಣೇಶ ಸೇವಾ ಟ್ರಸ್ಟಿನ ನಿರ್ದೇಶಕರಾಗಿರುವ ಶ್ರೀ ಮಹಮ್ಮದ್ ಬಶೀರ್, ಸಲಹೆಗಾರರಾಗಿರುವ ಶ್ರೀ ಎರಿಕ್ ಡಿ. ಸೋಜಾರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸ್ಕೌಟ್ ಶಿಕ್ಷಕಿ ಶ್ರೀಮತಿ ರಾಧಿಕ ಕಾರ್ಯಕ್ರಮ ನಿರೂಪಿಸಿದರು. ಫ್ಲಕ್ ಲೀಡರ್ ಶ್ರೀಮತಿ ಹರ್ಷಿತ ಸ್ವಾಗತಿಸಿದರು. ಸ್ಕೌಟ್ ಶಿಕ್ಷಕಿ ದಿವ್ಯ. ಜೆ ಸೇಮಿತ ಧನ್ಯವಾದ ನೀಡಿದರು. ಗೈಡ್ ಶಿಕ್ಷಕಿ ಪ್ರತಿಜ್ಞ, ಕಬ್ ಶಿಕ್ಷಕಿ ಲೇಜು, ಶಾಲಾ ಸಹಾಯಕ ಆಡಳಿತ ಅಧಿಕಾರಿ ಸುಮ ಡಿಸಿಲ್ವ, ಎಲ್ಲಾ ಶಿಕ್ಷಕ ವೃಂದ, ಶಿಕ್ಷಕೇತರರು, ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



– ಆಗಸ್ಟ್ 01 ರಂದು ನೆಲ್ಯಾಡಿ ಸಂತ ಜಾರ್ಜ್ ಪದವಿಪೂರ್ವ ಕಾಲೇಜಿನಲ್ಲಿ ವಿಶ್ವ ಸ್ಕೌಟ್ ಸ್ಕಾರ್ಫ್ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂತ ಜಾರ್ಜ್ ಕನ್ನಡ ಮಾಧ್ಯಮದ ಮುಖ್ಯ ಗುರುಗಳಾದ ಶ್ರೀ ತೋಮಸ್ ವಹಿಸಿದ್ದರು. ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿಯಾದ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್. ಕಾರ್ಯಕ್ರಮವನ್ನು ಉದ್ಘಾಟಿಸಿದರು. ಅತಿಥಿಗಳಾಗಿ ಉಪ್ಪಿನಂಗಡಿ ಸ್ಥಳೀಯ ಸಂಸ್ಥೆಯ ಕೋಶಾಧಿಕಾರಿ ಶ್ರೀ ಜನಾರ್ಧನ ಟಿ, ಸಂತ ಜಾರ್ಜ್ ವಿದ್ಯಾ ಸಂಸ್ಥೆಯ ಕಾರ್ಯದರ್ಶಿಗಳಾದ ರೆ.ತಾ. ಅನೀಶ್ ಪಾರಶೇರಿಲ್, ಸಂಸ್ಥೆಯ ಸಂಚಾಲಕರಾಗಿರುವ ರೆ.ಥಾ. ನೋಮಿಸ್ ಕುರಿಯಾಕೋಸ್, ಆಂಗ್ಲ ಮಾಧ್ಯಮದ ಮುಖ್ಯ ಗುರುಗಳಾಗಿರುವ ಶ್ರೀ ಹರಿಪ್ರಸಾದ್ ಕೆ., ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಂ.ಕೆ. ಏಲಿಯಾಸ್, ಕನ್ನಡ ಮಾಧ್ಯಮದ ಸ್ಕೌಟ್ ಮಾಸ್ಟರ್ ಶ್ರೀ ವರ್ಗೀಸ್ ಫ್ರಾನ್ಸಿಸ್, ರೇಂಜರ್ ಲೀಡರ್ ಶ್ರೀಮತಿ ಜೆಸಿಂತ ಕೆ.ಜೆ. ಉಪಸ್ಥಿತರಿದ್ದರು. ರೋವರ್ ಲೀಡರ್ ಶ್ರೀ ಮಧು ಎ.ಜೆ. ಸ್ವಾಗತಿಸಿ ಗೈಡ್ ಶಿಕ್ಷಕಿ ಶ್ರೀಮತಿ ಜೆಸಿಂತ ಡಿಸೋಜ ವಂದಿಸಿದರು. ಗೈಡ್ ಶಿಕ್ಷಕಿಯಾದ ಶ್ರೀಮತಿ ಪ್ರಫುಲ್ಲ ನಿರೂಪಿಸಿದರು.

– ಆಗಸ್ಟ್ 01 ರಂದು ನೆಲ್ಯಾಡಿ ಬೆತೆನಿ ವಿದ್ಯಾ ಸಂಸ್ಥೆಯಲ್ಲಿ ಸ್ಕೌಟ್ಸ್–ಗೈಡ್ಸ್ ಮತ್ತು ಬುಲ್‌ಬುಲ್ ಘಟಕದ ವಿದ್ಯಾರ್ಥಿಗಳಿಂದ ವಿಶ್ವ ಸ್ಕಾರ್ಫ್ ದಿನಾಚರಣೆಯನ್ನು ಆಚರಿಸಲಾಯಿತು. ಜಿಲ್ಲಾ ಕಾರ್ಯದರ್ಶಿಯಾದ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್. ಅತಿಥಿಯಾಗಿ ಭಾಗವಹಿಸಿದ್ದರು. ಉಪ ಪ್ರಾಂಸುಪಾಲರಾದ ಜೋಸೆಫ್ ಎಂ.ಜೆ. ಯವರಿಗೆ ಸ್ಕಾರ್ಫ್ ತೊಡೆಸುವುದರ ಮೂಲಕ ಕಾರ್ಯಕ್ರಮದ ಉದ್ಘಾಟನೆ ಮಾಡಿದರು. ಮುಖ್ಯೋಪಾಧ್ಯಾಯರಾದ ಜಾರ್ಜ್ ಕೆ. ತೋಮಸ್, ಸ್ಕೌಟ್–ಗೈಡ್ ಶಿಕ್ಷಕರು ಉಪಸ್ಥಿತರಿದ್ದರು ಅಬ್ದುಲ್ ಸ್ವಾಗತಿಸಿ, ಜೋಸಿ ಧನ್ಯವಾದ ಸಮರ್ಪಿಸಿ, ವಿದ್ವತ್ ಪ್ರಸಾದ್ ಕಾರ್ಯಕ್ರಮ ನಿರೂಪಿಸಿದರು.





– ಉಜಿರೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನಲ್ಲಿ ಆಗಸ್ಟ್ 12 ರಂದು ರೋವರ್ಸ್–ರೇಂಜರ್ಸ್ ಘಟಕದ ಪ್ರಸಕ್ತ ವರ್ಷದ ಚಟುವಟಿಕೆ ಮತ್ತು ನಿಪುಣ್ ಹಾಗೂ ರಾಜ್ಯ ಪುರಸ್ಕಾರ ಪರೀಕ್ಷೆ ಕುರಿತ ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಎ.ಎಲ್.ಟಿ (ಸ್ಕೌ) ಶ್ರೀ ಹರ್ಷಕುಮಾರ್ ಕೆ.ಎನ್. ನೆರವೇರಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ವಿಶ್ವನಾಥ .ಪಿ, ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ರೇಂಜರ್ ಲೀಡರ್ ಡಾ. ಗಾನವಿ .ಡಿ, ಸೀನಿಯರ್ ರೋವರ್ ಪ್ರಥನ್ ಜಿ.ಕೆ., ಸೀನಿಯರ್ ರೇಂಜರ್ ವೀಕ್ಷಿತಾ .ಕೆ ಉಪಸ್ಥಿತರಿದ್ದರು. ರೋವರ್ ಲೀಡರ್ ಶ್ರೀ ಪ್ರಸಾದ್ ಕುಮಾರ್ ಸ್ವಾಗತಿಸಿದರು. ರೇಂಜರ್ ಸಿಂಚನ ಮತ್ತು ಬಳಗದವರು ಪ್ರಾರ್ಥಿಸಿದರು. ರೇಂಜರ್ ಭವಿಷ್ಯ ವಂದಿಸಿದರು. ರೇಂಜರ್ ಭುವನ ಮತ್ತು ವರ್ಷಿಣಿ ಕಾರ್ಯಕ್ರಮ ನಿರೂಪಿಸಿದರು.

## ಚಿಕ್ಕಮಗಳೂರು

– ಮುಖ್ಯ ಕಾರ್ಯನಿರ್ವಹಣ ಅಧಿಕಾರಿ ಜಿಲ್ಲಾ ಪಂಚಾಯತಿ ಶ್ರೀಮತಿ ಕೀರ್ತನ ರವರನ್ನು ಭೇಟಿ ಮಾಡಿ ಸ್ಕಾರ್ಫ್ ದಿನಾಚರಣೆ ಪ್ರಯುಕ್ತ ಸ್ಕಾರ್ಫ್ ನೀಡಿ ಸ್ಕೌಟ್ಸ್ ಮತ್ತು ಗೈಡ್ಸ್ ವಾರ್ಷಿಕ ಕಾರ್ಯಕ್ರಮಗಳ ಯೋಜನಾ ಪುಸ್ತಕವನ್ನು ನೀಡಿ ಚಟುವಟಿಕೆಗಳಿಗೆ ಸಹಾಯ ಕೋರಲಾಯಿತು ಈ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

– ನಗರ ಸಭೆಯ ಅಧ್ಯಕ್ಷರಾದ ಶ್ರೀಮತಿ ಶೀಲಾ ದಿನೇಶ್‌ರವರನ್ನು ಭೇಟಿ ಮಾಡಿ ವಾರ್ಷಿಕ ಕ್ರಿಯಾ ಯೋಜನೆ ಪುಸ್ತಕವನ್ನು ನೀಡಲಾಯಿತು.



– ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀಮತಿ ಮೀನಾ ನಾಗರಾಜ್‌ರವರನ್ನು ಜಿಲ್ಲಾ ಸಂಸ್ಥೆಯ ಹಾಗೂ ರಾಜ್ಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಎ.ಎನ್. ಮಹೇಶ್ ಮತ್ತು ಜಿಲ್ಲಾ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಹಾಜರಿದ್ದು ಸ್ಕೌಟ್ಸ್ ಮತ್ತು ಗೈಡ್ ವಾರ್ಷಿಕ ಕ್ರಿಯಾ ಯೋಜನೆ ಪುಸ್ತಕವನ್ನು ನೀಡಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಚವಳಿಗೆ ಸಹಕಾರವನ್ನು ಕೋರಲಾಯಿತು.



– ಜಿಲ್ಲಾಡಳಿತದ ಉಪವಿಭಾಗ ಅಧಿಕಾರಿರವರನ್ನು ಭೇಟಿ ಮಾಡಿ ವಾರ್ಷಿಕ ಕ್ರಿಯಾ ಯೋಜನೆ ಪುಸ್ತಕವನ್ನು ನೀಡಿ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಗೆ ಸಹಕಾರವನ್ನು ಕೊರಲಾಯಿತು.



– ಸ್ಕಾರ್ಫ್ ಡೇ ಪ್ರಯುಕ್ತ ಮಾಡೆಲ್ ಇಂಗ್ಲಿಷ್ ಶಾಲೆಯಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಶಾಲಾ ಆಡಳಿತ ಮಂಡಳಿ ಹಾಗೂ ಮುಖ್ಯೋಪಾಧ್ಯಾಯರು ಮತ್ತು ಎಲ್ಲಾ ಶಿಕ್ಷಕರುಗಳು ಉಪಸ್ಥಿತರಿದ್ದರು ಜಿಲ್ಲಾ ಸಂಸ್ಥೆಯ ಪರವಾಗಿ ಎಎಸ್‌ಓಸಿ ಶ್ರೀಮತಿ ಪ್ರಿಯಾಂಕ ಮತ್ತು ಜಿಲ್ಲಾ ಸಂಘಟಕರಾದ ಶ್ರೀ ಕಿರಣ್ ಕುಮಾರ್ ಉಪಸ್ಥಿತರಿದ್ದರು.

– ಜಿಲ್ಲಾ ಸಂಸ್ಥೆಯ ವತಿಯಿಂದ ಆಗಸ್ಟ್ 04 ರಿಂದ 05ರ ವರೆಗೆ ಜಿಲ್ಲಾ ಮಟ್ಟದ ರಾಜ್ಯ ಪುರಸ್ಕಾರ ಪೂರ್ವ ತರಬೇತಿ ಶಿಬಿರವನ್ನು ಶ್ರೀಮತಿ ಪ್ರತಿಮಾ ಜಿಲ್ಲಾ ತರಬೇತಿ ಆಯುಕ್ತರು (ಗೈಡ್ಸ್) ಇವರ ನಾಯಕತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಉಪಸಿದ್ಧರಿದ್ದರು.

– ಆಗಸ್ಟ್ 13 ದಂದು ಜಿಲ್ಲೆಗೆ ನೂತನವಾಗಿ ಆಗಮಿಸಿದ್ದ ಶ್ರೀ ತಿಮ್ಮರಾಜು ಉಪನಿರ್ದೇಶಕರು (ಆಡಳಿತ) ರವರನ್ನು ಭೇಟಿ ಮಾಡಿ ವಾರ್ಷಿಕ ಕ್ರಿಯಾ ಯೋಜನೆ ಪುಸ್ತಕವನ್ನು ನೀಡಿ ಜಿಲ್ಲಾ ಸಂಸ್ಥೆಯ ಪರವಾಗಿ ಸ್ವಾಗತವನ್ನು ಕೋರಲಾಯಿತು.

– ಆಗಸ್ಟ್ 15 ರಂದು ನಡೆದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಜಿಲ್ಲೆಯ ಮೂರು ಸ್ಕೌಟ್ಸ್ ಮತ್ತು ಮೂರು ಗೈಡ್ಸ್ ಮೂರು ತಂಡ ಭಾಗವಹಿಸಿ ಉತ್ತಮ ಕವಾಯಿತು ಪ್ರದರ್ಶನ ನೀಡಿದ ಮಾಡೆಲ್ ಇಂಗ್ಲಿಷ್ ಶಾಲೆ ಬಹುಮಾನ ಪಡೆಯಿತು ಹಾಗೂ ಜಿಲ್ಲಾ ಸಂಸ್ಥೆಯಲ್ಲಿ ನಡೆದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಶ್ರೀಮತಿ ರಾಧಾರವರು ಕಾರ್ಯಕ್ರಮವನ್ನು ಧ್ವಜಾರೋಹಣ ಮಾಡಿ ಮಕ್ಕಳುಗಳಿಗೆ ಸ್ವಾತಂತ್ರ್ಯೋತ್ಸವದ ಮಾಹಿತಿ ನೀಡಿದರು.

– ಶೃಂಗೇರಿ ತಾಲೂಕಿನ ಕಾರ್ಯನಿರ್ವಹಣ ಅಧಿಕಾರಿಗಳನ್ನು ಭೇಟಿ ಮಾಡಿ ಸ್ಕೌಟ್ಸ್ ಬಗ್ಗೆ ಗೈಡ್ಸ್ ಚಳುವಳಿಯ ಮಾಹಿತಿಯನ್ನು ನೀಡಿ ಅನುದಾನಗಳನ್ನು ಬಿಡುಗಡೆ ಮಾಡುವಂತೆ ಮನವಿ ಮಾಡಲಾಯಿತು. ಈ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಸುಬ್ರಹ್ಮಣ್ಯರವರು ಉಪಸ್ಥಿತರಿದ್ದರು.

## ಮಧುಗಿರಿ

–ಜುಲೈ 10ರಂದು ರಾಜ್ಯ ಸಂಸ್ಥೆಯಿಂದ ನೀಡಿರುವ ವಾರ್ಷಿಕ ಕಾರ್ಯಕ್ರಮಗಳ ಯೋಜನಾ ಪುಸ್ತಕವನ್ನು ಮದುಗಿರಿ ಉಪ ವಿಭಾಗಾಧಿಕಾರಿಯವರಾದ ಮಾನ್ಯ ಗೋಟುರು ಶಿವಪ್ಪ ಏಇಖ ಹಾಗೂ ಜಿಲ್ಲಾ ಅಧ್ಯಕ್ಷರು ಮತ್ತು ಗ್ರೇಡ್ 02 ತಹಸಿಲ್ದಾರ್ ಮಾನ್ಯ ಶ್ರೀನಿವಾಸ್ ಇವರಿಗೆ ಶ್ರೀಮತಿ ಶಿರಿನ್ ತಾಜ್ ತಹಸಿಲ್ದಾರ್ ಮಧುಗಿರಿ ಮಾನ್ಯ ಶ್ರೀಗಂಗಾಧರ್, ಉಪ ನಿರ್ದೇಶಕರು ಪ್ರಭಾರಿ ಹಾಗೂ ಉಪ ನಿರ್ದೇಶಕರು ಅಭಿವೃದ್ಧಿ ಶ್ರೀ ಲಕ್ಷ್ಮಣ್ ಕಾರ್ಯ ನಿರ್ವಾಹಕ ಅಧಿಕಾರಿ ತಾಲೂಕ ಪಂಚಾಯತಿ ಶ್ರೀ ಸುರೇಶ್ ಎಸ್., ಮುಖ್ಯ ಅಧಿಕಾರಿ ಪುರಸಭೆ, ಶ್ರೀ ಸುರೇಶ್, ವಲಯ ಅರಣ್ಯಾಧಿಕಾರಿ, ಶ್ರೀ ನರಸಿಂಹಮೂರ್ತಿ ಡಿವೈಪಿಸಿ, ಶ್ರೀ ಹನುಮಂತರಾಯಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀ ಶೆಟ್ಟಿಮನಿ, ಜಿಲ್ಲಾ ದೈಹಿಕ ಶಿಕ್ಷಣ ಪರೀವಿಕ್ಷಕರು ಶ್ರೀ ದೊಡ್ಡ ಎರೆಗಾಮಯ್ಯ,








ತಾಲೂಕು ದೈಹಿಕ ಶಿಕ್ಷಣ ಪರೀವಿಕ್ಷಕರು ಶ್ರೀ ಚಿತ್ತಯ್ಯ ಡಯಟ್, ಉಪನ್ಯಾಸಕರು ಮತ್ತು ತಾಲೂಕು ಆರೋಗ್ಯ ಅಧಿಕಾರಿಗಳು ಆಯುಷ್ ಇಲಾಖೆಯ ಡಾಕ್ಟರ್ ನವೀನ್ ಕುಮಾರ್ ಹಾಗೂ ಇತರೆ ಅಧಿಕಾರಿ ವರ್ಗದವರಿಗೆ ವಾರ್ಷಿಕ ಕಾರ್ಯಕ್ರಮ ಪುಸ್ತಕ ನೀಡಿ ಸ್ಕೌಟ್ ಗೈಡ್ ಕಬ್ಬು ಬುಲ್ ಬುಲ್ ರೋವರ್ ರೇಂಜರ್ ಮತ್ತು ವಯಸ್ಕ ನಾಯಕರುಗಳ ಕಾರ್ಯ ಚಟುವಟಿಕೆಗಳ ವಿಷಯವನ್ನು ದಳಮಟ್ಟದಿಂದ ರಾಷ್ಟ್ರಮಟ್ಟದ ವರೆಗಿನ ವಿಷಯವನ್ನು ತಿಳಿಸಿ ಪುಸ್ತಕವನ್ನು ನೀಡಲಾಯಿತು.

– ಜುಲೈ 13 ರಂದು ಕೊರಟಗೆರೆ ಸ್ಥಳೀಯ ಸಂಸ್ಥೆ ವತಿಯಿಂದಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ ದೇವಸ್ಥಾನ ಆವರಣದಲ್ಲಿ ಪರಿಸರ ಸಂರಕ್ಷಣೆಯ ಕುರಿತಾಗಿ ನೀರು ಗಾಳಿ ಭೂಮಿ ಹಾಗೂ ಪ್ಲಾಸ್ಟಿಕ್ ನಿರ್ಮೂಲನೆಯ ಕುರಿತಾಗಿ ಸ್ಕೌಟ್–ಗೈಡ್ ವಿದ್ಯಾರ್ಥಿಗಳಿಗೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಪ್ರಸನ್ ಕುಮಾರ್ ಶ್ರೀಮತಿ ಲಲಿತಮ್ಮ ಗೈಡ್ ಕ್ಯಾಪ್ಟನ್ ಸ್ಕೌಟ್ ಗೈಡ್ಸ್ ಶಿಕ್ಷಕರು 36 ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾಹಿತಿಯನ್ನು ಪಡೆದು ಸ್ವಚ್ಛತಾ ಕಾರ್ಯಕ್ರಮವನ್ನು ನೆರವೇರಿಸಿದರು.



– ಜುಲೈ 14 ರಂದು ತುಮಕೂರು ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿ ನರಸಿಂಹಮೂರ್ತಿ ಇವರಿಗೆ ವಾರ್ಷಿಕ ಕಾರ್ಯಕ್ರಮ ಪುಸ್ತಕವನ್ನು ನೀಡಿ ತಾಲೂಕು ಜಿಲ್ಲಾ ಮತ್ತು ಗ್ರಾಮ ಪಂಚಾಯತ್ ಅನುದಾನ ನೀಡಲಾಯಿತು. ಇದರ ಬಗ್ಗೆ ಚರ್ಚಿಸಿ ಅವರಲ್ಲಿ ಅನುದಾನದ ಮನವಿ ಪತ್ರವನ್ನು ನೀಡಿ ಬರಲಾಯಿತು ನಂತರ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಮಾನ್ಯ ಬಾಲ ಗುರುಮೂರ್ತಿ ಇವರನ್ನು ಭೇಟಿ ಮಾಡಿ ಮುಂದುವರಿದ ತರಬೇತಿ ಮೂಲ ತರಬೇತಿಗೆ ಉಪನ್ಯಾಸಕರುಗಳನ್ನು ನಿಯೋಜಿಸುವಂತೆ ಮನವಿ ಮಾಡಿ ಆದೇಶ ಮಾಡಿಸಿ ಶಿಬಿರಕ್ಕೆ ನಿಯೋಜನೆ ಮಾಡಲು ವಿನಂತಿಸಲಾಯಿತು.



– ಜುಲೈ 17 ರಂದು ಮಧುಗಿರಿ ಜಿಲ್ಲಾ ಕಛೇರಿ ಆವರಣದಲ್ಲಿ ತೃತೀಯ ಸೋಪಾನ್ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿದ್ದು ಈ ಶಿಬಿರ ನಾಯಕರಾಗಿ ಶ್ರೀ ಕರಿಸಿದ್ದಪ್ಪ ಟಿ. ಸಹಾಯಕ ರಾಜ್ಯ ಸಂಘಟನಾ ಆಯುಕ್ತರು ಶ್ರೀಮತಿ ಸಾಯಿರಾಬಾದ್, ಡಿಟಿಸಿ (ಗೈಡ್) ಭಾಗವಹಿಸಿದ್ದರು.

– ಆಗಸ್ಟ್ 01 ರಂದು ಸನ್‌ರೈಸ್ ಡೇ ಸ್ಕಾರ್ಫ್ ಡೇ ಪ್ರಯುಕ್ತ ಜಿಲ್ಲಾ ಶಿಕ್ಷಣ ಇಲಾಖೆ ಕಛೇರಿ ಜಿಲ್ಲಾ ದೈಹಿಕ ಶಿಕ್ಷಣ ಇಲಾಖೆ ತಾಲೂಕು ದೈಹಿಕ ಶಿಕ್ಷಣ ಇಲಾಖೆಗಳ ಪದಾಧಿಕಾರಿಗಳಿಗೆ ಕಂಠವಸ್ತ್ರಧಾರಣೆಯನ್ನು ಮಾಡಿ ಪ್ರತಿಜ್ಞಾವಿಧಿಯನ್ನು ಬೋಧಿಸಲಾಯಿತು. ಇದೇ ದಿನ ಜಿಲ್ಲೆಯ ವಿವಿಧ ಶಾಲಾ ಕಾಲೇಜುಗಳಲ್ಲೂ ಸ್ಕಾರ್ಫ್ ಡೇಯನ್ನು ಆಚರಿಸಲಾಯಿತು.

– 79ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಚಿರಾಗ್ ಪಬ್ಲಿಕ್ ಶಾಲೆ ಗೈಡ್ ವಿದ್ಯಾರ್ಥಿಗಳು ಪಥ ಸಂಚಲನದಲ್ಲಿ ಪ್ರಥಮ ಸ್ಥಾನ ಪಾರಿತೋಷಕವನ್ನು ಶಾಸಕರಾದ



ಮಾನ್ಯ ಶ್ರೀ ಕೆ.ಎನ್. ರಾಜಣ್ಣನವರಿಂದ ಪಡೆದರು. ಇದೇ ರೀತಿ ಕೊರಟಗೆರೆ ದ್ವಿತೀಯ ಸ್ಥಾನ, ಸಿರಾ ತಾಲೂಕಿನಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ.

– ಆಗಸ್ಟ್ 16ರಂದು ಮಧುಗಿರಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಮಧುಗಿರಿ ನಗರ ಕಚೇರಿಯಿಂದ ಹರಿಹರಪುರ ದೇವಸ್ಥಾನದ ಆವರಣದವರೆಗೆ ಸೈಕಲ ಹೈಕ್ ಮಾಡಿದರು.

– ಆಗಸ್ಟ್ 17 ರಂದು ಚಿರಾಗ್ ಪಬ್ಲಿಕ್ ಶಾಲೆಯಲ್ಲಿ ಕುಕ್ ಬ್ಯಾಡ್ಜ್ ಅನ್ನು ಸ್ಕೌಟ್ ಗೈಡ್‌ಗಳಿಂದ ಮಾಡಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಸ್ಕೌಟ್ ಗೈಡ್ ಶಿಕ್ಷಕರು ಇತರೆ ಶಿಕ್ಷಕರು ಉಪಸ್ಥಿತರಿದ್ದು 36 ಸ್ಕೌಟ್ ಗೈಡ್‌ಗಳು ಪಾಲ್ಗೊಂಡಿದ್ದರು.

– ಆಗಸ್ಟ್ 19 ರಂದು ಮಧುಗಿರಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಕೃಷ್ಣಾಷ್ಟಮಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಾನ್ಯ ಹನುಮಂತರಾಯಪ್ಪ ಕ್ಷೇತ್ರಾಧಿಕಾರಿಗಳು ಬಿ.ಆರ್.ಸಿ., ಇ.ಸಿ.ಓ., ಸಿ.ಆರ್.ಪಿ., ದೈಹಿಕ ಶಿಕ್ಷಣ ಪರಿವೀಕ್ಷಕರು ಹಾಗೂ ಎ.ಎಸ್.ಸಿ. ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

– ಆಗಸ್ಟ್ 19 ರಂದು ಎಂ.ಜಿ.ಎಂ ಶಾಲೆಯಲ್ಲಿ ಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸಲಾಯಿತು ಇಲ್ಲಿ ಸುಮಾರು 180 ವಿದ್ಯಾರ್ಥಿಗಳು ಕೃಷ್ಣ–ರುಕ್ಮಿಣಿ, ರಾಧೆ ಪಾತ್ರಗಳಲ್ಲಿ ಆಗಮಿಸಿ ಪ್ರದರ್ಶನ ನೀಡಿದರು.

– ಆಗಸ್ಟ್ 20 ರಂದು ಸದ್ಭಾವನ ದಿನಾಚರಣೆಯನ್ನು ಎಂಜಿಎಂ ಶಾಲೆಯಲ್ಲಿ ಆಚರಿಸಲಾಯಿತು. 480 ವಿದ್ಯಾರ್ಥಿಗಳು 40 ಸ್ಕೌಟ್–ಗೈಡ್‌ಗಳು ಮುಖ್ಯ ಶಿಕ್ಷಕರು ಇತರ ಶಿಕ್ಷಕರು ಭಾಗವಹಿಸಿದ್ದರು.

## ಮೈಸೂರು

– ಮೈಸೂರು ಜಿಲ್ಲಾ ಮಟ್ಟದ ಸ್ಕೌಟ್ಸ್ ಮಾಸ್ಟರ್, ಕಬ್ ಮಾಸ್ಟರ್, ಫ್ಲಾಕ್ ಲೀಡರ್ ಮತ್ತು ಗೈಡ್ ಕ್ಯಾಪ್ಟನ್‌ರವರ ಮೂಲ ತರಬೇತಿ ಶಿಬಿರ ಶ್ರೀ ಕಾವೇರಿ ಬೋರೇದೇವರ ದೇವಸ್ಥಾನ, ಮಂಡ್ಯ ಕೊಪ್ಪಲು, ಶ್ರೀರಂಗಪಟ್ಟಣ ತಾಲೂಕು, ಮಂಡ್ಯ ಜಿಲ್ಲೆ ಇಲ್ಲಿ ಜುಲೈ 15 ರಿಂದ 21ರ ವರೆಗೆ ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ 71 ಮಂದಿ ಶಿಬಿರಾರ್ಥಿಗಳು ಭಾಗವಹಿಸಿದ್ದರು. ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ಗುರುಮೂರ್ತಿ ಗೈಡ್ಸ್ ವಿಭಾಗಕ್ಕೆ ನಾಯಕಿಯಾಗಿ ಶ್ರೀಮತಿ ರತ್ನ, ಕಬ್ ವಿಭಾಗದ ನಾಯಕರಾಗಿ ಶ್ರೀ ಹುಸೇನಿ, ಬುಲ್‌ಬುಲ್ ವಿಭಾಗದ ಮುಖ್ಯಸ್ಥರಾಗಿ ಶ್ರೀಮತಿ ಶಶಿಕಲಾರವರು ಕಾರ್ಯನಿರ್ವಹಿದರು.





– ಜುಲೈ 17 ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಮೂಲ ತರಬೇತಿ ಶಿಬಿರಕ್ಕೆ ಭೇಟಿ ನೀಡಿ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಶ್ರೀಮತಿ ವಿಜಯಲಕ್ಷ್ಮಿ, ಶ್ರೀ ಬಂಡಿಸಿದ್ದೇಗೌಡ, ಮಾಜಿ ಶಾಸಕರು, ಶ್ರೀರಂಗಪಟ್ಟಣರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ರಾಜ್ಯ ಸಹಾಯಕ ಆಯುಕ್ತರಾದ ಶ್ರೀ ಬಿ.ಕೆ. ಬಸವರಾಜ್, ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಪಿ. ವಿಶ್ವನಾಥ, ಜಿಲ್ಲಾ ಗೈಡ್ ಆಯುಕ್ತೆ ಶ್ರೀಮತಿ ಪುಷ್ಪವಲ್ಲಿ, ಕೋಶಾಧಿಕಾರಿ ಡಾ. ಕೆ.ಬಿ. ಗುರುಮೂರ್ತಿ, ಕಾರ್ಯದರ್ಶಿ ಶ್ರೀ ಅಬ್ದುಲ್ ಜಮೀಲ್ ಹಾಗೂ ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು, ಶಿಬಿರದ ನಾಯಕರು ಮತ್ತು ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

## ಶಿವಮೊಗ್ಗ

– 'ವಿದ್ಯಾರ್ಥಿಗಳು ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸ್ಕೌಟ್–ಗೈಡ್ಸ್ ತರಬೇತಿಗಳು ಸಹಕಾರಿಯಾಗುತ್ತವೆ' ಎಂದು ರಾಜ್ಯ ಮುಖ್ಯ ಆಯುಕ್ತ ರು ಹಾಗು ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಹೇಳಿದರು. ಭಾರತ್ ಸ್ಕೌಟ್–ಗೈಡ್ ವತಿಯಿಂದ ಸ್ಕೌಟ್ ಭವನದಲ್ಲಿ ಆಗಸ್ಟ್ 10ರಂದು ಆಯೋಜಿಸಿದ್ದ ಜಿಲ್ಲಾ ಮಟ್ಟದ ನಿಪುಣ್ ಪರೀಕ್ಷಾ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು. ಜಿಲ್ಲಾ ಗೈಡ್ಸ್ ಪ್ರಧಾನ ಆಯುಕ್ತೆ ಶ್ರೀಮತಿ ಶಕುಂತಲಾ ಚಂದ್ರಶೇಖರ್ ಮಾತನಾಡಿ, 'ಅಧಿಕಾರ ವಹಿಸಿಕೊಂಡ ನಂತರ ಹಲವಾರು ಪ್ರಮುಖ ಕಾರ್ಯಕ್ರಮಗಳನ್ನು ರಾಜ್ಯ ಸಂಸ್ಥೆ ಸಹಕಾರದಿಂದ ಯಶಸ್ವಿಯಾಗಿ ನೆರವೇರಿಸಿಕೊಂಡು ಬಂದಿದ್ದೇವೆ. ಸ್ಕೌಟ್–ಗೈಡ್ ಚಳವಳಿಯಲ್ಲಿ ತೊಡಗಿಸಿಕೊಂಡು ಸದೃಢ ಸಮಾಜವನ್ನು ನಿರ್ಮಾಣ ಮಾಡುವಲ್ಲಿ ಯುವಜನರ ಪಾತ್ರ ಪ್ರಮುಖವಾಗಿದೆ' ಎಂದರು. ರಾಜ್ಯ ಸಂಘಟನಾ ಆಯುಕ್ತೆ ಶ್ರೀಮತಿ ಮಂಜುಳಾ, ಕೇಂದ್ರ ಸ್ಥಾನಿಕ ಆಯುಕ್ತೆ ಶ್ರೀ ಜಿ. ವಿಜಯಕುಮಾರ್, ಮುಂತಾದವರು ಉಪಸ್ಥಿತರಿದ್ದರು.



– 'ಮಕ್ಕಳ ಸರ್ವಾಂಗೀಣ ಬೆಳವಣಿಗೆಯಲ್ಲಿ ಸ್ಕೌಟ್ ಶಿಕ್ಷಣ ಪ್ರಮುಖ ಪಾತ್ರವಹಿಸಿದೆ. ಅದರಲ್ಲೂ ರಾಜ್ಯ ಪುರಸ್ಕಾರ ತುಂಬಾ ಮಹತ್ವದ್ದಾಗಿದೆ' ಎಂದು ರೋಟರಿ ಜಿಲ್ಲೆ 3182ರ ನಿಯೋಜಿತ ಜಿಲ್ಲಾ ಗವರ್ನರ್ ಶ್ರೀ ವಸಂತ್ ಹೋಬಳಿದಾರ್ ನುಡಿದರು. ಇವರು ನಗರದ ಸ್ಕೌಟ್ಸ್ ಭವನದ ಆವರಣದಲ್ಲಿ ಜಿಲ್ಲಾ ಸಂಸ್ಥೆಯಿಂದ ಹಮ್ಮಿಕೊಳ್ಳಲಾದ 2024–25ನೇ ಸಾಲಿನ ಸ್ಕೌಟ್ಸ್–ಗೈಡ್ಸ್ ರೋವರ್ಸ್–ರೇಂಜರ್ಸ್ ರಾಜ್ಯ ಪುರಸ್ಕಾರ ಎರಡು ದಿನದ ಪೂರ್ವ ಸಿದ್ಧತಾ ಪರೀಕ್ಷೆ ಶಿಬಿರ ಉದ್ಘಾಟಿಸಿ ಮಾತನಾಡಿದರು. ಸಮಾರಂಭದಲ್ಲಿ ಅಧ್ಯಕ್ಷತೆಯನ್ನು ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀಮತಿ ಶಕುಂತಲಾ ಚಂದ್ರಶೇಖರ್ ವಹಿಸಿ ಮಾತನಾಡುತ್ತಾ 'ಈ ರಾಜ್ಯ ಪುರಸ್ಕಾರ ವಿದ್ಯಾರ್ಥಿಗಳ ಜೀವನದಲ್ಲಿ ಒಂದು ಪ್ರಮುಖ ಘಟ್ಟ ಇದರಲ್ಲಿ ತರಬೇತಿ ಪಡೆದು ರಾಷ್ಟ್ರಪತಿ ಅವಾರ್ಡ್ ಅದಕ್ಕೂ ಸಹ ಭಾಗವಹಿಸಬಹುದಾಗಿದೆ. ಆದ್ದರಿಂದ ಈ ಶಿಕ್ಷಣದಿಂದ ಅವರಿಗೆ ಮುಂದಿನ ಜೀವನದಲ್ಲಿ ತುಂಬಾ ಉಪಯೋಗವಾಗುತ್ತದೆ' ಎಂದು ನುಡಿದರು. ಇದೇ ಸಂದರ್ಭದಲ್ಲಿ ಕೇಂದ್ರ ಸ್ಥಾನಿಕ ಆಯುಕ್ತರಾದ ಶ್ರೀ ಜಿ. ವಿಜಯಕುಮಾರ್ ಅವರು ಮಾತನಾಡುತ್ತ 'ಸ್ಕೌಟ್ಸ್–ಗೈಡ್ಸ್ ಚಳುವಳಿ ಮನೆಮನೆಗಳಿಗೆ ತಲುಪಬೇಕು. ಈ ನಿಟ್ಟಿನಲ್ಲಿ ಪ್ರತಿಯೊಂದು ಶಾಲಾ ಕಾಲೇಜುಗಳಲ್ಲಿ ಘಟಕಗಳು ಸ್ಥಾಪನೆಯಾಗಬೇಕು' ಎಂದು ಕರೆ ನೀಡಿದರು. ಸಮಾರಂಭದಲ್ಲಿ ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ 250ಕ್ಕೂ ಹೆಚ್ಚು ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು ಪಾಲ್ಗೊಂಡಿದ್ದರು. ವೇದಿಕೆಯಲ್ಲಿ ಸ್ಕೌಟ್ಸ್ ಆಯುಕ್ತ ಶ್ರೀ ಅನಂದ .ಎಸ್, ಖಜಾಂಚಿ, ಶ್ರೀಮತಿ ಚೂಡಾಮಣಿ ಈ. ಪವಾರ್, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ರಾಜೇಶ್ ಅವಲಕ್ಕಿ ಇತರರು ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

– 'ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಹೆಚ್ಚಿಸಲು ಹಾಗೂ ಕೌಶಲ್ಯ ವೃದ್ಧಿಸುವ ದೃಷ್ಟಿಯಿಂದ ನಿಪುಣ್ ಪರೀಕ್ಷಾ ಶಿಬಿರ ಸಹಕಾರಿಯಾಗಲಿದೆ" ಎಂದು ಜಿಲ್ಲಾ ಪ್ರಧಾನ ಆಯುಕ್ತೆ ಶ್ರೀಮತಿ ಶಕುಂತಲಾ ಚಂದ್ರಶೇಖರ್ ಹೇಳಿದರು. ಬಿ.ಎಚ್. ರಸ್ತೆಯಲ್ಲಿರುವ ಭಾರತ್ ಸ್ಕೌಟ್ಸ್–ಗೈಡ್ಸ್‌ನ ಸ್ಕೌಟ್ ಭವನದ ಬೇಡನ್ ಪೋವೆಲ್ ಹಾಲ್‌ನಲ್ಲಿ ಪ್ರಥಮ ದರ್ಜೆ ಕಾಲೇಜುಗಳ ರೋವರ್ಸ್, ರೇಂಜರ್ಸ್ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಜಿಲ್ಲಾ ಮಟ್ಟದ ನಿಪುಣ್ ಟೆಸ್ಟಿಂಗ್ ಕ್ಯಾಂಪ್ ಉದ್ಘಾಟಿಸಿ ಮಾತನಾಡಿದರು. ರೋವರ್ ವಿಭಾಗದ ಜಿಲ್ಲಾ ಆಯುಕ್ತ ಶ್ರೀ ಕೆ. ರವಿ ಮಾತನಾಡಿ, 'ಈಗಾಗಲೇ ಜಿಲ್ಲೆಯ ವಿವಿಧ ಕಾಲೇಜುಗಳಿಂದ 300ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಶಿಬರದಲ್ಲಿ ತೊಡಗಿಕೊಂಡಿರುವುದು ತುಂಬಾ ಹೆಮ್ಮೆ ವಿಷಯವಾಗಿದೆ' ಎಂದರು. ಕೇಂದ್ರ ಸ್ಥಾನಿಕ ಆಯುಕ್ತ ಶ್ರೀ ಜಿ. ವಿಜಯ ಕುಮಾರ್ ಮಾತನಾಡಿ, 'ಸ್ಕೌಟ್–ಗೈಡ್ ಚಳುವಳಿ ಮನೆ ಮನೆಗೆ ತಲುಪಬೇಕು' ಎಂದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಕೆ.ವಿ. ಚಂದ್ರಶೇಖರಯ್ಯ ತರಬೇತಿ ಆಯುಕ್ತರಾದ ಶ್ರೀ ಎಚ್. ಶಿವಶಂಕ್ರಪ್ಪ, ಶ್ರೀ ಕೃಷ್ಣಸ್ವಾಮಿ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.



– 'ಮಾನವೀಯ ಮೌಲ್ಯಗಳನ್ನು ಹೊತ್ತು, ಅಪಘಾತ ನೈಸರ್ಗಿಕ ವಿಕೋಪ, ಯುದ್ಧ ಮುಂತಾದ ಅವಘಡಗಳು ಸಂಭವಿಸಿದಾಗ ಅತ್ಯಂತ ಪ್ರಾಮಾಣಿಕ ಮತ್ತು ಉತ್ಸಾಹಿ ಸೇವಾ ಕಾರ್ಯ ಮಾಡುವ ಸ್ಕೌಟ್ಸ್–ಗೈಡ್ಸ್ ಸಂಸ್ಥೆಯ ಕಾರ್ಯಚಟುವಟಿಕೆಗಳು ಇಂದಿಗೂ ಸಹ ಪ್ರಸ್ತುತ ಹಾಗೂ ಮಾದರಿಯಾಗಿದೆ' ಎಂದು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಶಕುಂತಲಾ ಚಂದ್ರಶೇಖರ್ ಅವರು ನುಡಿದರು. ಅವರು ಬೆಳಿಗ್ಗೆ ನಗರದ ಬಿ.ಹೆಚ್. ರಸ್ತೆಯಲ್ಲಿ ಇರುವ ಸ್ಕೌಟ್ಸ್ ಭವನದಲ್ಲಿ ವಿಶ್ವ ಸ್ಕೌಟ್ಸ್ ಶಿರೋ ವಸ್ತ್ರ ದಿನ ಮತ್ತು ಸ್ಕೌಟ್ಸ್ ಸನ್‌ರೈಸ್ ದಿನದ ಅಂಗವಾಗಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಚಂದ್ರಶೇಖರಯ್ಯನವರು ಸ್ಕೌಟ್ಸ್–ಗೈಡ್ಸ್‌ನ ಪ್ರತಿಜ್ಞಾವಿಧಿಯನ್ನು ಬೋಧಿಸಿದರು. ಕೇಂದ್ರ ಸ್ಥಾನಿಕ ಆಯುಕ್ತ ಶ್ರೀ ಜಿ. ವಿಜಯಕುಮಾರ್ ಅವರು ಮಾತನಾಡುತ್ತಾ "ಸ್ಕೌಟಿಗೆ ಯುವ ಜನರನ್ನು ಪರಿಚಯಿಸಲು ಈ ದಿನವೂ ಉತ್ತಮ ಅವಕಾಶವಾಗಿದೆ." ಕಾರ್ಯಕ್ರಮದಲ್ಲಿ ಶಾಲಾ ಸ್ಕೌಟ್–ಗೈಡ್‌ಗಳು, ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

–'ಸೌಹಾರ್ದತೆ, ಶಾಂತಿ, ರಾಷ್ಟ್ರೀಯ ಏಕತೆಗಳ ಮಹತ್ವವನ್ನು ಸಾರುವ ಈ ಸದ್ಭಾವನ ದಿನಾಚರಣೆ ಈಗಿನ ದಿನಕ್ಕೆ ಅತಿ ಅಗತ್ಯವಾಗಿದೆ' ಎಂದು ಭಾರತ್ ಸ್ಕೌಟ್–ಗೈಡ್‌ನ ಸ್ಕೌಟ್ ಆಯುಕ್ತರಾದ ಶ್ರೀ ಎಸ್.ಜಿ. ಆನಂದ್ ಅಭಿಮತ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ಕೇಂದ್ರ ಸ್ಥಾನಿಕ ಆಯುಕ್ತರಾದ ಶ್ರೀ ಜಿ. ವಿಜಯಕುಮಾರ್ ಅವರು ಮಾತನಾಡುತ್ತಾ 'ಈ ದಿನ ರಾಜೀವ್ ಗಾಂಧಿ ಫೌಂಡೇಶನ್ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಉನ್ನತ ಸಾಧನೆ ಮಾಡಿದವರಿಗೆ ರಾಜೀವ್ ಗಾಂಧಿ ರಾಷ್ಟ್ರೀಯ ಪ್ರಶಸ್ತಿ ನೀಡಿ ಸಹ ಗೌರವಿಸಲಾಗುತ್ತದೆ' ಎಂದು ನುಡಿದರು. ಇದೇ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ರಾಜೇಶ್ ಅವರು ಮಾತನಾಡುತ್ತಾ 'ಜಾತಿ ಧರ್ಮ ಭಾಷೆ ಸಾಧೇಶಿಕತೆಗಳ ಹೆಸರಿನಲ್ಲಿ ಒಡೆದು ಹೋಗುತ್ತಿರುವ ನಮ್ಮ ದೇಶಕ್ಕೆ ಏಕತೆಯ ತಂದು ಕೊಡುವುದೇ ಈ ಸೌಹಾರ್ದತೆ ಮತ್ತು ಸದ್ಭಾವನೆಗಳು' ಎಂದು ನುಡಿದರು ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಕೆ.ವಿ. ಚಂದ್ರಶೇಖರಯ್ಯ ನವರು ಜೀವನ ದಿನಾಚರಣೆಯ ಮಹತ್ವವನ್ನು ತಿಳಿಸಿದರು.



## ಶಿರಸಿ (ಉ.ಕ.)

– ಶ್ರೀ ಪಿ.ಜಿ.ಆರ್. ಸಿಂಧ್ಯಾ, ಮಾಜಿ ಸಚಿವರು ಹಾಗೂ ರಾಜ್ಯ ಮುಖ್ಯ ಆಯುಕ್ತರು ಜುಲೈ 15 ರಂದು ಮಂಗಳವಾರ ಶಿರಸಿಗೆ ಭೇಟಿ ನೀಡಿ ಶ್ರೀ ಮಾರಿಕಾಂಬಾ ದೇವಿ ಆರ್ಶೀವಾದ ಪಡೆದು ಶಿರಸಿ ಶೈಕ್ಷಣಿಕ ಜಿಲ್ಲಾ ಸಂಸ್ಥೆಯಿಂದ ಆಯೋಜಿಸಿದ್ದ. ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸಿ ಜಿಲ್ಲೆಯಲ್ಲಿ ಸ್ಕೌಟಿಂಗ್ ಗೈಡಿಂಗ್ ಅಭಿವೃದ್ಧಿಪಡಿಸುವ ಬಗ್ಗೆ ಹಾಗೂ ವಿವಿಧ ವಿಚಾರಗಳ ಬಗ್ಗೆ ಚರ್ಚಿಸಿ 2025–26ನೇ ಸಾಲಿನ ವಾರ್ಷಿಕ ಕಾರ್ಯಕ್ರಮಗಳ ಪುಸ್ತಕವನ್ನು ಬಿಡುಗಡೆ ಮಾಡಿದರು.



– ಜುಲೈ 26 ರಂದು ಶಿರಸಿ ಜಿಲ್ಲಾ ಸಂಸ್ಥೆಯಿಂದ ಕಾರ್ಗಿಲ್ ವಿಜಯ ದಿವಸದ ಅಂಗವಾಗಿ ಶಿರಸಿ ಮರಾಠಿ ಕೊಪ್ಪದಲ್ಲಿರುವ ಅಮರ್ ಜವಾನ್ ಸ್ಮಾರಕ ಉದ್ಯಾನವನದಲ್ಲಿ ಸ್ಕೌಟ್ಸ್–ಗೈಡ್ಸ್ ಹಾಗೂ ರೋವರ್ಸ್–ರೇಂಜರ್ಸ್‌ಗಳು ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ವೀರ ಯೋಧರಿಗೆ ಪುಷ್ಪನಮನ ಸಲ್ಲಿಸಿದರು. ಶ್ರೀ ವಿನಾಯಕ ಧೀರನ್, ಜಿಲ್ಲಾ ಕಾರ್ಯದರ್ಶಿ ಕಾರ್ಗಿಲ್ ಯುದ್ಧದ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿದರು. ಈ ಸಂದರ್ಭದಲ್ಲಿ ಶ್ರೀ ವಿ.ಎಚ್. ಭಟ್ಕಳ, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಎಮ್.ಎಮ್. ಭಟ್, ಉಪಾಧ್ಯಕ್ಷರು, ಶ್ರೀಮತಿ ಅಂಜನಾ ಹೆಗಡೆ, ಗೈಡ್ಸ್ ಆಯುಕ್ತರು, ಮುಂತಾದವರು ಉಪಸ್ಥಿತರಿದ್ದರು.

## ವಿಜಯಪುರ

– ಆಗಸ್ಟ್ 20 ರಂದು ವಿಜಯಪುರ ನಗರದ ಬಿ.ಎಲ್.ಡಿ ಶಿಕ್ಷಣ ಸಂಸ್ಥೆಯ ಶ್ರೀಮತಿ ಬಂಗಾರಮ್ಮ ಸಜ್ಜನ ಮಹಿಳಾ ಕಾಲೇಜು, ಎಸ್.ಎಸ್. ಪ್ರೌಢ ಶಾಲೆ ಹಾಗೂ ಲೋಯೊಲಾ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ರಾಷ್ಟ್ರೀಯ ಸದ್ಭಾವನಾ ದಿನಾಚರಣೆಯ ಪ್ರಯುಕ್ತ ಪ್ರತಿಜ್ಞಾ ಬೋಧನೆಯನ್ನು ಮಾಡಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಸಂಸ್ಥೆಯ ಜಿಲ್ಲಾ ತರಬೇತಿ ಆಯುಕ್ತರು (ಸ್ಕೌ) ಶ್ರೀ ಎಸ್.ಎಸ್. ಬೊಮ್ಮನಹಳ್ಳಿ ಉಪಸ್ಥಿತರಿದ್ದರು. 100ಕ್ಕೂ ಹೆಚ್ಚು ಸ್ಕೌಟ್, ಗೈಡ್ಸ್ ಹಾಗೂ ರೇಂಜರ್‌ಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



– ಆಗಸ್ಟ್ 15 ರಂದು ಜಿಲ್ಲಾ ಸಂಸ್ಥೆ ವಿಜಯಪುರ ಇಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಧ್ವಜಾರೋಹಣ ಕಾರ್ಯಕ್ರಮ ಜರುಗಿತು. ಜಿಲ್ಲಾ ಸಂಸ್ಥೆಯ ಅಧ್ಯಕ್ಷರಾದ ಡಾ. ಸತೀಶ ಜಿಗಜಿನಿ ಇವರು ಧ್ವಜಾರೋಹಣ ನೆರವೇರಿಸಿದರು. ನ್ಯಾಯವಾದಿಗಳು ಮತ್ತು ಜಿಲ್ಲಾ ಆಯುಕ್ತರು ಗೈಡ್ಸ್ ಶ್ರೀಮತಿ ವಿದ್ಯಾವತಿ ಅಂಕಲಗಿ, ಜಿಲ್ಲಾ ತರಬೇತಿ ಆಯುಕ್ತರು ಶ್ರೀ ಎಸ್.ಎಸ್. ಬೊಮ್ಮನಹಳ್ಳಿ, ಶ್ರೀ ಆರ್.ಆರ್. ಅಲಕುಂಟೆ, ಚೌಡೇಶ್ವರಿ ಸೌಹಾರ್ದ ಪತ್ತಿನ ಸಹಕಾರಿ ಬ್ಯಾಂಕಿನ ಅಧ್ಯಕ್ಷರು ಹಾಗೂ ನಿವೃತ್ತ ಡಿವೈಪಿಸಿ ಶ್ರೀ ಸೋಮಲಿಂಗ ಕುಂಬಾರ, ನ್ಯಾಯವಾದಿಗಳ




ಶ್ರೀ ಎಸ್.ಎಫ್. ಅಂಕಲಗಿ, ಕಛೇರಿ ಆವರಣದಲ್ಲಿರುವ ಅಂಗಡಿಗಳ ಮಾಲೀಕರು ಹಾಗೂ ಬ್ಯಾಂಕಿನ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ವಿಜಯನಗರ

– ಆಗಸ್ಟ್ 15 ರಂದು 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಜಿಲ್ಲೆಯಾದ್ಯಂತ ಆಚರಿಸಲಾಯಿತು. ವಿಜಯನಗರ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾಡಳಿತ ಹಾಗೂ ವಿಜಯನಗರ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳಿಂದ ಸ್ವಾತಂತ್ರ್ಯ ಸೇನಾನಿಗಳಿಗೆ ಗೌರವ ವಂದನೆಯನ್ನು ಸಲ್ಲಿಸಲಾಯಿತು. ನಂತರ ನಡೆದ ಪಥಸಂಚಲನದಲ್ಲಿ ಸ್ಕೌಟ್ಸ್ ತಂಡ ಹಾಗೂ ರೇಂಜರ್ಸ್ ಪಡೆಗಳು ಭಾಗವಹಿಸಿ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಜಮೀರ್ ಅಹಮ್ಮದ್ ಖಾನ್, ಮಾನ್ಯ ಶಾಸಕರಾದ ಶ್ರೀ ಗವಿಯಪ್ಪ, ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀ ದಿವಾಕರ್, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಾದ ಶ್ರೀ ಅರುಣ್ ಸೇರಿದಂತೆ ವಿವಿಧ ಗಣ್ಯರಿಗೆ ಗೌರವ ವಂದನೆ ಸಲ್ಲಿಸಿದರು. ವಿಜಯನಗರ ಜಿಲ್ಲೆಯ ಹಗರಿ ಬೊಮ್ಮನಹಳ್ಳಿ, ಕೂಡ್ಲಿಗಿ, ಹರಪನಹಳ್ಳಿ, ಹೂವಿನ ಹಡಗಲಿ, ಹೊಸಪೇಟೆ ತಾಲ್ಲೂಕಿನಾದ್ಯಂತ ಕಬ್ಸ್–ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು ವಿವಿಧ ಸ್ವಾತಂತ್ರ್ಯ ಸೇನಾನಿಗಳ ವೇಷಭೂಷಣಗಳೊಂದಿಗೆ ನೋಡುಗರ ಕಣ್ಮನ ಸೆಳೆದರು. ದಳನಾಯಕರುಗಳು ಶಾಲಾ ಆವರಣದಲ್ಲಿ ವಿವಿಧ ರಂಗೋಲಿಗಳ ಸ್ಪರ್ಧೆ, ವಿವಿಧ ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸುವ ಮೂಲಕ ಸ್ವಾತಂತ್ರ್ಯ ಮಹಾನ್ ನಾಯಕರುಗಳಿಗೆ ಗೌರವ ಸಮರ್ಪಣೆ ಸಲ್ಲಿಸಿದರು.



– ಸ್ಥಳೀಯ ಜಿಲ್ಲಾ ಸಂಸ್ಥೆಯ ವಿಜಯನಗರ ವತಿಯಿಂದ ರಾಜ್ಯ ಪುರಸ್ಕಾರ ಪೂರ್ವಸಿದ್ಧತಾ ಪರೀಕ್ಷಾ ಶಿಬಿರವನ್ನು ಆಗಸ್ಟ್ 17 ರಂದು ವಿವೇಕಾನಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹೊಸಪೇಟೆ ಇಲ್ಲಿ ನಡೆಸಲಾಯಿತು. ಈ ಶಿಬಿರದಲ್ಲಿ ಸ್ಕೌಟ್ಸ್ ಮತ್ತು ರೋವರ್ಸ್ ವಿಭಾಗದ ನಾಯಕರಾಗಿ ಶ್ರೀ ತಿಪ್ಪೇಸ್ವಾಮಿ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಹೊಸಪೇಟೆ, ಶ್ರೀ ತಿಂದಪ್ಪ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಕೂಡ್ಲಿಗಿ ಇವರುಗಳು ವಹಿಸಿದ್ದರು, ಗೈಡ್ಸ್ ಹಾಗೂ ರೇಂಜರ್ಸ್ ವಿಭಾಗದ ನಾಯಕಿಯಾಗಿ ಶ್ರೀಮತಿ ರೇಣುಕಾ. ಎ, ಜಿಲ್ಲಾ ತರಬೇತಿ ಆಯುಕ್ತರು ಗೈಡ್ಸ್ ಇವರು ವಹಿಸಿದ್ದರು. ಸ್ಕೌಟ್ಸ್ ವಿಭಾಗದ ಸಹನಾಯಕರಾಗಿ ಶ್ರೀ ಮಂಜನಾಥ್, ಶ್ರೀ ಶ್ರೀನಿವಾಸ ಜಿ. ಜೋಶಿ, ಶ್ರೀ ನಾಗಭೂಷಣ, ಶ್ರೀ ರಾಕೇಶ್, ಶ್ರೀ ವೀರಭದ್ರಪ್ಪ, ಶ್ರೀ ಮಂಜುನಾಥ ಬಡ್ಡಿ, ಶ್ರೀ



ಬಸವರಾಜ್, ಶ್ರೀ ರಾಜಶೇಖರ್, ಶ್ರೀ ಪಾಟೀಲ್ ಜಿ.ಬಿ.ಸಿ. ಗೈಡ್ಸ್–ರೇಂಜರ್ಸ್ ವಿಭಾಗದ ಸಹನಾಯಕಿಯರಾಗಿ ಶ್ರೀಮತಿ ಶರೀನ್, ಶ್ರೀಮತಿ ಮಂಗಳಗೌರಿ. ಶ್ರೀಮತಿ ಪುಷ್ಪ, ಶ್ರೀಮತಿ ನಂದಿನಿ, ಶ್ರೀಮತಿ ಅಕ್ಷತಾ ಇವರುಗಳು ಕಾರ್ಯನಿರ್ವಹಿಸಿ ಮಕ್ಕಳಿಗೆ ಶಿಬಿರದಲ್ಲಿ ಪ್ರಾರ್ಥನಾ ಗೀತೆ, ಧ್ವಜಾ ಗೀತೆ, ರಾಷ್ಟ್ರ ಗೀತೆ, ಸಮವಸ್ತ್ರ, ಲಾಗ್ ಪುಸ್ತಕಗಳ ಪರಿಶೀಲನೆ, ಪ್ರಾವೀಣ್ಯತಾ ಪದಕಗಳು, ಗಂಟುಗಳು, ಲ್ಯಾಷಿಂಗ್ಸ್, ದಿಕ್ಸೂಚಿಯ ಮಾಹಿತಿಯೊಂದಿಗೆ ಬೇಸ್ ಮಾಡಿ ಮೌಖಿಕವಾಗಿ ಪರೀಕ್ಷೆ ನಡೆಸಲಾಯಿತು. ನಂತರ ಅನ್‌ಲೈನ್ ಪರೀಕ್ಷೆಯ ಬಗ್ಗೆ ಮಾಹಿತಿ ನೀಡಲಾಯಿತು.

## ಯಾದಗಿರಿ

– ಜೂನ್ 01 ರಿಂದ 10ರ ವರೆಗೆ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಬೇಸಿಗೆ ಶಿಬಿರವನ್ನು ಸಂಘಟಿಸಲಾಯಿತು. 2568 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಜುಲೈ 31 ರಂದು ರಾಜ್ಯ ಜಂಟಿ ಕಾರ್ಯದರ್ಶಿ ಶ್ರೀಮತಿ ಕೃಪಾ ವಿಜಯ ಅವರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಾದಗಿರಿ ಇಲ್ಲಿಗೆ ಭೇಟಿ ನಿಡಿ ರೇಂಜರ್ಸ್ ಚಟುವಟಿಕೆಗಳನ್ನು ಪರಿಶೀಲಿಸಿ ಮಾರ್ಗದರ್ಶನ ಮಾಡಿದರು.

– ಜುಲೈ 31 ರಂದು ರಾಜ್ಯ ಜಂಟಿ ಕಾರ್ಯದರ್ಶಿ ಶ್ರೀಮತಿ ಕೃಪಾ ವಿಜಯ ಅವರು ಅಜೀಂ ಪ್ರೇಮ್‌ಜಿ ಫೌಂಡೇಶನ್ ಶಾಲೆಗೆ ಭೇಟ್ಟಿ ಮಾಡಿ ಸ್ಕೌಟ್ಸ್–ಗೈಡ್ಸ್‌ಗಳು ಇತರೆ ಮಕ್ಕಳಿಗೆ ಕಂಠವಸ್ತ್ರ ಹಾಕಿ ಸ್ಕೌಟ್–ಗೈಡ್ಸ್‌ಗೆ ಸೇರಲು ತಿಳಿಸಿದರು. ನಂತರ ಶಾಲಾ ಮುಖ್ಯಸ್ಥರಿಗೆ ವಾರ್ಷಿಕ ಕ್ರಿಯಾ ಯೋಜನೆ ಪುಸ್ತಕ ನೀಡಿದರು.



– ಜುಲೈ 31 ರಂದು ರಾಜ್ಯ ಜಂಟಿ ಕಾರ್ಯದರ್ಶಿ ಶ್ರೀಮತಿ ಕೃಪಾ ವಿಜಯ ಅವರು ಜಿಲ್ಲಾ ಮತ್ತು ಸ್ಥಳೀಯ ಪದಾಧಿಕಾರಿಗಳ ಭೇಟಿ ಮಾಡಿ ಚಟುವಟಿಕೆಗಳ ಕುರಿತು ಮಾರ್ಗದರ್ಶನ ಮಾಡಿದರು.



– ಜುಲೈ 31 ರಂದು ರಾಜ್ಯ ಜಂಟಿ ಕಾರ್ಯದರ್ಶಿ ಶ್ರೀಮತಿ ಕೃಪಾ ವಿಜಯ ಅವರು ಯಾದಗಿರಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ಚನ್ನಬಸಪ್ಪ ಮುಧೋಳ ಅವರನ್ನು ಭೇಟಿ ಮಾಡಿ ಸ್ಕೌಟ್ಸ್–ಗೈಡ್ ಚಟುವಟಿಕೆಗಳ ಕುರಿತು ಚರ್ಚಿಸಿ ಇಲಾಖೆಯಿಂದ ಸಹಾಯ–ಸಹಕಾರ ನೀಡಲು ಮನವಿ ಮಾಡಿಕೊಂಡರು. ಈ ಸಂದರ್ಭದಲ್ಲಿ ಜಿಲ್ಲಾ ಪದಾಧಿಕಾರಿಗಳು ಇದ್ದರು.

– ಜುಲೈ 01 ರಂದು ವರ್ಲ್ಡ್ ಸ್ಕಾರ್ಫ್ ಡೇ ಆಚರಣೆ ಕಾರ್ಯಕ್ರಮವನ್ನು ಯಾದಗಿರಿ ನಗರದ ಸಭಾ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಆಚರಿಸಲಾಯಿತು.

– ಆಗಸ್ಟ್ 01 ರಂದು ವರ್ಲ್ಡ್ ಸ್ಕಾರ್ಫ್ ಡೇ ಆಚರಣೆ ಕಾರ್ಯಕ್ರಮವನ್ನು ಯಾದಗಿರಿ ನಗರದ ಮಹಾತ್ಮಾ ಗಾಂಧಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಆಚರಿಸಲಾಯಿತು.

– ಆಗಸ್ಟ್ 01 ರಂದು ಮಧ್ಯಾಹ್ನ ಶಹಾಪುರ ಸ್ಥಳೀಯ ಸಂಸ್ಥೆ ಕಾರ್ಯಾಲಯಕ್ಕೆ ಭೇಟ್ಟಿ ನೀಡಿ ಸ್ಕೌಟ್ಸ್–ಗೈಡ್ಸ್ ಕಾರ್ಯ ಚಟುವಟಿಕೆಗಳ ಕುರಿತು ಪದಾಧಿಕಾರಿಗಳೊಂದಿಗೆ ಚರ್ಚೆ ನಡೆಸಲಾಯಿತು.

– ಆಗಸ್ಟ್ 01 ರಂದು ನೂತನವಾಗಿ ಶಹಾಪುರ ತಾಲ್ಲೂಕಿನ ತಹಸಿಲ್ದಾರ ಆಗಿ ಅಧಿಕಾರ ವಹಿಸಿಕೊಂಡ ಶ್ರೀ ಸಿದ್ಧಾರೂಢ ಬನ್ನಿಕೊಪ್ಪ ಅವರನ್ನು ಭೇಟಿ ಮಾಡಿ ಸಂಸ್ಥೆಯ ಕಂಟವಸ್ತ್ರ ಹಾಗೂ ಕ್ರಿಯಾ ಯೋಜನೆ ಪುಸ್ತಕ ನೀಡಿ ಸಂಸ್ಥೆಯ ಪರಿಚಯವನ್ನು ಶ್ರೀಮತಿ ಕೃಪಾ ವಿಜಯ, ರಾಜ್ಯ ಜಂಟಿ ಕಾರ್ಯದರ್ಶಿಯವರು ಮಾಡಿಕೊಟ್ಟರು.

– ಸ್ಥಳೀಯ ಸಂಸ್ಥೆ ಶಹಾಪುರ ಸಗರನಾಡಿನ ಪ್ರಸಿದ್ಧ ದೇವಸ್ಥಾನಗಳಲ್ಲಿ ಒಂದಾದಂತಹ ಶ್ರೀ ಸಂಗಮೇಶ್ವರ ದೇವಸ್ಥಾನ ದಿಗ್ಗಿಯ ಜಾತ್ರಾ ಮಹೋತ್ಸವ ಪ್ರಯುಕ್ತ ದೇವಸ್ಥಾನದಲ್ಲಿ ಆವರಣ ಸ್ವಚ್ಛತೆ ಹಾಗೂ ಪ್ರಸಾದ ವಿತರಣೆಯಲ್ಲಿ ರೋವರ್‌ಗಳಾದ ಭಾಗವಹಿಸಿದ್ದರು.

### ಸ್ಕೌಟ್ಸ್ ಮತ್ತು ಗೈಡ್ಸ್
## ಭಾತೃತ್ವ ಉಜ್ವಲಗೊಳಿಸುವ ರಾಕಿ ಹಬ್ಬ

ಸ್ಕೌಟ್ಸ್ ಮತ್ತು ಗೈಡ್ಸ್ ತಮ್ಮ ರಕ್ಷ ಕಟ್ಟುವ ಮುನ್ನ ಸ್ಕೌಟರ್ಸ್ ಮತ್ತು ಗೈಡರ್ಸ್‌ಗಳನ್ನು ಉದ್ದೇಶಿಸಿ ಇಬ್ಬರಿಗೂ ಭಾತೃತ್ವ ಅಂದರೆ ಸ್ಕೌಟ್ ಪ್ರತಿಜ್ಞೆ ಮತ್ತು ಲಾ ಬಗ್ಗೆ ಎಲ್ಲರಿಗೂ ಅದರ ಮಹತ್ವದ ಬಗ್ಗೆ ಮನನ ಮಾಡಿಸಬೇಕು.

ರಕ್ಷಾ ಬಂಧನ ರಾಕಿ ಹಬ್ಬ ಶ್ರಾವಣ ಹುಣ್ಣಿಮೆ ಎಂದೆಲ್ಲಾ ಹೆಸರಾಗಿ ಖ್ಯಾತವಾಗಿರುವ ಈ ಆಚರಣೆಯು ಸಹೋದರತ್ವದ ಪ್ರತೀಕವಾಗಿ ಆಚರಣೆಯಲ್ಲಿದೆ. ರಕ್ಷಾ ಎಂದರೆ ಸಂಸ್ಕ ೃತದಲ್ಲಿ ರಕ್ಷಣೆಯ ಗಂಟು, ಸಹೋದರ – ಸಹೋದರಿಯರ ನಡುವೆ ಬಾಂಧವ್ಯ, ವಿಶ್ವಾಸ ನಂಬಿಕೆ, ಪ್ರೀತಿ ಅಭಿಮಾನ ಮತ್ತು ರಕ್ಷಣೆ ನೀಡುವ ಪರಸ್ಪರ ಸ್ಪಂದಿಸುವ ಜವಾಬ್ದಾರಿಗಳ ಸಂಕೇತವಾಗಿದೆ. ಸಂಸ್ಥೆಯಲ್ಲಿ ಎಲ್ಲರನ್ನೂ ಒಗ್ಗೂಡಿಸಲು ಏಕತ್ವ ಸಾರಲು, ಸೌಹಾರ್ದ ಸಾಮಾಜಿಕ ವಾತಾವರಣ ನಿರ್ಮಿಸಲು ಸನಾತನ ಪರಂಪರೆಯಲ್ಲಿ ರೂಢಿಗೆ ಬಂದ ಆಚರಣೆ – ರಕ್ಷಾ ಬಂಧನ.

'ಹೊಸ ಆಯಾಮ : ಆಧುನಿಕ ಆಚರಣೆಯಲ್ಲಿ ರಾಕಿ ಹೊಸ ಆಯಾಮ ಪಡೆದಿದೆ. ಬಣ್ಣ ಬಣ್ಣದ ರಾಕಿಗಳು ಪಟ್ರೋಲ್ ವ್ಯವಸ್ಥೆಯಲ್ಲಿ ಲಭ್ಯವಿದೆ. ಸ್ಕೌಟ್ಸ್–ಗೈಡ್ಸ್‌ಗಳ ಬಾಂಧವ್ಯವನ್ನು ಮೀರಿ ಕುಟುಂಬ, ಸ್ನೇಹಿತರು ಮತ್ತು ಹಿರಿಕರು ಪರಸ್ಪರ ರಾಕಿ ಕಟ್ಟುವ ಕಟ್ಟಿಸಿಕೊಳ್ಳುವ ಆಚರಣೆಯಲ್ಲಿದೆ. ಹಾಗಾಗಿ ಇದು ಬಾಂಧವ್ಯದ ಪ್ರತೀಕವೇ ಆಗಿದೆ. ಕೆಲವು ರಾಕಿಯಲ್ಲಿ ಸ್ಕೌಟ್ಸ್–ಗೈಡ್ಸ್ ನಡುವೆ ಮಿತ್ರತ್ವ ವೃದ್ಧಿಗೆ ರಾಕಿ ಸಮಾರಂಭ ಆಚರಿಸಲಾಗುತ್ತದೆ.

1905ರಲ್ಲಿ ಬಂಗಾಳದ ವಿಭಜನೆಯಾಗುವ ಕಾಲದಲ್ಲಿ ಖ್ಯಾತ ರವೀಂದ್ರನಾಥ ಟಾಗೂರ್ ಅವರು ಹಿಂದೂ ಮತ್ತು ಮುಸ್ಲಿಂ ಸಮುದಾಯದ ನಡುವೆ ಒಗ್ಗಟ್ಟು ಉಂಟು ಮಾಡಲು ಸಾಮೂಹಿಕ ರಕ್ಷಾಬಂಧನ ಆಚರಿಸಿದ್ದರಂತೆ.

ರಾಕಿ ಹಬ್ಬವನ್ನು ನಮ್ಮ ಸ್ಕೌಟ್ಸ್–ಗೈಡ್ಸ್‌ಗಳು ಎಲ್ಲರೂ ತಮ್ಮ ತಮ್ಮ ಶಾಲೆಯಲ್ಲಿ ಇದರ ಮಹತ್ವವನ್ನು ತಿಳಿಸಿ, ಅವರನ್ನು ಸಮಾಜಮುಖಿಯಲ್ಲಿ ತೊಡಗುವಂತೆ ಮಾಡಬೇಕು. ಈ ಪತ್ರದ ಸಾರಾಂಶವನ್ನು ನಿಮಗೆ ಹಾಗೂ ಸಂಸ್ಥೆಯಲ್ಲಿ ಎಲ್ಲರಿಗೂ ಇದರ ಅನುಭವಕ್ಕೆ ಬರಲಿ ಎಂದು ಆಶಿಸುವೆ.

**ರಾಮಚಂದ್ರರಾವ್ ಕಾಳೆ**
ರಾಜ್ಯ ಕೇಂದ್ರ ಸ್ಥಾನಿಕ ಆಯುಕ್ತ (ಕಬ್)

# ಶ್ರದ್ಧಾಂಜಲಿ



ಲಾಲ್ ಬಹದ್ದೂರ್ ಶಾಸ್ತ್ರಿ ಸ್ಕೌಟ್ ಗುಂಪಿನ ಸಂಸ್ಥೆಯ ಸದಸ್ಯರಾಗಿದ್ದ **ಶ್ರೀ ಎನ್. ರಾಜಶೇಖರ್ ರವರು** ಆಗಸ್ಟ್ 3, 2025ರಂದು ನಿಧನಹೊಂದಿದ್ದಾರೆ. ಶ್ರೀಯುತರು ದಿ ಹಿಂದು ದಿನಪತ್ರಿಕೆಯ ಕಛೇರಿಯಲ್ಲಿ ವ್ಯವಸ್ಥಾಪಕರಾಗಿ ನಿವೃತ್ತಿ ಹೊಂದಿದ್ದರು. ಶ್ರೀಯುತರು ತಮ್ಮ ಪತ್ರಿಕೆಯಲ್ಲಿ ಸ್ಕೌಟ್-ಗೈಡ್ ಸಂಬಂಧಪಟ್ಟ ವಿಷಯಗಳಿಗೆ ಆದ್ಯತೆ ನೀಡಿ ಪ್ರೋತ್ಸಾಹಿಸುತ್ತಿದ್ದರು. ಕರ್ನಾಟಕದ್ಯಾಂತ ಇರುವ ದಿ ಹಿಂದು ಪತ್ರಿಕೆಯ ಅತಿಥಿ ಗೃಹಗಳಲ್ಲಿ ಉಳಿದುಕೊಳ್ಳಲು ಸ್ಕೌಟ್-ಗೈಡ್‌ಗಳಿಗೆ ಸಹಾಯ ಮಾಡುತ್ತಿದ್ದರು. ನಿವೃತ್ತಿಯ ನಂತರ ಸ್ಕೌಟ್-ಗೈಡ್ ಹೊರಾಂಗಣ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.



ದಿ|| ಬಿ. ಈಶ್ವರಪ್ಪ, ನಿವೃತ್ತ ಎ.ಎಸ್.ಓ.ಸಿ ಇವರ ಧರ್ಮಪತ್ನಿ **ಶ್ರೀಮತಿ ಶರಣಮ್ಮನವರು** (ದಿ|| ಕೊಂಡಜ್ಜಿ ಬಸಪ್ಪನವರ ಅಣ್ಣನ ಮಗಳು) ಜುಲೈ 20, 2025 ರಂದು ನಿಧನರಾದರು. ಮೃತರ ಪತಿಯವರು ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳಲ್ಲಿ ರಾಜ್ಯ ಸಹಾಯಕ ಸಂಘಟನಾ ಸ್ಕೌಟ್ ಆಯುಕ್ತರಾಗಿಯೂ, ಕೊಂಡಜ್ಜಿ ಬಸಪ್ಪ ರಾಜ್ಯ ತರಬೇತಿ ಕೇಂದ್ರ, ಕೊಂಡಜ್ಜಿಯಲ್ಲಿ ವಾರ್ಡನ್ ಆಗಿಯೂ ಸುಮಾರು 35 ವರ್ಷಗಳಿಗೂ ಹೆಚ್ಚು ಕಾಲ ತಮ್ಮ ನಿಸ್ವಾರ್ಥ ಸೇವೆ, ಕರ್ತವ್ಯ ಪಾಲನೆ ಹಾಗೂ ಪ್ರಾಮಾಣಿಕರಾಗಿ ಸೇವೆ ಸಲ್ಲಿಸಿರುತ್ತಾರೆ. ಮೃತರಿಗೆ ಮೂರು ಜನ ಹೆಣ್ಣು ಮಕ್ಕಳು ಹಾಗೂ ನಾಲ್ಕು ಜನ ಗಂಡು ಮಕ್ಕಳಿದ್ದು, ಇವರ ಕಿರಿಯ ಪುತ್ರ ಶ್ರೀ ಪಾಟೀಲ್ ಜಿ.ಬಿ.ಸಿ ಇವರು ವಿಜಯನಗರ ಜಿಲ್ಲಾ ಸಂಸ್ಥೆಯಲ್ಲಿ ಪ್ರಸ್ತುತ ಎಸ್.ಜಿ.ವಿ. ಆಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಮೃತರು ಅಪಾರ ಬಂಧುಬಳಗವನ್ನು ಅಗಲಿರುತ್ತಾರೆ.



ಶ್ರೀ ಪ್ರಹ್ಲಾದ ಬಡಿಗೇರ, ಜಿಲ್ಲಾ ಖಜಾಂಚಿಗಳು, ಕೊಪ್ಪಳ ಇವರ ಧರ್ಮಪತ್ನಿ **ಶ್ರೀಮತಿ ಉಷಾರಾಣಿ** ಎಸ್.ಎಫ್.ಎಸ್ ಶಾಲೆ ಕೊಪ್ಪಳದಲ್ಲಿ ಶಿಕ್ಷಕಿಯಾಗಿದ್ದ. ಇವರು ಆಗಸ್ಟ್ 6, 2025ರಂದು ನಿಧನರಾದರು. ಇವರಿಗೆ 49 ವಯಸ್ಸಾಗಿತ್ತು. 16 ವರ್ಷಗಳಿಂದ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದು ಸ್ಕೌಟಿಂಗ್ ಚಟುವಟಿಕೆಗಳಲ್ಲಿ ಭಾಗವಹಿಸಲು ತಮ್ಮ ಪತಿಯವರಿಗೆ ಪ್ರೋತ್ಸಾಹ ನೀಡುತ್ತಿದ್ದರು. ಇವರು ತಮ್ಮ ಪತಿ ಮತ್ತು ಒಬ್ಬ ಮಗ ಒಬ್ಬಳು ಮಗಳು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.



ದಾವಣಗೆರೆ ಜಿಲ್ಲೆಯ ತೋಳಹುಣಸೆ ಪಿ.ಎಸ್.ಎಸ್.ಇ ಶಾಲೆಯಲ್ಲಿ 7ನೇ ತರಗತಿಯಲ್ಲಿ ಓದುತ್ತಿದ್ದ ಸ್ಕೌಟ್ ವಿದ್ಯಾರ್ಥಿ **ಕು. ಶ್ರವಂತ್ ಬಿ. ನಾಯ್ಕ್** ಆಗಸ್ಟ್ 14, 2025ರಂದು ನಿಧನರಾಗಿದ್ದಾರೆ. ಈತನಿಗೆ 13 ವರ್ಷ ವಯಸ್ಸಾಗಿತ್ತು. ಈತನು ಸ್ಕೌಟ್‌ನಲ್ಲಿ ದ್ವಿತೀಯ ಸೋಪಾನ ಮುಗಿಸಿದ್ದನು.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರುಗಳ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

– ರಾಜ್ಯ ಕಾರ್ಯದರ್ಶಿ



**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು

ಅರಣ್ಯ ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ
ಹಾಗೂ
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

# ನಾಡಿನ ಸಮಸ್ತ ಜನತೆಗೆ ಗೌರಿ-ಗಣೇಶ ಹಬ್ಬದ ಶುಭಾಶಯಗಳು



**ಶ್ರೀ ಡಿ.ಕೆ.ಶಿವಕುಮಾರ್**
ಮಾನ್ಯ ಉಪ ಮುಖ್ಯಮಂತ್ರಿಗಳು

## ಕರ್ನಾಟಕ ಸರ್ಕಾರವು ಪಿಒಪಿ ಗಣೇಶ ಮೂರ್ತಿಗಳನ್ನು ತಯಾರಿಸುವುದು ಸಾಗಿಸುವುದು, ಮಾರಾಟ ಹಾಗೂ ವಿಸರ್ಜಿಸುವುದನ್ನು **ಕಡ್ಡಾಯವಾಗಿ ನಿಷೇದಿಸಿದೆ.**



X ಪಿಒಪಿ ಗಣೇಶ ಮೂರ್ತಿ



✓ ಮಣ್ಣಿನ ಗಣೇಶ ಮೂರ್ತಿ

## ಪರಿಸರ ಸಂರಕ್ಷಣೆ ಹಾಗೂ ನಮ್ಮ-ನಿಮ್ಮೆಲ್ಲರ ಸುರಕ್ಷತೆಗಾಗಿ **ಮಣ್ಣಿನ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಸಂಭ್ರಮಿಸೋಣ**



**ಶ್ರೀ ಈಶ್ವರ್ ಬಿ. ಖಂಡ್ರೆ**
ಮಾನ್ಯ ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು
ಕರ್ನಾಟಕ ಸರ್ಕಾರ



**ಶ್ರೀ ಪಿ. ಎಂ. ನರೇಂದ್ರಸ್ವಾಮಿ**
ಮಾನ್ಯ ಅಧ್ಯಕ್ಷರು
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

**ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**
#49, "ಪರಿಸರ ಭವನ" 1 ರಿಂದ 5ನೇ ಮಹಡಿ, ಚರ್ಚ್ ಸ್ಟ್ರೀಟ್, ಬೆಂಗಳೂರು – 560 001
ದೂರವಾಣಿ: 25581383, 25589112, 25586520, ಫ್ಯಾಕ್ಸ್: 080-25586321
ಇ–ಮೇಲ್: ho@kspcb.gov.in, ವೆಬ್‌ಸೈಟ್: https://kspcb.karnataka.gov.in

RNI No: 13348/1959. Title Code: KARBIL00285. Posted at Periodical Rate Rs. 2/-
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 40)




If not delivered, please return to :
THE EDITOR, Karnataka Scout & Guide
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
www.bsgkarnataka.org

Published, Editor & Owened by: K. Gangappa Gowda belongs to: Bharat Scouts and Guides, Karnataka, No.39, Shanthi Gruha Palace Rd, Bengaluru 560 001. Published at: Bharat Scouts and Guides, Karnataka, No.39, Shanthi Gruha Palace Road, Bengaluru-560 001
Printed by: L. Lingappa at Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Road, Bengaluru-26